ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 4 | ಜನವರಿ 18-24, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




ಲಾಲ್ ಸಲಾಂ
ಕಾಂ. ಗಣೇಶ ಶಂಕರ ವಿದ್ಯಾರ್ಥಿ



ರೈತ - ಕಾರ್ಮಿಕರ ಪರ್ಯಾಯ ಗಣತಂತ್ರ ಪೆರೇಡ್ ನಡೆಯುತ್ತದೆ





ಕೃಷಿ ಕಾಯ್ದೆಗಳ ಕುರಿತು ಏಕಪಕ್ಷೀಯ ಸುಪ್ರೀಂ ಆದೇಶ



ಎಂಗೆಲ್ಸ್ ಕೃತಿಗಳನ್ನು ಯಾಕೆ ಮತ್ತು ಹೇಗೆ ಓದಬೇಕು?

ಜನವರಿ 18: ರೈತ ಮಹಿಳೆಯರ ದಿನ
ಎಲ್ಲೆಲ್ಲೂ ಇದ್ದು, ಎಲ್ಲೂ ಕಾಣದವರು



ರೈತರ ಗಣತಂತ್ರ ದಿನದ ಪರೇಡ್ ನಡೆಯುತ್ತದೆ, ಕಾಯ್ದೆಗಳ ರದ್ಧತಿಯ ಹೋರಾಟ ಮುಂದುವರೆಯುತ್ತದೆ -ಸಂಯುಕ್ತ ಕಿಸಾನ್ ಮೋರ್ಚಾ

ಸುಪ್ರಿಂ ಕೋರ್ಟ್ ಜನವರಿ 12ರಂದು ಮೂರು ಕೃಷಿ ಕಾಯ್ದೆಗಳ ಜಾರಿಯನ್ನು ತಾತ್ಕಾಲಿಕವಾಗಿ ಅಮಾನತು ಮಾಡುವ ಮತ್ತು ಒಂದು ಸಮಿತಿಯನ್ನು ರಚಿಸುವ ಆದೇಶವನ್ನು ಕೊಟ್ಟಿದೆ, ಆದರೆ ರೈತರ ಹೋರಾಟ ಶಾಂತಿಯುತವಾಗಿ ಮುಂದುವರೆಯುತ್ತದೆ. ಜನವರಿ 13, 18 ಮತ್ತು 23ರ ಕಾರ್ಯಾಚರಣೆಗಳು ನಡೆಯುತ್ತವೆ, ಜನವರಿ 26 ರ ರೈತರ ಪರೇಡ್ ಕೂಡ ಶಾಂತಿಯುತವಾಗಿ ನಡೆಯುತ್ತದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಹೇಳಿವೆ.

ಒಂದು ಮಧ್ಯಂತರ ಕ್ರಮವಾಗಿ ಮೂರು ಕಾಯ್ದೆಗಳ ಜಾರಿಯನ್ನು ಅಮಾನತಿನಲ್ಲಿಟ್ಟಿರುವುದು ಸ್ವಾಗತಾರ್ಹವಾದರೂ, ರೈತ ಸಂಘಟನೆಗಳು ಇದನ್ನು ಕೇಳಿಲ್ಲ, ಏಕೆಂದರೆ ಇದೇನೂ ಪರಿಹಾರವಲ್ಲ, ಜಾರಿಯನ್ನು ಯಾವಾಗ ಬೇಕಾದರೂ ಮತ್ತೆ ಆರಂಭಿಸಬಹುದು. ಇವನ್ನು ರದ್ದು ಮಾಡಲೇಬೇಕು, ಏಕೆಂದರೆ ರೈತರು ಮತ್ತು ಭಾರತದ ಜನತೆ ಇದಕ್ಕೆ ವಿರುದ್ಧವಾಗಿದ್ದಾರೆ ಎಂಬುದನ್ನು ಸರಕಾರ ಅರಿಯಬೇಕು ಎಂದು ರೈತ ಸಂಘಟನೆಗಳು ಅಭಿಪ್ರಾಯ ಪಟ್ಟಿವೆ.

ಸುಪ್ರಿಂ ಕೋರ್ಟ್ ತಾನಾಗಿಯೆ ಒಂದು ಸಮಿತಿಯನ್ನು ರಚಿಸಿದೆ. ಈ ಬಗ್ಗೆ ಹೇಳಲು ಹೆಚ್ಚೇನೂ ಇಲ್ಲ, ತಾವು ಈ ಸಮಿತಿಯ ಕಲಾಪಗಳಲ್ಲಿ ಭಾಗವಹಿಸುವುದಿಲ್ಲ ಎಂದು ಈ ಮೊದಲು ಹೇಳಿರುವುದನ್ನು ರೈತರ ಸಂಘಟನೆಗಳು ಪುನರುಚ್ಚರಿಸಿವೆ. ಅಲ್ಲದೆ, ಈ ಸಮಿತಿಯ ಸದಸ್ಯರ ಹೆಸರುಗಳೇ ರೈತ ಸಂಘಟನೆಗಳ ಒಂದು ಸಂದೇಹವನ್ನು ಪುಷ್ಟೀಕರಿಸಿವೆ ಎಂದು ಅವು ಹೇಳಿವೆ. ಸಮಿತಿಯ ರಚನೆಯಲ್ಲೂ ಸುಪ್ರಿಂ ಕೋರ್ಟನ್ನು ವಿವಿಧ ಶಕ್ತಿಗಳು ದಾರಿ ತಪ್ಪಿಸುತ್ತಿವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಈ ಸಮಿತಿಯ ಸದಸ್ಯರೆಲ್ಲರೂ ಈ ಮೂರು ಕಾಯ್ದೆಗಳ ಬೆಂಬಲಿಗರು, ಅವನ್ನು ಸಕ್ರಿಯವಾಗಿ ಪ್ರತಿಪಾದಿಸುತ್ತಿರುವವರು. ಈ ಮೊದಲು ಸರಕಾರವೇ ಇಂತಹ ಒಂದು ಸಮಿತಿಯ ಪ್ರಸ್ತಾವವನ್ನು ಮುಂದಿಟ್ಟಾಗ ರೈತ ಸಂಘಟನೆಗಳು ಅದನ್ನು ತಿರಸ್ಕರಿಸಿದವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ರೈತರ ಸಂವಾದ ಇರುವುದು ಒಂದು ಚುನಾಯಿತ ಸರಕಾರದೊಂದಿಗೆ, ಅದರ ಧೋರಣೆಯ ದಿಕ್ಕಿನ ಬಗ್ಗೆ ಮತ್ತು ಅದರಿಂದಾಗಿ ಬರುತ್ತಿರುವ ಕಾಯ್ದೆಗಳ ಬಗ್ಗೆ, ಎಂದು ರೈತ ಸಂಘಟನೆಗಳು ಹೇಳಿವೆ.

ಈ ಮೂರು ಕಾಯ್ದೆಗಳು ಕೃಷಿ ಉತ್ಪಾದನೆ, ಸಂಸ್ಕರಣೆ ಮತ್ತು ಮಾರುಕಟ್ಟೆಗಳ ಮೇಲೆ ಕಾರ್ಪೊರೇಟ್ ಹತೋಟಿಗೆ ದಾರಿ ಮಾಡಿಕೊಡುತ್ತವೆ, ಇದರಿಂದಾಗಿ ಕೃಷಿ ಲಾಗುವಾಡುಗಳ ವೆಚ್ಚಗಳು ಹೆಚ್ಚುತ್ತವೆ, ರೈತರ ಸಾಲದ ಹೊರೆಗಳು ಹೆಚ್ಚುತ್ತವೆ, ಬೆಳೆಗಳ ಬೆಲೆಗಳು ಇಳಿಯುತ್ತವೆ, ರೈತರ ನಷ್ಟಗಳು ಹೆಚ್ಚುತ್ತವೆ, ಸರಕಾರದ ಖರೀದಿ ಇಳಿಯುತ್ತದೆ, ಇದು ಸಾರ್ವಜನಕ ವಿತರಣಾ ವ್ಯವಸ್ಥೆಯನ್ನು ಕೊನೆಗೊಳಿಸುತ್ತದೆ, ಜನಗಳು ಆಹಾರಕ್ಕಾಗಿ ಮಾಡಬೇಕಾದ ವೆಚ್ಚಗಳನ್ನು ಹೆಚ್ಚಿಸುತ್ತದೆ, ರೈತರ ಮತ್ತು ಕೃಷಿ ಕಾರ್ಮಿಕರ ಆತ್ಮಹತ್ಯೆಗಳು ಹೆಚ್ಚುತ್ತವೆ, ಹಸಿವಿನಿಂದ ಸಾವುಗಳು ಹೆಚ್ಚುತ್ತವೆ, ಸಾಲಗಳನ್ನು ತೀರಿಸಲು ಜಮೀನಿನಿಂದ ಒಕ್ಕಲೆಬ್ಬಿಸುವುದು ಹೆಚ್ಚುತ್ತದೆ ಎಂಬುದೆಲ್ಲವನ್ನೂ ರೈತರು ಕೇಂದ್ರ ಸರಕಾರಕ್ಕೆ ವಿವರವಾಗಿ ತಿಳಿಸಿದ್ದಾರೆ. ಸರಕಾರ ಈ ಕಟು ಸಂಗತಿಗಳನ್ನೆಲ್ಲ ಜನಗಳಿಂದ ಮತ್ತು ನ್ಯಾಯಾಲಯಗಳಿಂದ ಮುಚ್ಚಿಟ್ಟಿದೆ ಎಂದು ಈ ಹೋರಾಟದಲ್ಲಿ ತೊಡಗಿರುವ ರೈತ ಸಂಘಟನೆಗಳು ಹೇಳಿವೆ

ರೈತರ ಗಣತಂತ್ರ ದಿನದ ಪರೇಡ್ ಬಗ್ಗೆಯೂ ಸರಕಾರ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದೆ. ತಾವು ಪ್ರಕಟಿಸಿರುವ ಕಾರ್ಯಕ್ರಮ ದಿಲ್ಲಿಯಲ್ಲಿ ಮತ್ತು ದೇಶಾದ್ಯಂತ ಶಾಂತಿಯುತವಾಗಿ ನಡೆಯುತ್ತದೆ ಎಂದು ಹೇಳಿರುವ ರೈತ ಸಂಘಟನೆಗಳು ಅದಕ್ಕೆ ಮೊದಲು ಜನವರಿ 13 ರಂದು ಕಾಯ್ದೆಗಳ ಪ್ರತಿಗಳನ್ನು ಸುಡುವ ಕಾರ್ಯಕ್ರಮ, 18 ರಂದು ರೈತ ಮಹಿಳಾ ದಿನಾಚರಣೆ, ಜನವರಿ 23 ರಂದು ಆಝಾದ್ ಹಿಂದ್ ರೈತ ದಿನಾಚರಣೆ ಮತ್ತು ರಾಜ್ಯಗಳಲ್ಲಿ ಮಹಾಪಡಾವ್‌ಗಳ ಕಾರ್ಯಕ್ರಮಗಳೂ ಈ ಮೊದಲು ಪ್ರಕಟಿಸಿದಂತೆಯೇ ನಡೆಯುತ್ತವೆ ಎಂದು ಹೇಳಿವೆ.

3 ದಿನಗಳ ಮಹಾಪಡಾವ್, ಕಿಸಾನ್-ಮಜ್ದೂರ್ ಪರೇಡ್‌ಗೆ ಭರದ ಸಿದ್ಧತೆಗಳು–ಎಐಕೆಎಸ್

ಪಶ್ಚಿಮ ಬಂಗಾಲದಲ್ಲಿ ಜನವರಿ 20 ರಿಂದ 22ರ ವರೆಗೆ, ಮಹಾರಾಷ್ಟ್ರದಲ್ಲಿ 24 ರಿಂದ 26 ರ ವರೆಗೆ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಕೇರಳದಲ್ಲಿ 23 ರಿಂದ 25ರ ವರೆಗೆ ಹಾಗೂ ಒಡಿಶಾದಲ್ಲಿ ಜನವರಿ 23ರಂದು ನಡೆಯಲಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್)ಮುಖಮಡರು ಜನವರಿ 14ರಂದು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ.

ಜನವರಿ 26 ರಂದು ನವದೆಹಲಿಯಲ್ಲಿ ಅಧಿಕೃತ ಕಾರ್ಯಕ್ರಮದ ನಂತರ ರಾಷ್ಟ್ರೀಯ ಬಾವುಟದೊಮದಿಗೆ ಕಿಸಾನ್ ಪರೇಡ್ ಮತ್ತು ಎಲ್ಲ ಜಿಲ್ಲೆಗಳಲ್ಲಿ ಮಜ್ದೂರ್–ಕಿಸಾನ್ ಪರೇಡ್‌ಗಳು ನಡೆಯಲಿವೆ. ಕಾರ್ಮಿಕ ಸಂಘಗಳು ಇದರಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿರ್ಧರಿಸಿವೆ. ಇದು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಅತಿ ದೊಡ್ಡ ಪ್ರತಿಭಟನಾ ಪ್ರದರ್ಶನವಾಗುವ ನಿರೀಕ್ಷೆ ಇದೆ ಈ ಕಾರ್ಯಾಚರಣೆಗಳು ಬಿಜೆಪಿಯ ಮತ್ತು ಪ್ರಧಾನ ಮಂತ್ರಿಗಳ ಸುಳ್ಳುಗಳಿಗೆ ತಕ್ಕ ಉತ್ತರ ನೀಡುತ್ತವೆ ಎಂದು ಎಐಕೆಎಸ್ ಮುಖಂಡರು ಹೇಳಿದ್ದಾರೆ.

ಜನವರಿ 18ರಂದು ಹಳ್ಳಿ, ಬ್ಲಾಕ್ ಮತ್ತು ಜಿಲ್ಲಾ ಮಟ್ಟಗಳಲ್ಲಿ ಮೆರವಣಿಗೆಗಳೊಂದಿಗೆ ಮಹಿಳಾ ಕಿಸಾನ್ ದಿನವನ್ನು ಆಚರಿಸಲಾಗುವುದು. ಪ್ರತಿಭಟನೆಗಳಲ್ಲಿ ಮಹಿಳೆಯರು ಮತ್ತು ವಯಸ್ಸಾದವರನ್ನು ಮನೆಗೆ ಹಿಂದಿರುಗುವಂತೆ ಹೇಳಿರುವುದು ಬಹಳಷ್ಟು ಟೀಕೆಗೆ ಒಳಗಾಗಿದೆ. ಇದು ಮಹಿಳಾ ಸಮಾನತೆ ಮತ್ತು ಸ್ವಾತಂತ್ರ್ಯದ ಮೇಲಿನ ದಾಳಿ, ಇದನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಬೇಕು. ಈ ದಿನ ಈ ಅಂಶವನ್ನು, ಕೃಷಿಯಲ್ಲಿ ಮತ್ತು ಪ್ರಜಾಪ್ರಭುತ್ವ ಹಾಗೂ ದೇಶಪ್ರೇಮದ ಹೋರಾಟಗಳಲ್ಲಿ ಮಹಿಳೆಯರ ಪಾತ್ರವನ್ನು ಎತ್ತಿ ತೋರುವ ಘೋಷಣೆಗಳು ಈ ಮೆರವಣಿಗೆಗಳಲ್ಲಿ ಮೊಳಗುತ್ತವೆ ಎಂದು ಎಐಕೆಎಸ್ ಹೇಳಿದೆ.

ಮೋದಿ ಸರಕಾರ ಸುಪ್ರಿಂ ಕೋರ್ಟ್ ಆದೇಶವನ್ನು ಬಳಸಿಕೊಂಡು ರೈತರ ಬೇಡಿಕೆಗಳನ್ನು ಕುರಿತಂತೆ ತನ್ನ ಹೊಣೆಯಿಂದ ಜಾರಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಎಐಕೆಎಸ್ ಖಂಡಿಸಿದೆ. ರೈತರು ಕಾರ್ಮಿಕ ವರ್ಗದ ಬೆಂಬಲದೊಂದಿಗೆ ಈ ಹೋರಾಟವನ್ನು ಇನ್ನಷ್ಟು ಶಕ್ತಿಗೂಡಿಸಿಕೊಂಡು ತೀವ್ರಗೊಳಿಸಲಾಗುತ್ತದೆ. ಜನವರಿ 13ರಂದು ಲೊಹ್ರಿ ಮತ್ತು ಮರುದಿನ ಮಕರ ಸಂಕ್ರಾಂತಿಯಂದು ರೈತ ವಿರೋಧಿ ಕಾಯ್ದೆಗಳ ಪ್ರತಿಗಳನ್ನು ಸುಡುವ ಮೂಲಕ ಈ ದೃಢನಿರ್ಧಾರ ವ್ಯಕ್ತಗೊಂಡಿದೆ.

ಈ ರೈತ ಹೋರಾಟ ಪಂಜಾಬ್, ಹರ್ಯಾಣದಂತಹ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದೆ, ನಿರ್ದಿಷ್ಟವಾಗಿ ಕೇರಳ, ಕರ್ನಾಟಕದಲ್ಲಿ ಪ್ರತಿಭಟನೆಗಳೇ ಇಲ್ಲ ಎಂದು ಎಂದು ಹೇಳಿ ಮೋದಿ ಸರಕಾರ ಸುಪ್ರಿಂ ಕೋರ್ಟನ್ನು ದಾರಿ ತ್ರಪಿಸಲು ಪ್ರಯತ್ನಿಸಿದೆ. ಆದರೆಕೇರಳದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಡಿಸೆಂಬರ್ 14 ರಿಂದ ಪ್ರತಿದಿನ ಧರಣಿಗಳು ನಡೆದಿವೆ, ರಾಜ್ಯ ವಿಧಾನಸಭೆ ಈ ಕಾಯ್ದೆಗಳನ್ನು ರದ್ದು ಮಾಡಬೇಕೆಂದು ಆಗ್ರಹಿಸಿ ಒಮ್ಮತದ ನಿರ್ಣಯ ಅಂಗೀಕರಿಸಿದೆ, ಅಲ್ಲಿದ್ದ ಬಿಜೆಪಿ ಶಾಸಕರೂ ಅದನ್ನು ವಿರೋಧಿಸಿಲ್ಲ. ಕರ್ನಾಟಕದಲ್ಲಿ ಡಿಸೆಂಬರ್16ರಿಂದ ಎಲ್ಲ ಜಿಲ್ಲೆಗಳಲ್ಲಿ ಪ್ರತಿದಿನ ಧರಣಿ ಸತ್ಯಾಗ್ರಹ ನಡೆದಿದೆ, ನವಂಬರ್ 28ರಂದು ಸಂಪೂರ್ಣ ಬಂದ್ ನಡೆದಿದೆ. ಪಶ್ಚಿಮ ಬಂಗಾಲದಲ್ಲಿ 20ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಜಾಥಗಳು ನಡೆದಿವೆ, ಇದೇ ರೀತಿ ತ್ರಿಪುರ, ತಮಿಳುನಾಡುಗಳಲ್ಲಿಯೂ, ಬಿಹಾರ, ಆಂಧ್ರಪ್ರದೇಶ, ತೆಲಂಗಾಣದಲ್ಲಿಯೂ ಪ್ರತಿಭಟನೆಗಳು ನಡೆದಿವೆ.

ಅಲ್ಲದೆ ಈಗಾಗಲೇ ರಾಜಸ್ತಾನ, ಒಡಿಶ, ಆಂಧ್ರ, ತೆಲಂಗಾಣ, ಉತ್ತರಾಖಂಡ, ಛತ್ತೀಸ್‌ಗಡ, ಮಧ್ಯಪ್ರದೇಶ, ಕರ್ನಾಟಕ ಮತ್ತು ಬಂಗಾಲದಿಂದ ಸಾವಿರಾರು ರೈತರು, ಕೃಷಿ ಕೂಲಿಕಾರರು, ಆದಿವಾಸಿಗಳು, ಭಾಗ ಬೆಳಗಾಲು ದಿಲ್ಲಿಯ ಗಡಿಗಳಲ್ಲಿ ಪ್ರತಿಭಟನೆಗಳ ಭಾಗವಾಗಿದ್ದಾರೆ ಎನ್ನುತ್ತ ಮೋದಿ ಸರಕಾರ ಹರಡಿಸುತ್ತಿರುವ ಈ ಸುಳ್ಳನ್ನು ಎಐಕೆಎಸ್ ಬಯಲಿಗೆಳೆದಿದೆ.

ತ್ರಿಪಕ್ಷೀಯ ಸಮಾಲೋಚನೆಗಳನ್ನು ಪ್ರಹಸನಗಳ ಮಟ್ಟಕ್ಕೆ ಇಳಿಸಲಾಗುತ್ತಿದೆ -ಕಾರ್ಮಿಕ ಮಂತ್ರಿಗಳಿಗೆ ಜಂಟಿ ವೇದಿಕೆಯ ಮತ್ತೊಂದು ಪತ್ರ

ಡಿಸೆಂಬರಿನಲ್ಲಿ ಮೋದಿ ಸರಕಾರದ ಕಾರ್ಮಿಕ ಮಂತ್ರಾಲಯ ಕಾರ್ಮಿಕ ಸಂಹಿತೆಗಳ ಅಡಿಯಲ್ಲಿ ನಿಯಮಾವಳಿಗಳನ್ನು ರೂಪಿಸಲು ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಒಂದು ದಿನದ ವೀಡಿಯೋ ಸಮ್ಮೇಳನಕ್ಕೆ ಆಹ್ವಾನವನ್ನು ನೀಡಿತ್ತು.

ಇದು, ಎಲ್ಲ ಸಂಸದೀಯ ವಿಧಿ–ವಿಧಾನಗಳನ್ನು ಉಲ್ಲಂಘಿಸಿ, ಯಾವುದೇ ಚರ್ಚೆಗೆ ಅವಕಾಶ ನೀಡದೆ ಸಮಸ್ತ ವಿಪಕ್ಷಗಳ ಗೈರುಹಾಜರಿಯಲ್ಲಿ ಅತುರದಲ್ಲಿ ಪಾಸು ಕಾರ್ಮಿಕ ಸಂಹಿತೆಗಳು ಎಂಬುದನ್ನು ಮಾಡಿಸಿಕೊಂಡ ಮೇಲೆ ಈಗ ಅದೇ ರೀತಿಯಲ್ಲಿ ಅವುಗಳ ಅಡಿಯಲ್ಲಿನ ನಿಯಮಾವಳಿಗಳನ್ನು ರೂಪಿಸುವ ಕೆಲಸವನ್ನು ಚರ್ಚೆಯಿಲ್ಲದೆ ಪೂರೈಸುವ ಹುನ್ನಾರ, ತ್ರಿಪಕ್ಷೀಯ ಸಮಾಲೋಚನೆಯನ್ನು ಪ್ರಹಸನದ ಮಟ್ಟಕ್ಕೆ ಇಳಿಸುವ ಪ್ರಯತ್ನ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಇದರಲ್ಲಿ ಭಾಗವಹಿಸಲು ನಿರಾಕರಿಸಿತ್ತು. 20ಕ್ಕೂ ಹೆಚ್ಚು ಭಾಗೀದಾರರಿರುವ, 50 ಕೋಟಿಗೂ ಹೆಚ್ಚು ಕಾರ್ಮಿಕರನ್ನು ಬಾಧಿಸುವ ಪ್ರಶ್ನೆಗಳ ಮೇಲೆ ಕೇವಲ ಒಂದು ದಿನದ ವೀಡಿಯೋ ಸಮ್ಮೇಳನ ನಾಮಮಾತ್ರಕ್ಕೆ, ತ್ರಿಪಕ್ಷೀಯ ಸಮಾಲೋಚನೆಗಳನನು ನಡೆಸಲಾಗಿದೆ ಎಂದು ದಾಖಲಿಸುವುದಕ್ಕೆ ಮಾತ್ರ ಎಂದು ಕಾರ್ಮಿಕ ಬಲವಾಗಿ ಟೀಕಿಸಿದ್ದವು.

ಆದರೂ ಈಗ ಜನವರಿ ತಿಂಗಳಲ್ಲಿ ಮತ್ತೆ ಕಾರ್ಮಿಕ ಮಂತ್ರಾಲಯ 12ನೇ ತಾರಿಕಿನಂದು ಇಂತಹ ಒಂದು ದಿನದ ವೀಡಿಯೋ ಸಮ್ಮೇಳನದ ಆಹ್ವಾನವನ್ನು ಕಳಿಸಿದೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಮತ್ತೊಮ್ಮೆ ಇದು ಕೇವಲ ದಾಖಲೆಗಾಗಿ ನಡೆಸುತ್ತಿರುವ ಸಮಾಲೋಚನೆಯೆಂಬ ಪ್ರಹಸನ ಎನ್ನುತ್ತ ನೇರವಾದ ಮತ್ತು ಅರ್ಥಪೂರ್ಣ ಚರ್ಚೆಗೆ ಸಾಕಷ್ಟು ಸಮಯಾವಕಾಶ ಗಳಿರುವಂತೆ ತ್ರಿಪಕ್ಷೀಯ ಸಮಾಲೋಚನಾ ಸಭೆಗಳನ್ನು ಏರ್ಪಡಿಸಬೇಕು ಎಂದು ಆಗ್ರಹಿಸಿವೆ.

ಸರಕಾರ ವಿವಿಧ ಹಂತಗಳಲ್ಲಿ ಈಗ ನೇರವಾಗಿ ಭಾಗವಹಿಸುವ ಸಭೆಗಳನ್ನು ನಡೆಸುತ್ತಿದೆ, ವಿವಿಧ ರಾಜ್ಯಗಳಲ್ಲಿ ಚುನಾವಣಾ ರ್‍ಯಾಲಿಗಳಲ್ಲಿ ಈ ಸರಕಾರದ ಮುಖಂಡರೇ ಭಾಗವಹಿಸುತ್ತಿದ್ದಾರೆ. ಹೀಗಿರುವಾಗ ನೇರ ಸಭೆ ನಡೆಸಲು ಸಾಧ್ಯವಿಲ್ಲ ಎಂಬುದು ಸರಕಾರದ ಕಾರ್ಮಿಕ–ವಿರೋಧಿ ನಿಲುವನ್ನು ತೋರಿಸುತ್ತದೆ, ಇಂತಹ ಪ್ರಹಸನದಲ್ಲಿ ಶಾಮೀಲಾಗಲು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಿದ್ಧವಿಲ್ಲ, ಅಲ್ಲದೆ ಇವು ಸಂಹಿತೆಗಳನ್ನು ಮತ್ತು ಅವುಗಳ ಅಡಿಯಲ್ಲಿ ರೂಪಿಸುವ ನಿಯಮಾವಳಿಗಳನ್ನು ಸ್ವೀಕರಿಸುವುದಿಲ್ಲ ಕೂಡ ಎಂದು ಮತ್ತೊಮ್ಮೆ ಕಾರ್ಮಿಕ ಮಂತ್ರಿಗಳಿಗೆ ಜಂಟಿ ವೇದಿಕೆ ಪತ್ರ ಬರೆದಿದೆ.

ಜನವರಿ 18–ಮಹಿಳಾ ರೈತ ದಿನಾಚರಣೆಗೆ ಮಹಿಳಾ ಸಂಘಟನೆಗಳ ಬೆಂಬಲ

ಸಂಯುಕ್ತ ಕಿಸಾನ್‌ಮೋರ್ಚಾ ತೀವ್ರಗೊಳಿಸಿರುವ ಹೋರಾಟದ ಭಾಗವಾಗಿ ಜನವರಿ 18 ರಂದು ಮಹಿಳಾ ರೈತ ದಿನಾಚರಣೆ ನಡೆಸಲು ಕರೆ ನೀಡಿದೆ. ದೇಶದ ಆರು ಮಹಿಳಾ ಸಂಘಟನೆಗಳು ರೈತರ ಹೋರಾಟದೊಂದಿಗೆ ಸೌಹಾರ್ದ ವ್ಯಕ್ತಪಡಿಸುತ್ತ ದೇಶಾದ್ಯಂತ ಅದನ್ನು ಆಚರಿಸಲು ನಿರ್ಧರಿಸಿವೆ.

ಈ ಕುರಿತು ಒಂದು ಜಂಟಿ ಹೇಳಿಕೆ ನೀಡಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎ.ಐ.ಡಿ.ಡಬ್ಲ್ಯು.ಎ), ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ(ಎನ್.ಎಫ್.ಐ.ಡಬ್ಲ್ಯು), ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ (ಎ.ಐ.ಪಿ.ಡಬ್ಲ್ಯು.ಎ.), ಪ್ರಗತಿಶೀ??? ಮಹಿಳಾ ಸಂಘಟನ(ಪಿ.ಎಂ.ಎಸ್.), ಅಖಿಲ ಭಾರತ ಅಗ್ರಗಾಮಿ ಮಹಿಳಾ ಸಮಿತಿ(ಎ.ಐ.ಎ.ಎಂ.ಎಸ್.) ಮತ್ತು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎ.ಐ.ಎಂ.ಎಸ್.ಎಸ್.) ಇದರಲ್ಲಿ ಆಹಾರ ಭದ್ರತೆ, ನಿರುದ್ಯೋಗ, ಆರೋಗ್ಯ ಸೌಕರ್ಯಗಳ ಲಭ್ಯತೆ, ವಲಸೆ ಕಾರ್ಮಿಕರಿಗೆ ಮತ್ತು ಮಹಿಳೆಯರಿಗೆ ನಗದು ವರ್ಗಾವಣೆ, ಆಳಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟು, ಮತ್ತು ಕಾರ್ಮಿಕ–ವಿರೋಧಿ ಕಾರ್ಮಿಕ ಸಂಹಿತೆಗಳ ಪ್ರಶ್ನೆಗಳನ್ನೂ ಎತ್ತುವುದಾಗಿ ಹೇಳಿವೆ.

ಎಲ್ಲ ರಾಜ್ಯಗಳಲ್ಲಿ ಸಾವಿರಾರು ಮಹಿಳೆಯರು ಅಂದು ರಾಜಭವನಗಳಿಗೆ ಮೆರವಣಿಗೆ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಧರಣಿ ನಡೆಲಿದ್ದಾರೆ ಎಂದು ಈ ಸಂಘಟನೆಗಳು ಹೇಳಿವೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆಯೇರಿಕೆಗಳಿಂದ ತತ್ತರಿಸುತ್ತಿರುವ ಮಹಿಳೆಯರಿಗೆ ಆವಶ್ಯಕ ಸರಕುಗಳ ಕಾಯ್ದೆಯ ತಿದ್ದುಪಡಿಯಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ. ಮೊಟಕುಗೊಂಡಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆ ಕೂಡ ಅಸ್ತವ್ಯಸ್ತಗೊಂಡಿದೆ. ಡಿಸೆಂಬರಿನಿಂದ ಉಚಿತ ಆಹಾರಧಾನ್ಯಗಳ ವಿತರಣೆಯೂ ನಿಂತಿದೆ.

5ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆಯ ಪ್ರಕಾರ 22ರಲ್ಲಿ 13 ರಾಜ್ಯಗಳಲ್ಲಿ ಮಕ್ಕಳ ಕುಂಠಿತ ಬೆಳವಣಿಗೆಯ ಪ್ರಮಾಣ ಕಳೆದ ನಾಲ್ಕು ವರ್ಷಗಳಲ್ಲಿ ಹೆಚ್ಚಿದೆ. ಕೊರೊನಾದಿಂದಾಗಿ ಶಾಲೆಗಳು ಮುಚ್ಚಿರುವುದರಿಂದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಸಿಗುತ್ತಿಲ್ಲ. ಐಸಿಡಿಎಸ್ ಸೇವೆಗಳಿಗೂ ಬಾಧೆ ಉಂಟಾಗಿದೆ. ಇದರಿಂದಾಗಿ ಅಪೌಷ್ಟಿಕತೆ, ಹಸಿವು ಹೆಚ್ಚಲಿವೆ.

ಸರಕಾರ ಭರವಸೆ ನೀಡಿದ್ದರೂ ಮನರೇಗ ದಲ್ಲಿ ಉದ್ಯೋಗಗಳು ಸಿಗುತ್ತಿಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನು ನಗರಗಳಿಗೂ ವಿಸ್ತರಿಸಬೇಕೆಂಬ ಕೊರೊನದ ಲಾಕ್‌ಡೌನಿನಿಂದಾಗಿ ಜೀವನಾಧಾರಗಳನ್ನು ಕಳಕೊಂಡ ಅಸಂಘಟಿತ ವಲಯದ ಮಹಿಳೆಯರ ಬೇಡಿಕೆಗೆ ಸರಕಾರ ಕಿವಿಗೊಟ್ಟಿಲ್ಲ. ಆರೋಗ್ಯಪಾಲನೆಯ ವ್ಯವಸ್ಥೆಯ ಖಾಸಗೀಕರಣ ಮತ್ತಷ್ಟು ಹೊರೆಗಳನ್ನು ಹಾಕಿದೆ.

ಕೊರೊನ ಸೋಂಕಿನಿಂದಾಗಿ ಉಲ್ಬಣಗೊಂಡಿರುವ ಸಂಕಟಗಳನ್ನು ಪರಿಹರಿಸಲು ಕ್ರಮಗಳನ್ನು ಯೋಚಿಸುವ ಬದಲು ಸರಕಾರ ಪರಿಸ್ಥಿತಿಯ ದುರುಪಯೋಗ ಪಡಿಸಿಕೊಂಡು ಮೂರು ಕೃಷಿ ಕಾಯ್ದೆಗಳಂತಹ ಕಾರ್ಪೊರೇಟ್–ಪರ, ಜನ–ವಿರೋಧಿ ಅಜೆಂಡಾವನ್ನು

ಪುಟ 10 ನೋಡಿ

ಜನವರಿ 22–30: ರಾಜ್ಯವ್ಯಾಪಿ ರೈತ–ಕಾರ್ಮಿಕ ಜಾಥಾಗಳು

ಇತ್ತೀಚೆಗೆ ಕೇಂದ್ರದ ಮತ್ತು ರಾಜ್ಯದ ಮೋದಿ ಸರಕಾರ ಕೊವಿಡ್–19 ಮಹಾಸೋಂಕಿನ ಪರಿಸ್ಥಿತಿಯ ದುರ್ಬಳಕೆ ಮಾಡಿಕೊಂಡು ಹಿಂದೆಂದೂ ಕಂಡರಿಯದ ಸರಣಿ ಆರ್ಥಿಕ ದಾಳಿಗಳನ್ನು ರೈತ–ಕಾರ್ಮಿಕರು ಮತ್ತು ಜನತೆಯ ಮೇಲೆ ಹರಿಯ ಬಿಟ್ಟಿದೆ. ಈ ದಾಳಿಗಳಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಲವ್–ಜಿಹಾದ್, ಗೋಹತ್ಯೆ ನಿಷೇಧ ದ ಕಾನೂನುಗಳನ್ನು ತರಲು ಮುಂದಾಗಿದೆ. ಜನತೆ ಈ ದಾಳಿಗೆ ಪ್ರತಿರೋಧ ಒಡ್ಡದಂತೆ ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿ ದಮನ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಆದರೂ ಇದಕ್ಕೆ ರೈತ–ಕಾರ್ಮಿಕರು ತೀವ್ರ ಪ್ರತಿರೋಧ ಒಡ್ಡಿ ದೇಶದಾದ್ಯಂತ ನಡೆಯುತ್ತಿರುವ ಚಾರಿತ್ರಿಕ ರೈತರ ಹೋರಾಟ ನಡೆಯುತ್ತಿದೆ.

ಈ ಚಾರಿತ್ರಿಕವಾದ ನಿರ್ಣಾಯಕ ಹೋರಾಟಕ್ಕೆ ಬೆಂಬಲ ಕೊಡುವುದಲ್ಲದೆ ರೈತ–ಕಾರ್ಮಿಕರು ಮತ್ತು ಜನತೆಯ ಮೇಲಿನ ಸರಣಿ ಆರ್ಥಿಕ ರಾಜಕೀಯ ದಾಳಿಗಳನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗೂಡಿ ಹಿಮ್ಮೆಟ್ಟಿಸಬೇಕಾಗಿದೆ. ಇದನ್ನು ಮನಗಂಡ ಸಿ.ಐ.ಟಿ.ಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಕೃಷಿ ಕೂಲಿಕಾರರ ಸಂಘಟನೆ, ಎಸ್.ಎಫ್.ಐ, ಡಿ.ವೈ.ಎಫ್.ಐ, ಜನವಾದಿ ಮಹಿಳಾ ಸಂಘಟನೆ, ದಲಿತ ಹಕ್ಕುಗಳ ಸಮಿತಿ – ಈ ಸಂಘಟನೆಗಳು **ಜಂಟಿಯಾಗಿ ರಾಜ್ಯವ್ಯಾಪಿ ರೈತ–ಕಾರ್ಮಿಕ ಜಾಥಾಗಳನ್ನು** ಸಂಘಟಿಸಲು ನಿರ್ಧರಿಸಿವೆ. ರಾಜ್ಯದಾದ್ಯಂತ **ಜನವರಿ 22 ರಿಂದ 30**ರ ವರೆಗೆ ಒಂದೇ ಸಮಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸಂಚರಿಸುವ **ಏಳು ಪ್ರಾದೇಶಿಕ ಜಾಥಾ**ಗಳನ್ನು ಸಂಘಟಿಸಲಿವೆ ಎಂದು ತಿಳಿದು ಬಂದಿದೆ.

ಜನವರಿ 26 ರಂದು ದೇಶವ್ಯಾಪಿ ರೈತರ ಹೋರಾಟದ ಬೆಂಬಲಾರ್ಥ ನಡೆಯಲಿರುವ ಟ್ರಾಕ್ಟರ್ ರ‍್ಯಾಲಿಗಳಿಗೆ ಬೆಂಬಲ ಕೊಡಲಾಗುವುದು.

ಏಳು ರೈತ–ಕಾರ್ಮಿಕರ ಪ್ರಾದೇಶಿಕ ಜಾಥಾಗಳ ವಿವರಗಳು ಹೀಗಿವೆ :

ಜಾಥಾ ಸಂಖ್ಯೆ	ಜಿಲ್ಲೆಗಳು
ಜಾಥಾ 1	ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ.
ಜಾಥಾ 2	ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು.
ಜಾಥಾ 3	ಮಂಡ್ಯ, ಚಾಮರಾಜನಗರ, ಮೈಸೂರು, ಕೊಡಗು, ಹಾಸನ,
ಜಾಥಾ 4	ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ.
ಜಾಥಾ 5	ಬೆಳಗಾವಿ, ವಿಜಯಪುರ, ಬಾಗಲಕೋಟೆ, ಗದಗ, ಧಾರವಾಡ.
ಜಾಥಾ 6	ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ.
ಜಾಥಾ 7	ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು.

ಈ ಏಳು ಜಾಥಾಗಳು ಎಲ್ಲ ತಾಲೂಕುಗಳನ್ನು ಮುಟ್ಟಲಿದ್ದು ಎಲ್ಲ ತಾಲೂಕು ಕೇಂದ್ರಗಳಲ್ಲಿ ಬೃಹತ್ ಜನಸಭೆಗಳನ್ನು ನಡೆಸಲಿದೆ. ಮೇಲೆ ಹೇಳಿದ ಸಾಮೂಹಿಕ ಸಂಘಟನೆಗಳ ಜಿಲ್ಲಾ ಸಮಿತಿಗಳು ಪ್ರಾದೇಶಿಕ ಜಾಥಾ ಸಮಿತಿಯನ್ನು ರಚಿಸಿಕೊಂಡು ಜಾಥಾದ ರೂಟ್, ದಿನಾಂಕ ಮತ್ತಿತರ ವಿವರಗಳನ್ನು ತಯಾರಿಸಲಿದೆ. ಪ್ರತಿದಿನ ಒಟ್ಟು ನಾಲ್ಕು ಸಭೆಗಳನ್ನು ನಡೆಸುವ ಯೋಜನೆಯಿದೆ. ಬೆಳಿಗ್ಗೆ 10 ರಿಂದ 12 ಗಂಟೆಯೊಳಗೆ ಒಂದು ಸಭೆ ಮತ್ತು 1 ಗಂಟೆಯಿಂದ 3 ಗಂಟೆಯೊಳಗೆ ಏಕಕಾಲದಲ್ಲಿ ಎರಡು ತಾಲೂಕು ಕೇಂದ್ರಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಲಾಗುವುದು. ರಾತ್ರಿ 8 ರಿಂದ 9.30 ರೊಳಗೆ ಮೂರನೇ ಬಹಿರಂಗ ಸಭೆ ನಡೆಸಿದ ತಾಲೂಕಿನಲ್ಲಿ ಯಾವುದಾದರೊಂದು ಗ್ರಾಮದಲ್ಲಿ ಅಥವಾ ನಗರದ ವಾರ್ಡಗಳಲ್ಲಿ ಬಹಿರಂಗ ಸಭೆ ಸಂಘಟಿಸಲಾಗುವುದು.

ಪ್ರತಿ ಪ್ರಾದೇಶಿಕ ಜಾಥಾಗಳಲ್ಲಿ ಒಂದು ಕಲಾತಂಡ ಇರಬೇಕು. ಕನಿಷ್ಟ ಇಬ್ಬರು ಹಾಡುಗಾರರಿರುವ ಈ ತಂಡ ಬೀದಿ ನಾಟಕ ಹಾಗೂ ಹಾಡುಗಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡುವುದು.

ಪ್ರತಿಯೊಂದು ತಾಲೂಕಿನಲ್ಲೂ ಉಪ ಜಾಥಾಗಳ ಮೂಲಕ ಪ್ರಾದೇಶಿಕ ಜಾಥಾಗಳಿಗೆ ಪೂರಕವಾಗಿ ಪ್ರಚಾರಾಂದೋಳನಗಳನ್ನು ಸಂಘಟಿಸಲಾಗುವುದು.

ರಾಜ್ಯ ಬಜೆಟ್–ಪೂರ್ವ ಫೆಬ್ರವರಿ ಮೊದಲ ಅಥವಾ ಎರಡನೇ ವಾರದಲ್ಲಿ ಬೆಂಗಳೂರು ಚಲೋ ಸಹ ಸಂಘಟಿಸಲು ಉದ್ದೇಶಿಸಲಾಗಿದೆ.

ರೈತ–ಕಾರ್ಮಿಕರ ಜಾಥಾದ ಹಕ್ಕೊತ್ತಾಯಗಳು


ಕೇಂದ್ರ ಸರಕಾರ

ಜಾರಿಗೆ ತರಲು ಕ್ರಮ ವಹಿಸುತ್ತಿರುವ ಕಾರ್ಪೋರೇಟ್ ಕಂಪನಿಗಳ ಪರವಾದ ಎಲ್ಲಾ ಕೃಷಿ ಕಾಯ್ದೆಗಳನ್ನು ವಾಪಾಸು ಪಡೆಯಬೇಕು.

* ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ– 2020 ವಾಪಾಸು ಪಡೆಯಬೇಕು.
* ವಿದ್ಯುತ್ ತಿದ್ದುಪಡಿ ಮಸೂದೆ– 2020 ನ್ನು ಕೈ ಬಿಡಬೇಕು.
* ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳು – 2020 ಗಳನ್ನು ವಾಪಾಸು ಪಡೆಯಬೇಕು.

ಕರ್ನಾಟಕ ಸರಕಾರ,

* ಭೂ ಸುಧಾರಣಾ ತಿದ್ದುಪಡಿ ಕಾಯ್ದೆ– 2020 ಮತ್ತು ಎಪಿಎಂಸಿ ತಿದ್ದುಪಡಿ ಕಾಯ್ದೆ– 2020 ಹಾಗೂ ಜಾನುವಾರು ಹತ್ಯಾ ನಿಷೇಧ ಸುಗ್ರೀವಾಜ್ಞೆಗಳನ್ನು ಈ ಕೂಡಲೇ ಹಿಂಪಡೆಯಬೇಕು.
* ಕೇಂದ್ರ ಸರಕಾರ ಕೂಡಲೇ ಕನಿಷ್ಠ ಬೆಂಬಲ ಕಾಯ್ದೆ ಹಾಗೂ ರೈತ ಹಾಗೂ ಗ್ರಾಮೀಣ ಜನತೆಗೆ ಅಗತ್ಯ ಸಾಲ ಒದಗಿಸುವ ಮತ್ತು ಋಣ ಮುಕ್ತ ಕಾಯ್ದೆಗಳನ್ನು ಅಂಗೀಕರಿಸಬೇಕು. ತಕ್ಷಣವೇ ರೈತರು, ಕೃಷಿಕೂಲಿಕಾರರು ಕಸುಬುದಾರರು ಹಾಗೂ ಕಾರ್ಮಿಕರ ಮತ್ತು ಮಹಿಳೆಯರ ಎಲ್ಲ ಸಾಲಗಳನ್ನು ಒಂದು ಬಾರಿ ಮನ್ನಾ ಮಾಡಬೇಕು.
* ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕನಿಷ್ಠ ಕೂಲಿಯನ್ನು 700 ರೂಗಳಿಗೆ ಮತ್ತು ಮಾಸಿಕ ವೇತನವನ್ನು 21,000 ರೂಗಳಿಗೆ ಹೆಚ್ಚಿಸಬೇಕು. ಉದ್ಯೋಗ ಖಾತ್ರಿ ಕೆಲಸವನ್ನು ಕುಟುಂಬದ ತಲಾ ವ್ಯಕ್ತಿಗೆ ಕನಿಷ್ಟ 200 ದಿನ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ದೊರೆಯುವಂತೆ ಕ್ರಮವಹಿಸಬೇಕು.
* ಬಗರ್ ಹುಕುಂ ಹಾಗೂ ಅರಣ್ಯ ಭೂಮಿ ಬಡ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸಬೇಕು. ಎಲ್ಲಾ ದಲಿತರು ಹಾಗೂ ದಲಿತ ಮಹಿಳೆಯರಿಗೆ ಕನಿಷ್ಠ 5 ಎಕರೆ ನೀರಾವರಿ ಜಮೀನು ಒದಗಿಸಬೇಕು. ಎಲ್ಲಾ ಬಡವರಿಗೆ ಕನಿಷ್ಠ 80:80 ಚ.ಅಡಿ ವಿನ್ಯಾಸದ ಸ್ಥಳದಲ್ಲಿ 5 ಲಕ್ಷ ರೂ ಮೌಲ್ಯದ ಉಚಿತ ಮನೆಯನ್ನು ಒದಗಿಸಬೇಕು.
* ಕೇಂದ್ರ ಮತ್ತು ರಾಜ್ಯ ಸರಕಾರಗಳು, ಪರಿಶಿಷ್ಟ ಜಾತಿ ಹ್ಯೂ ಪಂಗಡಗಳ ಸಮುದಾಯಗಳ ಜನ ಸಂಖ್ಯೆಗನುಗುಣವಾಗಿ ಮತ್ತು ಹಿಂದುಳಿತ ಜಾತಿ ಹಾಗೂ ವರ್ಗಗಳ ಬಡ ಜನ ಸಮುದಾಯಗಳ ಜನ ಸಂಖ್ಯೆಗನುಗುಣ ಅನುದಾನ ನೀಡುವ ಮತ್ತು ಶಿಕ್ಷಣ ಹಾಗೂ ಉದ್ಯೋಗ ಗಳನ್ನು ಒದಗಿಸುವ ಮತ್ತು ಭಡ್ತಿಯಲ್ಲಿ ಮೀಸಲಾತಿಯನ್ನು ನೀಡುವ ಕಾಯ್ದೆಗಳನ್ನು ಜಾರಿಗೊಳಿಸಬೇಕು. ಸಾಚಾರ್ ಸಮಿತಿ ವರದಿಯನ್ನು ಜಾರಿಗೊಳಿಸಬೇಕು.
* ಸಾರ್ವಜನಿಕ ರಂಗದ ಕೈಗಾರಿಕೆಗಳ ಮತ್ತು ಲಾಭದಾಯಕ ಸಂಸ್ಥೆಗಳ ಖಾಸಗೀಕರಣವನ್ನು ವಾಪಾಸು ಪಡೆದು, ಸಾರ್ವಜನಿಕ ರಂಗ ಬಲಪಡಿಸಲು ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆ ಮಾಡಬೇಕು.
* ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಶಿಕ್ಷಣವನ್ನು ಬಲಪಡಿಸಬೇಕು. ಜನ ವಿರೋದಿ ಹೊಸ ಶಿಕ್ಷಣ ನೀತಿಯನ್ನು ಹಿಂಪಡೆಯಬೇಕು. ಉದ್ಯೋಗ ದೊರೆಯುವವರೆಗೆ ಎಲ್ಲಾ ನಿರುದ್ಯೋಗಿಗಳಿಗೆ ಕನಿಷ್ಠ ಮಾಸಿಕ 10,000 ರೂ ನಿರುದ್ಯೋಗಭತ್ಯೆ ನೀಡಬೇಕು.
* ಎಲ್ಲಾ ಯೋಜನೆಗಳ ಕಾರ್ಮಿಕರಿಗೆ ಉದ್ಯೋಗ ಭದ್ರತೆಗೆ ಕ್ರಮವಹಿಸಬೇಕು. ದೇವದಾಸಿ ಮಹಿಳೆಯರು ಸೇರಿದಂತೆ ಎಲ್ಲರ ಮಾಸಿಕ ಪಿಂಚಣಿಯನ್ನು ಕನಿಷ್ಠ 3,000 ರೂ. ಗಳಿಗೆ ಹೆಚ್ಚಿಸಬೇಕು. ಮಸಣ ಕಾರ್ಮಿಕರಿಗೂ ಮಾಸಿಕ ಸಹಾಯ ಧನದ ಪಿಂಚಣಿ ವಿಸ್ತರಿಸಬೇಕು.
* ಕಳೆದ ಎರಡು ವರ್ಷಗಳಿಂದ ಹೆಚ್ಚಿಸಲಾದ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಹಾಗೂ ವಿದ್ಯುತ್ ಬೆಲೆಗಳನ್ನು ವಾಪಾಸು ಪಡೆಯಬೇಕು.



ಹೊಸ ಚರಿತ್ರೆಗೆ ಸಾಕ್ಷಿಯಾಗಲಿದೆ ಜನವರಿ 26 ರ ಹೋರಾಟ

ಕೃಷಿ ಕಾಯ್ದೆಗಳ ರದ್ದುಗೊಳಿಸುವಂತೆ ಆಗ್ರಹಿಸಿ ದೆಹಲಿ ಗಡಿಭಾಗಗಳಲ್ಲಿ ರೈತರು 47 ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆ ತೀವ್ರಗೊಳ್ಳಲಿದೆ, ಜನವರಿ 26 ರ ಗಣರಾಜ್ಯೋತ್ಸವ ದಿನದಂದು ರೈತರ ಹೋರಾಟ ಹೊಸ ಚರಿತ್ರೆಗೆ ಸಾಕ್ಷಿಯಾಗಲಿದೆ ಎಂದು ಸಿಐಟಿಯು ರಾಷ್ಟ್ರೀಯ ಅಧ್ಯಕ್ಷರಾದ ಡಾ. ಹೇಮಲತಾ ತಿಳಿಸಿದರು.

ಮಾತನಾಡುತ್ತಾ, ಕೇಂದ್ರ ಸರ್ಕಾರದ ನೀತಿ ಮತ್ತು ದಾಳಿಯ ವಿರುದ್ಧ ಕಾರ್ಮಿಕರನ್ನು ಪರಿಣಾಮಕಾರಿ ಹೋರಾಟಕ್ಕೆ ಅಣಿನೆರೆಸಲು ರೈತ ಚಳುವಳಿ ಬೆಂಬಲಿಸಲು ಜನತೆಯ ಮಧ್ಯೆ ಜಾಗೃತಿ ಮೂಡಿಸಲು ಎರಡನೇ ರಂಗದ ರಚನಾತ್ಮಕ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳ ಅಪಾಯಗಳನ್ನು ಒಳಗೊಂಡು ಜನತೆಯ ಪ್ರಧಾನ ಹತ್ತು ಬೇಡಿಕೆಗಳಿಗೆ ಕರ್ನಾಟಕದಲ್ಲಿ ಹತ್ತು ದಿನಗಳ ರಾಜ್ಯ ಮಟ್ಟದ ಪ್ರಾದೇಶಿಕ ಜಾಥಾ, ಹಳ್ಳಿ ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲು ತೀರ್ಮಾನವನ್ನು ಕೈಗೊಂಡಿದೆ ಎಂದು ಸಿಐಟಿಯು ರಾಜ್ಯ ಪ್ರಧಾನಕಾರ್ಯದರ್ಶಿ ಮೀನಾಕ್ಷಿ ಸುಂದರಂ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್ ವರಲಕ್ಷ್ಮಿ ಮಾತನಾಡಿ ಜನವರಿ 26 ರಂದು ಸಾವಿರಾರು ಸಂಖ್ಯೆಯಲ್ಲಿ ರೈತರು ಬೆಂಗಳೂರಿನಲ್ಲಿ ಟ್ರಾಕ್ಟರ್ ಮೆರವಣಿಗೆ ನಡೆಸುತ್ತಿದ್ದಾರೆ. ಅದಕ್ಕೆ ಕಾರ್ಮಿಕರು ಬೆಂಬಲ ನೀಡಲಿದ್ದಾರೆ ಎಂದು ತಿಳಿಸಿದರು.

ರೈತಾಪಿ ಜೊತೆಗೆ ದೇಶವನ್ನೇ ಬಾಧಿಸುವ ಕೃಷಿ ಕಾಯ್ದೆ, ಕಾರ್ಮಿಕ ಸಂಹಿತೆ, ವಿದ್ಯುತ್ ಮಸೂದೆ ರದ್ದಾಗಲು, ಸಂವಿಧಾನದ ಆಶಯ ಎತ್ತಿ ಹಿಡಿಯಲು ರೈತ ಕಾರ್ಮಿಕ ವಿದ್ಯಾರ್ಥಿ ಯವಜನ ಮಹಿಳೆಯರಿಂದ ಗಣರಾಜ್ಯೋತ್ಸವ ಆಚರಣೆ ಯಶಸ್ವಿಗೊಳಿಸಲು, ನಿರುದ್ಯೋಗದ ವಿರುದ್ಧ ವಿದ್ಯಾರ್ಥಿ ಯುವಜನರು ನಡೆಸುತ್ತಿರುವ ಆಂದೋಲನಕ್ಕೆ ಬೆಂಬಲಿಸಲು ಸಿಐಟಿಯು ಪ್ರಮುಖ ನಿರ್ಣಯ ಅಂಗೀಕರಿಸಿದೆ. ಈ ಸಭೆಯಲ್ಲಿ ಸಿಐಟಿಯು ರಾಜ್ಯ ಮುಖಂಡರಾದ ಕೆ.ಎನ್. ಉಮೇಶ್, ಪರಮೇಶ್ವರ್, ಆರ್.ಎಸ್. ಬಸವರಾಜ, ವಸಂತಾಚಾರಿ, ಬಾಲಕೃಷ್ಣ ಶೆಟ್ಟಿ, ಜಿ. ರಾಮಕೃಷ್ಣ, ಎಚ್.ಎಸ್. ಸುನಂದಾ, ಯಮುನಾ ಗಾಂವ್ಕರ್ ಸೇರಿದಂತೆ ಅನೇಕರಿದ್ದರು.



ದಲಿತರ ಭೂಮಿ, ಕೊಳವೆ ಬಾವಿ, ಮಸಣ ಭೂಮಿ ಮತ್ತು ಉದ್ಯೋಗ ಒತ್ತಾಯಿಸಿ ದುಂಡು ಮೇಜಿನ ಸಭೆ

ದಲಿತರಿಗೆ ಮೀಸಲಿಟ್ಟ ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಹಣ 'ಇತರ ಯೋಜನೆಗೆ' ಬಳಕೆ: ನ್ಯಾ. ನಾಗಮೋಹನ ದಾಸ್ ಕಳವಳ

ದಲಿತರ ಉದ್ಧಾರಕ್ಕಾಗಿ ಮೀಸಲಾಗಿರುವ 28 ಸಾವಿರ ಕೋಟಿ ರೂ. 38 ಇಲಾಖೆಯಲ್ಲಿ ಹರಿದು ಹಂಚಿ ಹೋಗುತ್ತಿರುವುದಕ್ಕೆ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ನಾಗಮೋಹನದಾಸ್ ಖೇದ ವ್ಯಕ್ತಪಡಿಸಿದ್ದಾರೆ.



ಅವರು ಜನವರಿ 12, 2021 ರಂದು ಬೆಂಗಳೂರಿನಲ್ಲಿ ಗಾಂಧಿ ಭವನದಲ್ಲಿ 'ದಲಿತ ಹಕ್ಕುಗಳ ಸಮಿತಿ' ಏರ್ಪಡಿಸಿದ್ದ ದುಂಡು ಮೇಜಿನ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ, ದಲಿತರು ಅಭಿವೃದ್ಧಿ ಪಥದೆಡೆಗೆ ಸಾಗಬೇಕಾದರೆ ಅವರಿಗೆ ಸಿಗಬೇಕಾದ ಸೌಲಭ್ಯಗಳು ಒಂದೇ ಸೂರಿನಡಿ ಏಕಗವಾಕ್ಷಿ ಪದ್ಧತಿಯಂತೆ ಜಾರಿಗೋಳಿಸಿದರೆ ಮಾತ್ರ ಸಾಧ್ಯ ಎಂದರು. ದಲಿತರು ಸರ್ಕಾರಿ ಯೋಜನೆಗಳ ಫಲಾನುಭವಿಗಳಾಗಲು ಇದೊಂದೇ ಸಮರ್ಪಕವಾದ ಮಾರ್ಗ ಎಂದರು. ಸರ್ಕಾರಗಳು ಮನಸ್ಸಿಗೆ ಬಂದಂತೆ ಕಾರ್ಯ ಯೋಜನೆಗಳನ್ನು ರೂಪಿಸಿ 38 ಇಲಾಖೆಯಲ್ಲಿ ದಲಿತರು ಅಲೆದಾಡುವಂತೆ ಮಾಡುತ್ತಿದೆ ಎಂದು ಖೇದ ವ್ಯಕ್ತಪಡಿಸಿದರು.



ರಾಜ್ಯ ಸರಕಾರದ 2020–21ನೆ ಸಾಲಿನ ಬಜೆಟಿನಲ್ಲಿ ಶೇಕಡ 24.5 ರಷ್ಟು ಅನುದಾನ ದಲಿತ ಸಮುದಾಯಕ್ಕೆ ಮೀಸಲಿಡಲಾಗಿತ್ತು. ಅಂದರೆ, 27 ಸಾವಿರದ 500 ಕೋಟಿ ರೂ. ಕೆಲ ದಿನಗಳ ನಂತರ ಇದರಲ್ಲಿ 1 ಸಾವಿರ ರೂ. ತಗ್ಗಿಸಲಾಯಿತು. ಆ ನಂತರ, ಇಲ್ಲಿಯವರೆಗೂ ಖರ್ಚು ಮಾಡಿದ್ದು, 8.5 ಸಾವಿರ ಕೋಟಿ ರೂ. ಮಾತ್ರ. ಇನ್ನುಳಿದ ಹಣವನ್ನು ನಮ್ಮ ಮೆಟ್ರೋ, ರಸ್ತೆ ಸೇರಿದಂತೆ ಇನ್ನಿತರೆ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ. ಇನ್ನು, ಅಲ್ಪಸ್ವಲ್ಪ ಹಣವೂ ಶೋಷಿತ ಸಮುದಾಯಕ್ಕೆ ದಕ್ಕುತ್ತಿಲ್ಲ ಎಂದು ದಾಸ್ ಬೇಸರ ವ್ಯಕ್ತಪಡಿಸಿದರು.

ದಲಿತರ ಅಭಿವೃದ್ಧಿಗಾಗಿ ಭೂ ಒಡೆತನ ಯೋಜನೆ, ಕೊಳವೆ ಬಾವಿ ಯೋಜನೆ, ಉದ್ಯೋಗ ಹಾಗೂ ಎಸ್.ಸಿ. ಎಸ್.ಪಿ./ ಟಿ.ಎಸ್.ಪಿ. ಸಮರ್ಪಕವಾಗಿ ಜಾರಿಗೊಳಿಸಲು ದುಂಡು ಮೇಜಿನ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಈ ದುಂಡು ಮೇಜಿನ ಸಭೆಯಲ್ಲಿ ಎಸ್.ಸಿ. ಎಸ್.ಟಿ. ನೌಕರರ ಸಂಘದ ಅಧ್ಯಕ್ಷ ಕೆ. ಶಿವಶಂಕರ, ತಳಸಮುದಾಯದ ಅಭಿವೃದ್ಧಿ ಕೇಂದ್ರ ಸಮಿತಿ ಮುಖಂಡ ಚಂದ್ರಶೇಖರ, ಬಿ.ಎಸ್.ಎಂ.ಎಂ.ನ ಕೇಂದ್ರ ಸಮಿತಿ ಸದಸ್ಯ ನಾಗರಾಜ ನಂಜುಂಡಯ್ಯ, ರಾಜ್ಯ ಮುಖಂಡ ಬಿ. ರಾಜಶೇಖರ ಮೂರ್ತಿ ಅತಿಥಿಗಳಾಗಿ ಭಾಗವಹಿಸಿದ್ದರು.

ಡಿ.ಹೆಚ್.ಎಸ್. ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.

ಗೋಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಗೆ ಸುಗ್ರೀವಾಜ್ಞೆ ಅಸಿಂಧು – ನ್ಯಾ. ವಿ. ಗೋಪಾಲಗೌಡ



ರಾಜ್ಯ ಸರಕಾರ ಗೋಹತ್ಯೆ ನಿಷೇಧ ಕಾಯ್ದೆಗೆ ತಂದಿರುವ ಸುಗ್ರೀವಾಜ್ಞೆ ಹಾಗೂ ಅದಕ್ಕೆ ರಾಜ್ಯಪಾಲರು ಹಾಕಿರುವ ಅಂಕಿತ ಅಸಿಂಧು ಆಗಿದ್ದು, ಇದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಲಾಗುವುದೆಂದು ಸುಪ್ರೀಂಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ, ವಿ.ಗೋಪಾಲಗೌಡ ತಿಳಿಸಿದ್ದಾರೆ.

ರವಿವಾರ ಕರ್ನಾಟಕ ರಾಜ್ಯ ರೈತ ಸಂಘ ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ಸರಕಾರದ ಗೋ ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಯ ಕಾನೂನು ರೈತರ ಪಾಲಿಗೆ ಮರಣಶಾಸನ ಆಗಲಿದೆಯೇ ಎಂಬುದರ ಕುರಿತು ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಂವಿಧಾನದ ಮೂಲಭೂತ ಹಕ್ಕುಗಳು, ನಿರ್ದೇಶನ ತತ್ವಗಳು ಹಾಗೂ ಮಾನವೀಯ ಮೌಲ್ಯಗಳ ವಿರುದ್ಧ ರಾಜ್ಯ ಸರಕಾರ ಗೋ ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಗೆ ಸುಗ್ರೀವಾಜ್ಞೆ ತಂದಿದೆ ಅದಕ್ಕೆ ರಾಜ್ಯಪಾಲರು ಸಂವಿಧಾನದ ಕಾನೂನುಗಳನ್ನು ಮೀರಿ ಅಂಕಿತ ಹಾಕಿದ್ದಾರೆ. ಹೀಗಾಗಿ ಈ ಕಾಯ್ದೆಯು ನ್ಯಾಯಾಲಯದಲ್ಲಿ ಅಸಿಂಧುಗೊಳ್ಳಲಿದೆ ಎಂದು ಅವರು ಹೇಳಿದ್ದಾರೆ.

ಸುಗ್ರೀವಾಜ್ಞೆಯಿಂದ ಪಾಸಾದ ಕಾಯ್ದೆಗೆ ರಾಜ್ಯಪಾಲರು ಅಂಕಿತ ಹಾಕಬೇಕಾದರೆ, ತುರ್ತು ಪರಿಸ್ಥಿತಿಯ ಸಂದರ್ಭ ಇರಬೇಕು. ಆದರೆ, ಸದ್ಯ ರಾಜ್ಯದಲ್ಲಿ ಅಂತಹ ಯಾವುದೇ ಪರಿಸ್ಥಿತಿಯಿರಲಿಲ್ಲ. ಹಾಗೂ ಈ ಕಾಯ್ದೆಯು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿದೆ. ಆದರೆ, ಪರಿಷತ್‌ನಲ್ಲಿ ಈ ಕಾಯ್ದೆಗೆ ಅಂಗೀಕಾರ ಸಿಗಲಾರದೆಂಬ ಕಾರಣದಿಂದ ಅದನ್ನು ಮಂಡಿಸಲು ಬಿಜೆಪಿ ಹಿಂದೇಟು ಹಾಕಿದೆ. ಹೀಗಾಗಿ ರಾಜ್ಯಪಾಲರು ಗೋಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ ಸುಗ್ರಿವಾಜ್ಞೆಗೆ ಅಂಕಿತ ಹಾಕಿದ್ದು ಕಾನೂನು ಬಾಹಿರವೆಂದು ಅವರು ತಿಳಿಸಿದ್ದಾರೆ.

ನಮ್ಮ ಸಂವಿಧಾನವು ಸಾರ್ವಭೌಮತೆಯನ್ನು ಶಾಸಕಾಂಗಕ್ಕಾಗಲಿ, ಕಾರ್ಯಾಂಗಕ್ಕಾಗಲಿ ಹಾಗೂ ನ್ಯಾಯಾಂಗಕ್ಕಾಗಲಿ ನೀಡಲಿಲ್ಲ. ಬದಲಿಗೆ, ಈ ಅಧಿಕಾರವನ್ನು ದೇಶದ ಸಾಮಾನ್ಯ ಜನತೆಗೆ ನೀಡಲಾಗಿದೆ. ಹೀಗಾಗಿ ಜನವಿರೋಧಿಯಾದ ಯಾವುದೇ ಕಾನೂನು ದೇಶದಲ್ಲಿ ನೆಲೆಯೂರಲೂ ಸಾಧ್ಯವೇ ಇಲ್ಲವೆಂದು ಅವರು ತಿಳಿಸಿದ್ದಾರೆ.

ಕೇಂದ್ರ ಸರಕಾರ ಜಾರಿ ಮಾಡುತ್ತಿರುವ ಜನವಿರೋಧಿ ಕೃಷಿ ತಿದ್ದುಪಡಿ ಕಾಯ್ದೆಗಳು, ಜಾನುವಾರು ಹತ್ಯೆ ನಿಷೇಧ ಕಾಯ್ದೆ ಹೀಗೆ ಎಲ್ಲ ಅಪಾಯಕಾರಿ ಕಾನೂನುಗಳ ವಿರುದ್ಧ ರಾಜ್ಯದ ಪಂಚಾಯತ್ ಮಟ್ಟದಲ್ಲಿ ಅರಿವಿನ ಕಾರ್ಯಕ್ರಮಗಳನ್ನು ರೂಪಿಸಬೇಕಾದ ಅಗತ್ಯವಿದೆ ಎಂದು ಅವರು ತಿಳಿಸಿದ್ದಾರೆ.


ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿ ವೀರಸಂಗಯ್ಯ ಮಾತನಾಡಿದರು, ಕರ್ನಾಟಕ ಜನಶಕ್ತಿಯ ಗೌರವಾಧ್ಯಕ್ಷೆ ಸಿರಿ ಗೌರಿ ಪ್ರಸ್ತಾವನೆ ಮಾಡಿದರು. ಆಹಾರ ತಜ್ಞ ಕೆ.ಸಿ.ರಘು, ವಿ.ಗಾಯತ್ರಿ ವಿಷಯ ಮಂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ವಹಿಸಿದ್ದರು.

ರೈತರ ಹೋರಾಟ ಭೂಮಿಯ ಅಸ್ತಿತ್ವದ ಪ್ರಶ್ನೆ: ಡಾ. ನರೇಂದ್ರ ರೈ

ರೈತರ ಹೋರಾಟ ರೈತರ ಅಸ್ತಿತ್ವದ ಪ್ರಶ್ನೆಯಲ್ಲ ಇದು ಭೂಮಿಯ ಅಸ್ತಿತ್ವದ ಪ್ರಶ್ನೆ ಎಂದು ಪ್ರಾಧ್ಯಾಪಕ, ಲೇಖಕ ಡಾ. ನರೇಂದ್ರ ರೈ ದೇರ್ಲ ಹೇಳಿದರು. ಕೋಶ ಓದು ದೇಶ ನೋಡು ಬಳಗ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ (ರಿ) ಆಯೋಜನೆಯಲ್ಲಿ, ಸಹಮತ, ಸಹಯಾನದ ಸಹಭಾಗಿತ್ವದಲ್ಲಿ ತೇಜಸ್ವಿ ಪ್ರತಿಷ್ಠಾನ ಕೊಟ್ಟಿಗೆಹಾರದಲ್ಲಿ ನಡೆದ ತೇಜಸ್ವಿ ಓದು ಅಭಿಯಾನದ ಸಮಾರೋಪ ಸಮಾರಂಭವನು ತೇಜಸ್ವಿಯವರ ಪುಸ್ತಕ ತೆರೆಯುವ ಮೂಲಕ ಡಾ. ನರೇಂದ್ರ ರೈ ದೇರ್ಲ ಉದ್ಘಾಟಿಸಿದರು.

ಬಳಿಕ ಉದ್ಘಾಟನಾ ಭಾಷಣ ಮಾಡಿದ ಅವರು, ರೈತರ ಹೋರಾಟ ರೈತರ ಅಸ್ತಿತ್ವದ ಪ್ರಶ್ನೆಯಲ್ಲ ಇದು ಭೂಮಿಯ ಅಸ್ತಿತ್ವದ ಪ್ರಶ್ನೆ. ಪ್ರಸ್ತುತ ರೈತ ಗುಣವಿರುವ ಕೊನೆಯ ತಲೆಮಾರು ಇದೆ ಎಂಬುದು ನನ್ನ ಭಾವನೆ. ನಾವು ರೈತರ ಗುಣ ಅವಳಡಿಸಿಕೊಳ್ಳಬೇಕಾದರೆ ನೇಗಿಲು ಹಿಡಿದು, ಹೊಲ ಹೊತ್ತು ಜೀವನ ನಡೆಸಬೇಕಾಗಿಲ್ಲ. ರೈತರ ದಾರಿಯ ಅನ್ವೇಷಣೆಯೇ ರೈತ ಗುಣ ಎಂದು ಅಭಿಪ್ರಾಯಪಟ್ಟರು.

ಮುಖದ ಎದುರು ಮುಖ ಕೊಟ್ಟು ಮಾತನಾಡಲಾಗದ, ಸತ್ಯವನ್ನು ಸುಳ್ಳಾಗಿಸುವ ಸುಳ್ಳನ್ನು ಸತ್ಯವಾಗಿಸುವ ಈ ಕಾಲದಲ್ಲಿ ಓದುವವರು ಇದ್ದಾರೆ, ಅದರಲ್ಲೂ ತೇಜಸ್ವಿಯವರನ್ನು ಓದುವ ➚



ಜನವರಿ 26, 2021ರ ಗಣರಾಜ್ಯೋತ್ಸವದಂದು ರೈತ, ಕಾರ್ಮಿಕರ ಪರ್ಯಾಯ ಪೆರೇಡ್



ಗಣತಂತ್ರದ ನಿಜವಾದ ಆಶಯಗಳನ್ನು ಎತ್ತಿ ಹಿಡಿಯುವ ಉದ್ದೇಶದೊಂದಿಗೆ ಜನವರಿ 26, 2021 ರಂದು ಜನ ಗಣರಾಜ್ಯೋತ್ಸವನ್ನು ಬೆಂಗಳೂರಿನಲ್ಲಿ ಸಂಘಟಿಸಲಾಗುತ್ತಿದ್ದು, ಒಂದು ಸಾವಿರ ಟ್ರ್ಯಾಕ್ಟರ್‌ಗಳು, ಮೂರು ಸಾವಿರ ಕಾರು, ದ್ವಿಚಕ್ರ ವಾಹನಗಳು, ಹದಿನೈದು ಸಾವಿರಕ್ಕೂ ಮೀರಿ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರ ಪರ್ಯಾಯ ಪೆರೇಡ್ ನಡೆಯಲಿದೆ.

ಈ ಜನ ಗಣತಂತ್ರದ ಪರ್ಯಾಯ ಪೆರೇಡನಲ್ಲಿ ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಮತ್ತು ಎಲ್ಲಾ ದೇಶ ಪ್ರೇಮಿಗಳು ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು 'ಸಂಯುಕ್ತ ಹೋರಾಟ–ಕರ್ನಾಟಕ' ಮನವಿ ಮಾಡಿದೆ.

ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವದ ಆಶಯಗಳೊಂದಿಗೆ ರಚನೆಯಾಗಿರುವ ದೇಶದ ಸಂವಿಧಾನದ ಆಶಯಗಳು, ಮೌಲ್ಯಗಳನ್ನು ಧಿಕ್ಕರಿಸಿ ಕೇಂದ್ರ ಸರಕಾರ ಜಾರಿಗೆ ತಂದಿರುವ ಮೂರು ಕೃಷಿ ಸಂಬಂಧಿತ ಕಾಯ್ದೆಗಳು, ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳು, ವಿದ್ಯುತ್ ಮಸೂದೆಯನ್ನು ವಾಪಸ್ಸು ಪಡೆಯಬೇಕು ಮತ್ತು ರಾಜ್ಯ ಸರ್ಕಾರದ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಹಾಗೂ ಗೋಹತ್ಯೆ ನಿಷೇಧ ಸುಗ್ರೀವಾಜ್ಞೆಯನ್ನು ವಾಪಸ್ಸು ಪಡೆದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ 'ಕನಿಷ್ಠ ಬೆಂಬಲ ಬೆಲೆ' ಯನ್ನು ಖಾತರಿ ಮಾಡುವ ಶಾಸನಗಳನ್ನು ರೂಪಿಸಬೇಕೆಂದು ಆಗ್ರಹಿಸಿ ದೆಹಲಿಯ ಗಡಿಯಲ್ಲಿ ಕಳೆದ 50 ದಿನಗಳಿಂದ ಚಾರಿತ್ರಿಕ ಹೋರಾಟ ನಡೆಸುತ್ತಿರುವ ಸುಮಾರು 500 ರೈತ ಸಂಘಟನೆಗಳ ವೇದಿಕೆಯಾಗಿರುವ 'ಸಂಯುಕ್ತ ಕಿಸಾನ್ ಮೋರ್ಚಾ'ದ ಕರೆಯ ಮೇರೆಗೆ ನವದೆಹಲಿಯನ್ನು ಒಳಗೊಂಡು ದೇಶಾದ್ಯಂತ ಜನವರಿ 26, 2021 ರಂದು 'ರೈತ–ಕಾರ್ಮಿಕರ ಪರ್ಯಾಯ ಪೆರೇಡ್'ಗಳು ನಡೆಯುತ್ತಿದ್ದು, ಇದರ ಭಾಗವಾಗಿ ಬೆಂಗಳೂರಿನಲ್ಲಿ ಸಹ ಈ ಪೆರೇಡನ್ನು 'ಸಂಯುಕ್ತ ಹೋರಾಟ–ಕರ್ನಾಟಕ' ಎಂಬ ವಿಶಾಲವಾದ ವೇದಿಕೆ ಸಂಘಟಿಸಿದೆ.

ರಾಜ್ಯದ ಬಹುತೇಕ ರೈತ ಪರ, ದಲಿತ ಪರ, ಕಾರ್ಮಿಕರ ಪರ, ವಿದ್ಯಾರ್ಥಿ, ಯುವಜನ, ಮಹಿಳಾ ಪರವಾಗಿರುವ ಸಂಘಟನೆಗಳನ್ನು ಒಳಗೊಂಡು ರಚನೆಯಾಗಿದ್ದ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (AIKSCC), ರೈತ, ದಲಿತ, ಕಾರ್ಮಿಕರ ಐಕ್ಯ ಹೋರಾಟ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (JCTU) ದಲಿತ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ವಿವಿಧ ಸಮನ್ವಯ ಸಮಿತಿಗಳನ್ನು ಒಳಗೊಂಡು ದೇಶದ ಸಂದಿಗ್ದ ಪರಿಸ್ಥಿತಿಯನ್ನು ಎದುರಿಸಲು ರಚನೆಯಾಗಿರುವ ದೇಶ ಪ್ರೇಮಿ ವೇದಿಕೆಯೇ 'ಸಂಯುಕ್ತ ಹೋರಾಟ–ಕರ್ನಾಟಕ' ಎನ್ನುವ ವೇದಿಕೆ. ಈ ವೇದಿಕೆಯು, ಜನವರಿ 26, 2021 'ಪರ್ಯಾಯ ಪೆರೇಡ್' ನ್ನು ಸಂಘಟಿಸುತ್ತಿರುವ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ–ಕಾರ್ಮಿಕ ನೀತಿಗಳನ್ನು ಹಿಮ್ಮೆಟ್ಟಿಸುವಲ್ಲಿ ಮುಂದಿನ ದಿನಗಳಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಲಿದೆ. ಪಕ್ಷತೀತವಾಗಿ ರೈತರು, ಕಾರ್ಮಿಕರು ಇತರೆ ದುಡಿಯುವ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಕೆಲಸ ಮಾಡುವುದರ ಜೊತೆಯಲ್ಲಿಯೇ ಸಾಮಾಜಿಕ ನ್ಯಾಯ, ಕೋಮುಸಾಮರಸ್ಯ, ಸಮಾನತೆ, ಪ್ರಜಾಪ್ರಭುತ್ವವನ್ನು ಬಲಗೊಳಿಸಲು ಶ್ರಮಿಸಲಿದೆ. 'ಸಂಯುಕ್ತ ಹೋರಾಟ–ಕರ್ನಾಟಕ'ದ ಇಂತಹ ಎಲ್ಲಾ ಪ್ರಯತ್ನಗಳಿಗೆ ರಾಜ್ಯದ ಜನತೆ ಬೆಂಬಲವನ್ನು ನೀಡಬೇಕೆಂದು ವಿನಂತಿಸಿದೆ.

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ಬಹುತೇಕ ಆಳುವ ವರ್ಗಗಳ ಪಕ್ಷಗಳ ಧೋರಣೆಗಳ ಫಲವಾಗಿ ಕೃಷಿ ಗಂಭೀರವಾದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇದರ ಪರಿಣಾಮವಾಗಿ ಕಳೆದ 30 ವರ್ಷಗಳಲ್ಲಿ ನಾಲ್ಕು ಲಕ್ಷಕ್ಕೂ ಮೀರಿ ರೈತರು ಆತ್ಮಹತ್ಯೆಗಳಿಗೆ ಗುರಿಯಾಗಿದ್ದಾರೆ. ಕೃಷಿ ಕೂಲಿಕಾರರ, ದಲಿತರ ಹಸಿವಿನ ಸಾವುಗಳ ವ್ಯಾಪಕವಾಗುತ್ತಿವೆ. ಕಳೆದ ವರ್ಷದಲ್ಲಿ ವಕ್ಕರಿಸಿದ ಕೊರನಾ ರೋಗ ರೈತರು, ಕಾರ್ಮಿಕರು ಒಟ್ಟಾರೆ ದುಡಿಯುವ ಜನರ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ಇಂತಹ ಸಂಕಷ್ಟದಲ್ಲಿರುವ ಜನರ ಸಹಾಯಕ್ಕೆ ಬರಬೇಕಾದ ಸರಕಾರಗಳು, ಇದಕ್ಕೆ ತದ್ವಿರುದ್ಧವಾಗಿ ದೇಶದ, ಜಗತ್ತಿನ ಕಾರ್ಪೊರೇಟ್ ಕಂಪನಿಗಳ ಸೇವೆಗೆ ಟೊಂಕ ಕಟ್ಟಿ ನಿಂತಿವೆ. ಇದರ ಫಲವೇ ಕೇಂದ್ರ ರಾಜ್ಯ ಸರ್ಕಾರಗಳ ಮೂರು ಕಾಯ್ದೆಗಳು, ವಿದ್ಯುತ್ ಮಸೂದೆ, ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ಕಾರ್ಮಿಕ ಕಾಯ್ದೆ ತಿದ್ದುಪಡಿಗಳು, ಮತ್ತು ಗೋಹತ್ಯೆ ನಿಷೇಧದ ಸುಗ್ರೀವಾಜ್ಞೆಗಳು.

ಇಂತಹ ಕಾಯ್ದೆಗಳ ಮೂಲಕ ದೇಶದ ಕೃಷಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ, ಚಿಲ್ಲರೆ ವ್ಯಾಪಾರ, ವಿದ್ಯುತ್ ಕ್ಷೇತ್ರಗಳನ್ನು ಸಂಪೂರ್ಣವಾಗಿ ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸುವ ಕಾರ್ಯಕ್ಕೆ ಮುಂದಾಗಿವೆ. ದೇಶದ ರೈತರು, ಕಾರ್ಮಿಕ ವರ್ಗವನ್ನು ಕಾರ್ಪೊರೇಟ್ ಕಂಪನಿಗಳ ಗುಲಾಮರನ್ನಾಗಿಸಲು ಹೊರಟಿವೆ. ಈ ಗುರಿಯನ್ನು ಸಾಧಿಸಲು 'ಸಂವಿಧಾನ' 'ಗಣತಂತ್ರ'ವನ್ನು ಧಿಕ್ಕರಿಸಿ ಆಳುವ ಫ್ಯಾಸಿಸ್ಟ್ ಶಕ್ತಿಗಳು ಮುನ್ನುಗ್ಗುತ್ತಿವೆ. ಇದಕ್ಕಾಗಿ ಕೋಮುವಾದ ದ್ವೇಷವನ್ನು ಪ್ರಚೋದನೆ ಮಾಡಲಾಗುತ್ತಿದೆ. ಇದರಿಂದ ಮುಂದುವರಿದ ಭಾಗವಾಗಿಯೇ 'ಗೋಹತ್ಯೆ ನಿಷೇಧ ಕಾಯ್ದೆ'.

ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ – ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ನಡೆಯುತ್ತಿರುವ ಹೋರಾಟಗಳ ಬಾರಿ ಮಹತ್ವದ ಹೋರಾಟ 'ಜನವರಿ 26, 2021ರ ಜನ ಗಣತಂತ್ರದ ಪರೇಡ್' ಅಂದು ಮಧ್ಯಾಹ್ನ 12:30 ಗಂಟೆಗೆ ಆರಂಭವಾಗಿ ನಗರ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್ ವರೆಗೆ ನಡೆಯುವ ಕೇಂದ್ರೀಯ 'ರೈತ – ಕಾರ್ಮಿಕ ಪರ್ಯಾಯ ಪೆರೇಡ್' ನಲ್ಲಿ ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಎಲ್ಲಾ ದೇಶಪ್ರೇಮಿಗಳು ಹೆಚ್ಚಿನ ಜನಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು ಕೋರಿದೆ. ■

➘ ಯುವಪೀಳಿಗೆಯಿದೆ ಎಂಬುದು ಸಂತಸದ ವಿಚಾರ ಎಂದು ಹರ್ಷ ವ್ಯಕ್ತಪಡಿಸಿದರು.

ತೇಜಸ್ವಿಯವರು ಇಲ್ಲದ ಲೋಕದಲ್ಲಿ ನಾನು ಇರಲಾರೆ ಎಂಬ ಅನಂತಮೂರ್ತಿಯವರ ಮಾತನ್ನು ನೆನಪಿಸಿಕೊಂಡ ಅವರು, ಪ್ರಸ್ತುತ ಅನಂತಮೂರ್ತಿ, ಲಂಕೇಶ, ಸುಬ್ಬಣ್ಣ, ರಾಮ್‌ದಾಸ್, ತೇಜಸ್ವಿಯವರಂತಹ ಯುವ ಪೀಳಿಗೆಯನ್ನು ತಿದ್ದುವ, ರಿಪೇರಿ ಮಾಡುವ ಸಂಸ್ಕೃತಿ ಇಲ್ಲದೆ ನಮ್ಮ ಪ್ರಶ್ನೆ, ತಕರಾರು ಇಂಗಿ ಹೋಗುತ್ತಿದೆ ಎಂದರು.

ನಾವೀಗ ನಮ್ಮ ದೇಶದಲ್ಲಿ ಎಷ್ಟು ಅಟಾಂ ಬಾಂಬ್‌ಗಳಿವೆ, ಎಷ್ಟು ಯುದ್ಧ ವಿಮಾನಗಳಿವೆ. ಬೇರೆ ದೇಶದಲ್ಲಿ ಎಷ್ಟಿದೆ ಎಂಬುದನ್ನು ಲೆಕ್ಕ ಹಾಕಿಕೊಂಡು ಖುಷಿ ಪಡುತ್ತೇವೆ. ಆದರೆ, ನಾವು ನಮ್ಮ ಭೂಮಿಗೆ ಬೇಕಾದಷ್ಟು ನೀರು, ಆಮ್ಲಜನಕ, ಗಾಳಿ ಇದೆಯೇ ಎಂಬುದರ ಚಿಂತನೆ ನಡೆಸಬೇಕಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಓದು ಬಳಗದ ಮುನೀರ್ ಕಾಟಿಪಳ್ಳ, ಯುವ ತಲೆಮಾರು ಓದಿನಿಂದ ವಿಮುಖ ಹೊಂದಿ ಸಾಮಾಜಿಕ ಜಾಲತಾಣದ ವಿಚಾರವನ್ನೇ ತಲೆಗೆ ತುಂಬಿಸುತ್ತಿದ್ದಾರೆ. ನಾವು ಅದೇ ಸಾಮಾಜಿಕ ಜಾಲತಾಣವನ್ನು ಬಳಸಿ ಓದು ಅಭಿಯಾನ ಆರಂಭಿಸಿದ್ದು ಯುವ ಜನರಲ್ಲಿ ಓದಿನ ಹವ್ಯಾಸ ಮೂಡಿಸುವ ಬೆಳೆಸುವ ಪ್ರಯತ್ನ ನಡೆಸುತ್ತಿದ್ದೇವೆ. ಈಗಾಗಲೇ ಈ ಓದು ಅಭಿಯಾನ ಹಲವಾರು ಜನರನ್ನು ಸೆಳೆದಿದ್ದು ಚರ್ಚೆಗಳು ನಡೆದಿದೆ ಎಂದರು.

ತೇಜಸ್ವಿಯವರು ಪ್ರಸ್ತುತ ನಡೆಯುತ್ತಿರುವ ಕೋಮುಸಂಘರ್ಷ ಮೊದಲಾದವುಗಳನ್ನು ತಮ್ಮ ಕೃತಿಯ ಮೂಲಕ ಈ ಹಿಂದೆಯೇ ತಿಳಿಸಿದ್ದಾರೆ. ಓದಿನಿಂದ ನಾವು ಸೈದ್ಧಾಂತಿಕ ಸ್ಪಷ್ಟತೆ ಪಡೆದು ದೇಶದ ಪ್ರಸ್ತುತ ಚಳುವಳಿಯಲ್ಲಿ ಕೈ ಜೋಡಿಸೋಣ ಎಂದು ಹೇಳಿದರು.

ವೇದಿಕೆಯಲ್ಲಿ ತೇಜಸ್ವಿಯವರ ಪತ್ನಿ ರಾಜೇಶ್ವರಿ ತೇಜಸ್ವಿ, ಲೇಖಕ ಕೆ.ಪಿ. ಸುರೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಡಾ. ರಮೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಸದಸ್ಯರಾದ ಆರ್. ರಾಘವೇಂದ್ರ ಉಪಸ್ಥಿತರಿದ್ದರು. ಶಿಕ್ಷಕ ಪೂರ್ಣೇಶ್ ಮತ್ತಾವರ ಕಾರ್ಯಕ್ರಮ ನಿರೂಪಿಸಿದರು. ■

ಪಠ್ಯಪುಸ್ತಕ ಮುದ್ರಣವಗಿಲ್ಲ, ಪಾಠಗಳು ನಡೆದಿಲ್ಲ ಆದರೆ ಪರೀಕ್ಷೆ ಮಾತ್ರ ನಿಗದಿಯಾಗಿದೆ?!

ಅತಿಥಿ ಉಪನ್ಯಾಸಕರನ್ನು ನೇಮಿಸದೆ, ಪಾಠಪ್ರವಚನ ನಡೆಸದೆ, ಪಠ್ಯಪುಸ್ತಕ ಮುದ್ರಿಸದೆ ಪದವಿ ವಿದ್ಯಾರ್ಥಿಗಳಿಗೆ ಸೆಮಿಸ್ಟರ್ ಪರೀಕ್ಷೆ ನಡೆಸುವುದು ಸರಿಯಾದ ಕ್ರಮವಲ್ಲ, ಸೆಮಿಸ್ಟರ್ ಪರೀಕ್ಷೆ ಬದಲು ವಾರ್ಷಿಕ ಪರೀಕ್ಷೆ ನಡೆಸಿ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಒತ್ತಾಯಿಸಿದೆ.

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಪದವಿ ತರಗತಿಗಳಿಗೆ ಸೆಮಿಸ್ಟರ್ ಪರೀಕ್ಷೆಯನ್ನು ತಕ್ಷಣ ನಡೆಸಲು ಮುಂದಾಗುತ್ತಿರುವುದು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತದೆ. ಕರ್ನಾಟಕ ವಿಶ್ವವಿದ್ಯಾಲಯವು ಫೆಬ್ರುವರಿ ಮೊದಲ ವಾರದಲ್ಲಿ ಎಲ್ಲಾ ಪದವಿ ತರಗತಿಗಳಿಗೆ (1,3&5ನೇ ಸೆಮಿಸ್ಟರ್) ಪರೀಕ್ಷೆ ನಡೆಸಲು ತಿರ್ಮಾನಿಸಿ ಸುತ್ತೋಲೆ ಹೊರಡಿಸಿದೆ. ಅತಿಥಿ ಶಿಕ್ಷಕರ ನೇಮಿಸದೆ, ಪಾಠಪ್ರವಚನ ನಡೆಸದೆ, ಪಠ್ಯಪುಸ್ತಕ ಮುದ್ರಿಸದೆ ವಿದ್ಯಾರ್ಥಿಗಳ ಜೊತೆ, ಅಧ್ಯಾಪಕರ ಸಂಘದ ಜೊತೆಗೆ ಯಾವುದೇ ಸಮಾಲೋಚನೆ ಮಾಡದೇ ಏಕಾಏಕಿ ಪದವಿ ಕಾಲೇಜು ಶಿಕ್ಷಣ ಇಲಾಖೆ/ವಿಶ್ವವಿದ್ಯಾಲಯ ತೆಗೆದುಕೊಂಡ ನಿರ್ಧಾರವನ್ನು ಎಸ್‌ಎಫ್‌ಐ ಬಲವಾಗಿ ಖಂಡಿಸುತ್ತದೆ. ಮತ್ತು ತಕ್ಷಣ ಈ ಸುತ್ತೋಲೆ ವಾಪಸು ಪಡೆದು ಸೆಮಿಸ್ಟರ್ ಪರೀಕ್ಷೆ ಬದಲು ವಾರ್ಷಿಕ ಪರೀಕ್ಷೆ ನಡೆಸಬೇಕು ಎಂದು ಎಸ್.ಎಫ್.ಐ. ರಾಜ್ಯಾಧ್ಯಕ್ಷ ಅಮರೇಶ್ ಕಡಗದ್ ಆಗ್ರಹಿಸಿದ್ದಾರೆ.

ಕೋವಿಡ್–19 ರ ಕಾರಣದಿಂದ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಹಲವಾರು ಬದಲಾವಣೆಗಳು ಆಗಿರುವ ಹಿನ್ನಲೆಯಲ್ಲಿ ಈ ವರ್ಷದ ಮಟ್ಟಿಗೆ ಸೆಮಿಸ್ಟರ್ ಪದ್ದತಿ ರದ್ದು ಮಾಡಿ ವಾರ್ಷಿಕ ಪರೀಕ್ಷೆ ಮಾಡಬೇಕು. ರಾಜ್ಯದ ಯಾವುದೇ ಸರ್ಕಾರಿ ಮಹಾವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಇನ್ನೂ ಮಾಡಿಕೊಂಡಿಲ್ಲ. ಹಲವಾರು ಕಾಲೇಜುಗಳು ಖಾಯಂ ಉಪನ್ಯಾಸಕರು ಇಲ್ಲದೇ ಅತಿಥಿ ಉಪನ್ಯಾಸಕರ ಸೇವೆಯ ಮೇಲೆ ನಡೆಯುತ್ತಿವೆ. ಹಾಗಾಗಿ ಕನಿಷ್ಠ ಶೇ 20% ಪಾಠಗಳು ನಡೆದಿಲ್ಲ. ಇನ್ನೂ ಹಲವಾರು ಖಾಸಗಿ ಅನುದಾನಿತ ಕಾಲೇಜುಗಳಲ್ಲಿಯೂ ಅತಿಥಿ ಉಪನ್ಯಾಸಕರು ನೇಮಕ ಆಗಿಲ್ಲ. ಅಧ್ಯಾಪಕರ ಕೊರತೆ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮೊಬೈಲ್, ನೆಟ್ವರ್ಕ್ ಸಮಸ್ಯೆಗಳಿಂದ ಪಾಠ ತಲುಪಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಹಲವಾರು ವಿಭಾಗಗಳ ಪುಸ್ತಕಗಳೇ ಇನ್ನೂ ಮುದ್ರಣಗೊಂಡಲ್ಲಿ. ಆನ್ಲೈನ್ ತರಗತಿ ಇರುವುದರಿಂದ ವಿಜ್ಞಾನ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಗತಿ ಕೂಡ ನಡೆದಿಲ್ಲ ಹಾಗಾಗಿ ಸೆಮಿಸ್ಟರ್ ಪರೀಕ್ಷೆ ನಡೆಸಲು ವಿದ್ಯಾರ್ಥಿಗಳು ಮಾನಸಿಕವಾಗಿ ಸಿದ್ಧರಾಗಿಲ್ಲ ಎಂದು ಹಾವೇರಿ ಜಿಲ್ಲೆಯ ಎಸ್‌ಎಫ್‌ಐ ಮುಖಂಡ ಬಸವರಾಜ ಭೊವಿ ಆರೋಪಿಸಿದ್ದಾರೆ.

ಇಷ್ಟೆಲ್ಲಾ ಅವ್ಯವಸ್ಥೆಯಿದ್ದು ತರಾತುರಿಯಿಂದ ಪರೀಕ್ಷೆ ನಡೆಸಲು ಮುಂದಾಗಿರುವ ವಿಶ್ವವಿದ್ಯಾಲಯದ ಕ್ರಮ ಅವೈಜ್ಞಾನಿಕವಾದದ್ದು ಮತ್ತು ಅಪ್ರಾಯೋಗಿಕವಾದದ್ದು. ಪಾಠ ಕೇಳದೆ, ಪಠ್ಯವಿಲ್ಲದೆ ನಾವು ಪರೀಕ್ಷೆಗಳನ್ನು ಹೇಗೆ ಬರೆಯಬೇಕು ಎಂದು ವಿದ್ಯಾರ್ಥಿನಿ ದಿಲ್ಶಾದ್ ಚೂಡಿವಾಲೆ ಪ್ರಶ್ನಿಸಿದ್ದಾರೆ. ಇತ್ತ ಪಾಠಗಳು ನಡೆಯದೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವುದು ನೈತಿಕವಾಗಿ ನಮಗೆ ಒಪ್ಪಿತವಾಗುತ್ತಿಲ್ಲ ಎಂದು ಉಪನ್ಯಾಸಕರು ಸಹ ವಿರೊಧಿಸುತ್ತಿದ್ದಾರೆ. ಸರಕಾರ ಹಾಗೂ ವಿ.ವಿ. ಆಡಳಿತ ಮಂಡಳಿ ಸರಿಯಾದ ನಿಲುವಿನ ಮೂಲಕ ವಿದ್ಯಾರ್ಥಿಗಳ ಹಿತ ಕಾಪಾಡಬೇಕಿದೆ. ■



ಕಗ್ಗತ್ತಲೆಯಲ್ಲಿ ಬೆಳಕಿನ ಕಿಂಡಿಗಾಗಿ ಎಲ್ಲರೂ ತಡಕಾಡುತ್ತಿರುವಾಗ, ಅಂಥದೊಂದು ಕಿಂಡಿಯು ಕೃಷಿಕರ ಆಂದೋಲನದ ಮೂಲಕ ಕಾಣಿಸಿಕೊಂಡಿದೆ. ಕೃಷಿ 'ಕಾನೂನು'ಗಳ ರದ್ದತಿಗಾಗಿ ದೆಹಲಿಯ ಗಡಿಗಳಲ್ಲಿ ಅಪೂರ್ವ ರೀತಿಗಳಲ್ಲಿ ಸಂಘಟಿತವಾಗಿ ನಡೆಯುತ್ತಿರುವ ಚರಿತ್ರಾರ್ಹ ರೈತಚಳುವಳಿಯಲ್ಲಿ ಏಳು ಮುಖ್ಯ ಅಂಶಗಳು ಎಲ್ಲರ, ಅದರಲ್ಲೂ ಹೋರಾಟಗಾರರ ಗಮನವನ್ನು ಸೆಳೆಯುತ್ತವೆ. ಶಿಕ್ಷಣವೆಂದರೆ ಕೇವಲ ಪದವಿಗಳನ್ನು ಗಳಿಸುವುದಲ್ಲ. ಸಂಘಟನೆಯೆಂದರೆ ಕೇವಲ ಧಿಕ್ಕಾರ ಕೂಗುವ ಗುಂಪಲ್ಲ. ಹೋರಾಟವೆಂದರೆ ಕೇವಲ ಸಾಂಕೇತಿಕ ಧರಣಿ–ಮೆರವಣಿಗೆಗಳಲ್ಲ. ಇವಕ್ಕೆ ಮೂಲಭೂತವಾಗಿ ಬೇರೆಯದೇ ಆದ ಅರ್ಥಗಳಿವೆಯೆಂದು ದೆಹಲಿ ಗಡಿಗಳಲ್ಲಿ ದಿನ ದಿನವೂ ಹೆಚ್ಚುತ್ತಿರುವ ಭಾರತದ ರೈತಚಳುವಳಿಯು ತನ್ನ ವಿನೂತನ ಪ್ರತಿಭಟನಾ ವಿಧಾನಗಳ ಮೂಲಕ ಪ್ರತ್ಯಕ್ಷವಾಗಿ ತೋರಿಸುತ್ತಿದೆ. ತಮ್ಮ ತ್ಯಾಗ–ಬಲಿದಾನಗಳ ಮೂಲಕ ಇಡೀ ದೇಶವನ್ನೇ ಬಂಡವಳಿಗರಿಂದ ಪಾರುಮಾಡಬಲ್ಲ ಚಳುವಳಿ ಜ್ಞಾನವನ್ನು ಬೋಧಿಸುವ 'ಬಯಲು ಶಾಲೆ'ಯೊಂದನ್ನು ಹುಟ್ಟುಹಾಕಿದ್ದಾರೆ.

ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಹೋರಾಟಗಾರರ ಬಯಲು ಶಾಲೆಯಾಗಿ ದೆಹಲಿಯ ರೈತ ಚಳುವಳಿ



ಕಳೆದ ಸುಮಾರು 70–80 ವರ್ಷಗಳಿಂದಲೂ ತಮ್ಮದು ಸಾಂಸ್ಕೃತಿಕ ಸಂಘಟನೆಯೆಂದು, ತಮಗೆ ರಾಜಕೀಯ ಅಧಿಕಾರ ಬೇಕಾಗಿಲ್ಲವೆಂದು ಹೇಳುತ್ತಲೇ, ಅಧಿಕಾರಕ್ಕಾಗಿ ಸತತವಾಗಿ ಪ್ರಯತ್ನಿಸುತ್ತಾ ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ ಸಂಘಪರಿವಾರಕ್ಕೆ, ಜಾಗತಿಕ ಮಟ್ಟದಲ್ಲಿ ಕಾರ್ಪೊರೇಟ್–ಫ್ಯಾಸೀವಾದೀ ಶಕ್ತಿಗಳು ಬಲಗೊಂಡಿದ್ದು ದೇಶೀಯವಾಗಿ ವರದಾನವಾಯಿತು. ಸಾಮಾನ್ಯ ಜನರ ಮುಗ್ಧತೆ, ಅನಕ್ಷರತೆ, ರಾಜಕೀಯ ಪ್ರಜ್ಞೆಯ ಕೊರತೆ, ಅತೀವ ಬಡತನ ಮತ್ತು ಜಾಗತೀಕರಣ ನೀತಿಗಳು ಹೆಚ್ಚಿಸಿದ ನಿರುದ್ಯೋಗ, ಹಿಂದಿನ ಸರ್ಕಾರಗಳ ಭ್ರಷ್ಟತೆ ಮತ್ತು ಅವು ಜನವಿರೋಧೀ ನೀತಿಗಳಿಗೆ ಕೊಟ್ಟ ಆದ್ಯತೆಗಳು, ಇವೆಲ್ಲವೂ, ಮುಖವಿಲ್ಲದ ಕಾರ್ಪೊರೇಟ್ ಬಂಡವಾಳದ ಹುಸಿ ಪ್ರಜಾತಾಂತ್ರಿಕ ಮುಖವಾಗಿ, ಸಂಘಪರಿವಾರದ ಅಧಿಕಾರ ಸ್ಥಾಪನೆಗೆ ಭದ್ರ ನೆಲೆಯನ್ನು ಒದಗಿಸಿದವು. ಫ್ಯಾಸಿಸ್ಟ್ ಸಂಘಟನೆಯಾಗಿ ಹುಟ್ಟಿದಾರಭ್ಯ ಸುಳ್ಳು–ವಂಚನೆ–ಕುಟಿಲೋಪಾಯಗಳಲ್ಲಿ ಪಳಗಿದ ಸಂಘಪರಿವಾರಕ್ಕೆ ಸಂಸ್ಕೃತಿ ಪ್ರಸರಣ ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ತನ್ನ ಗುಪ್ತ ಕಾರ್ಯಕ್ರಮಗಳನ್ನು ಬಹಿರಂಗವಾಗೇ ಕಾರ್ಯರೂಪಕ್ಕೆ ತರುವುದು ಸಾಧ್ಯವಾಯಿತು.

ಸಂಘಪರಿವಾರವು ಶಿಕ್ಷಣ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ತಮ್ಮ ಫ್ಯಾಸೀ ತತ್ವಗಳನ್ನು ತಳಮಟ್ಟದಿಂದಲೇ ಎಳೆಯ ಮನಸ್ಸುಗಳಲ್ಲಿ ಬಿತ್ತುತ್ತಾ ಬಂದಿತ್ತು. ಇದರ ಫಲವಾಗಿ ಜಾಗತೀಕರಣವು ಸೃಷ್ಟಿಸಿದ ಬಿಕ್ಕಟ್ಟುಗಳೇ ಸಂಘಪರಿವಾರದ ಸುಳ್ಳು ಆಶ್ವಾಸನೆಗಳತ್ತ ಯುವಜನರು ಆಕರ್ಷಿತರಾಗುವಂತೆ ಮಾಡಿದವು.

ಇದಲ್ಲದೆ, ಸರ್ಕಾರದ ಕೃಪಾಶ್ರಯದಲ್ಲಿ ಕಾನೂನಿನ ಕವಚ ಹೊದ್ದ ಕಪ್ಪುಹಣ–ಭ್ರಷ್ಟಾಚಾರದ ಸಂಪನ್ಮೂಲಗಳು ಸಂಘಪರಿವಾರದ ಕುಟಿಲ ಕಾರ್ಯಕ್ರಮಗಳಿಗೆ ಬೇಕಾದ ಹಣವನ್ನು ಧಾರಾಳವಾಗಿ ಒದಗಿಸಿದವು.

ಮಾಹಿತಿ ತಂತ್ರಜ್ಞಾನವು ಡಿಜಟಲೀಕರಣಕ್ಕೆ ಒಳಗಾಗಿದ್ದು ಸಂಘಪರಿವಾರದ ಮಧ್ಯಯುಗದ ಕ್ರೌರ್ಯ–ಕುಟಿಲತೆಗಳನ್ನು ಬಲಪಡಿಸಿಕೊಳ್ಳಲು, ತಂತ್ರಜ್ಞಾನದ ಹೆಸರಿನಲ್ಲಿ ಅವಕ್ಕೆ ಆಧುನಿಕ ಶಿಷ್ಟ ರೂಪವನ್ನು ಒದಗಿಸಿ ಸಾಮಾನ್ಯ ಜನರಿಗೆ ಒಪ್ಪಿತವಾಗುವಂತೆ ಮಾಡಲು ಮತ್ತಷ್ಟು ಸಹಾಯಕವಾಯಿತು.

ಕಾನೂನಾತ್ಮಕ ಭ್ರಷ್ಟಾಚಾರ, ಸುಳ್ಳು–ವಂಚನೆ–ಕುಟಿಲತೆ–ದ್ವೇಷಗಳ ಜೊತೆಗೆ ಡಿಜಿಟಲ್ ಸಾಧನಗಳನ್ನು ಬಳಸಿಕೊಂಡು ಗಳಿಸಿದ ಲೆಕ್ಕವಿಲ್ಲದ ಗುಪ್ತ ಸಂಪತ್ತು ಮತ್ತು ಕುಟಿಲ ಅಧಿಕಾರದ ಮದವೇರಿಸಿಕೊಂಡ ಸಂಘಪರಿವಾರಕ್ಕೆ ಎದುರಾಳಿಗಳೇ ಇಲ್ಲದ ನಿರಂಕುಶ ಪ್ರಭುತ್ವವಾಗಬೇಕೆಂಬ ಯೋಜನೆಯಿದೆ.


ಒಂದು ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದ ಕ್ಷಣದಿಂದಲೇ ಮುಂದಿನ ಚುನಾವಣೆ, ಅದರ ಮುಂದಿನ ಚುನಾವಣೆಗಳನ್ನು ಗೆಲ್ಲುವುದಕ್ಕಾಗಿ ತಯಾರಿ ನಡೆಸುವುದೇ ಅಭಿವೃದ್ಧಿ ಕಾರ್ಯಕ್ರಮ ಎಂದು ಭಾವಿಸಿ ಅದರಂತೆ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ರಾಷ್ಟ್ರೀಯವಾಗಿ ಜನರಿಂದ ಪಡೆಯುವ ಸಾಲಗಳ ಜೊತೆಗೆ ಜಾಗತಿಕ ಸಾಲಗಳ ಹೊರೆ ಬೆಳೆಯುತ್ತಲೇ ಇದೆ. ವಿದೇಶೀ ನೀತಿಯೆಂದರೆ, ನೆರೆ–ಹೊರೆ ರಾಷ್ಟಗಳೊಂದಿಗೆ ಯೋಜಿತ ದ್ವೇಷ, ಮತ್ತು ಯುದ್ಧೋದ್ಯಮವನ್ನು ಉತ್ತೇಜಿಸುವ ದೇಶಗಳೊಂದಿಗೆ, ಯುದ್ಧವಿಮಾನ ಖರೀದಿ, ಶಸ್ತ್ರಾಸ್ತ್ರಗಳ ಖರೀದಿ ಮತ್ತು ರಹಸ್ಯ ವೀಕ್ಷಣಾ ಸಾಧನಗಳ ಹಾಗೂ ತಂತ್ರಜ್ಞಾನ ಖರೀದಿಯ ವ್ಯಾಪಾರ ಒಪ್ಪಂದಗಳನ್ನು ಏರ್ಪಡಿಸಿಕೊಳ್ಳುವುದು ಎಂದಾಗಿದೆ. ಕೌತುಕದ ವಿಷಯವೆಂದರೆ, ತಮ್ಮ ಜನವಿರೋಧೀ ನೀತಿಗಳಿಂದಾಗಿ ಜನರು ಮುಂದಿನ ಚುನಾವಣೆಗಳಲ್ಲಿ ತಮಗೆ ಮತಹಾಕದಿದ್ದರೆ? ಎಂಬಂಥ ಅನುಮಾನವಾಗಲಿ, ಅಂಜಿಕೆಯಾಗಲಿ ಸ್ವಲ್ಪವೂ ಇದ್ದಂತೆ ತೋರುವುದಿಲ್ಲ.

ಹಸಿರು ಕ್ರಾಂತಿಯ ಆರ್ಥಿಕ ನೀತಿಗಳಿಂದಾಗಿ ಆಹಾರದ ಉತ್ಪಾದನೆಯು ಗಣನೀಯವಾಗಿ ಹೆಚ್ಚಿತು, ನಿಜ. ಆದರೆ ಕೃಷಿಕರು ಅದಕ್ಕೆ ತೆರಬಾಗಿದ್ದ ಬೆಲೆ ಸಾಲಗಳ ಹೊರೆ ಮತ್ತು ಕೃಷಿಯ ಮೇಲೆ ಮಾರುಕಟ್ಟೆಯ ಹಿಡಿತ. ಭೂಮಿ ಮತ್ತು ಶ್ರಮಗಳನ್ನು ಹೊರತುಪಡಿಸಿ ಮಿಕ್ಕೆಲ್ಲವೂ ವ್ಯಾಪಾರಿಗಳಿಗೆ ಲಾಭ ತರುವ ಸರಕುಗಳಾಗಿಬಿಟ್ಟವು. ಅತೀವ ಸಾಲದ ಹೊರೆಗೆ ಕುಸಿದು ಕಂಗಾಲಾದ ಕೃಷಿಕರಲ್ಲಿ ಅನೇಕರು ಆತ್ಮಹತ್ಯೆಯ ದಾರಿಯನ್ನು ಹಿಡಿದರು. ಹಣಕಾಸು ಬಂಡವಾಳದ ಪ್ರಾಬಲ್ಯದಿಂದಾಗಿ ಮೂಲಸೌಕರ್ಯದ ನಿರ್ಮಾಣದ ಹೆಸರಿನಲ್ಲಿ, ಬೃಹತ್ ನಗರೀಕರಣ, ಕೈಗಾಗಾರಿಕಾ ಕಾರಿಡಾರ್, ಸ್ಮಾರ್ಟ್ ಸಿಟಿಗಳ ನಿರ್ಮಾಣ, ಬಹುರಸ್ತೆಗಳ ಹೆದ್ದಾರಿಗಳ ನಿರ್ಮಾಣ, ಭೂ ಮಾಫಿಯಾ ರಾಜಕೀಯ ಮತ್ತು ಇವನ್ನು ಆದ್ಯತೆಯೆಂದು ಪರಿಗಣಿಸುವ ಸರ್ಕಾರಗಳು ಜಾರಿಗೊಳಿಸಿದ ಭೂಸಂಬಂಧಿ ಕಾನೂನುಗಳ ತಿದ್ದುಪಡಿಗಳಿಂದಾಗಿ ಕೃಷಿ ಭೂಮಿಯು ದಿನೇ ದಿನೇ ಕಿರಿದಾಗುತ್ತಾ ಹೋಯಿತು. ಸಾಲಾಧಾರಿತ ಕೃಷಿಯಲ್ಲಿ ತೊಡಗಿಸಿಕೊಂಡು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ರೈತರು ಕಂಗಾಲಾಗಿದ್ದರು. ಈ ಸ್ಥಿತಿಯಲ್ಲಿ ಕಾಣಿಸಿಕೊಂಡ ಕೋವಿಡ್ 19, ಸಂಘಪರಿವಾರ ಸರ್ಕಾರದ ತಿಳಿಗೇಡಿ ನೀತಿಗಳಿಂದಾಗಿ ಇಡೀ ಜನಜೀವನವು ಆರ್ಥಿಕವಾಗಿ ಕತ್ತಲು ಕವಿದ ಸ್ಥಿತಿಯನ್ನು ತಲುಪಿತು. ಸಂಘಪರಿವಾರವು ಜನರ ಎಲ್ಲಾ ಕಷ್ಟಗಳಿಗೂ ಕೋವಿಡ್ ಕಾರಣವೆಂದು ಪ್ರಚಾರ ಮಾಡಿತು. ಜನರ ಸಂಕಷ್ಟದ ಸಮಯವನ್ನೇ ಬಳಸಿಕೊಂಡು ಜನವಿರೋಧೀ ಕಾನೂನು ತಿದ್ದುಪಡಿಗಳನ್ನು ಕಾನೂನು ಸಂಹಿತೆಗಳ ಸಂದುಗೊಂದುಗಳಿಗೆ ತುರುಕಲು ಆರಂಭಿಸಿತು.

ಜಾಗತೀಕರಣದ ಬಂಡವಾಳವಾದೀ ತಾತ್ವಿಕತೆಯು ಬೋಧಿಸಿದ್ದೇನೆಂದರೆ, ಸೋಲು ಗೆಲುವಿನ ಮೆಟ್ಟಿಲು. ಸಮಸ್ಯೆಯೇ ಲಾಭದ ತಾಯಿ. ಕತ್ತಲಿನಲ್ಲೇ ಬೆಳಕಿದೆ. ನಿರುದ್ಯೋಗವು ಉದ್ಯೋಗದ ಮುಕ್ತ ಅವಕಾಶಗಳ ಗಣಿ. ಕಷ್ಟಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವುದೇ ಅಭಿವೃದ್ಧಿ. ಶ್ರೀಮಂತರು ಹೆಚ್ಚು ಹೆಚ್ಚು ಶ್ರೀಮಂತರಾದಷ್ಟೂ ದೇಶದ ಬಡತನ ತಗ್ಗುತ್ತಾ ಹೋಗುತ್ತದೆ, ಇತ್ಯಾದಿ. ಹೊಟ್ಟೆ ತುಂಬಿದ, ಅಧ್ಯಾತ್ಮದ ಆಕಾಶದಲ್ಲಿ ವಿಹರಿಸುವ ಮಧ್ಯಮವರ್ಗದ ಜನರಿಗೆ ಇದು ಸತ್ಯವೆಂದು ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಆದರೆ, ಪ್ರಸ್ತುತ ಭಾರತದಲ್ಲಿ, ಕೃಷಿಕರಿಗೆ, ಶ್ರಮಜೀವಿಗಳಿಗೆ, ನೆಲದಮೇಲೆ ಜೀವಿಸುವ ಎಲ್ಲ ಮನುಷ್ಯರ ಬದುಕಿನಲ್ಲಿ ಹೆಚ್ಚುತ್ತಿರುವುದು ಒಂದೇ ಒಂದು– ನಿರುದ್ಯೋಗ–ಬಡತನಗಳ ಕಗ್ಗತ್ತಲೆ.

ಜನಸಾಮಾನ್ಯರಿಗೆ ಯಾವುದು ಸಮಸ್ಯೆಯ ಮೂಲವೋ, ಕಷ್ಟದ ಸಂದರ್ಭವೋ ಅದೇ ಬಂಡವಳಿಗರಿಗೆ ಲಾಭದ ಮೂಲವನ್ನು ಹೆಚ್ಚಿಸಿಕೊಳ್ಳುವ ಸುವರ್ಣ ಅವಕಾಶ.



ಗಾಡಿಯ ನೊಗಕ್ಕೆ ಹೆಗಲುಕೊಟ್ಟ ಎತ್ತು ಹೆಗಲಿನಲ್ಲಿ ಗಾಯವಾಗಿ ನರಳಿದಷ್ಟೂ ಎತ್ತಿನಮೇಲೆ ಕುಳಿತು ಆ ರಕ್ತ ಸಿಕ್ತ ಗಾಯವನ್ನು ಕುಕ್ಕುವ ಕಾಗೆಗೆ ಮಹದಾನಂದ.

ಕೋವಿಡ್ ಬರುವುದಕ್ಕಿಂತ ಮುಂಚೆಯೇ ಜನಸಾಮಾನ್ಯರ ಬದುಕು ಬಂಡವಾಳವಾದೀ ಆರ್ಥಿಕತೆಯಿಂದಾಗಿ ತೀವ್ರತರ ಸಮಸ್ಯೆಗಳಿಗೆ ಸಿಕ್ಕಿ ಹೈರಾಣವಾಗಿತ್ತು. ಜನಸಾಮಾನ್ಯರ ಬದುಕಿಗೆ ಮುಸುಕಿದ ಆರ್ಥಿಕ ಕತ್ತಲೆಯ ಸ್ಥಿತಿಯನ್ನು, ಕಾರ್ಪೊರೇಟ್ ಉದ್ಯಮಪತಿಗಳು ತಮ್ಮ ಮಿಲಿಯನ್ ಗಟ್ಟಲೆ ಮೌಲ್ಯದ ಸಂಪತ್ತನ್ನು ಡಿಜಿಟಲ್ ವ್ಯಾಪಾರದ ಮೂಲಕ ಸಾವಿರಾರು ಪಟ್ಟು ಹೆಚ್ಚಿಸಿಕೊಳ್ಳುವ ಮಹದವಕಾಶವಾಗಿ ಪರಿವರ್ತಿಸಿಕೊಳ್ಳಲು ಹೊರಟಿದ್ದರು. ಕೋವಿಡ್ ತಂದ ಕಷ್ಟಗಳ ಮರೆಯಲ್ಲಿ ಮಾಡಿದ ಹಗಲು ದರೋಡೆಯ ಹುನ್ನಾರಗಳನ್ನು 'ಕೋವಿಡೋತ್ತರ ನಾರ್ಮಲ್' ಎಂದೆಲ್ಲಾ ಪ್ರಚಾರ ಮಾಡಿದರು.

ಕಳ್ಳತನವನ್ನೇ ಉದ್ಯೋಗ ಮಾಡಿಕೊಂಡು ಜೀವಿಸುವವರು ಕತ್ತಲೆ ಆವರಿಸಿದಾಗ ಮನೆಗೆ ಕನ್ನಹಾಕುವ ಕಳ್ಳರಂತೆ, ನೂಕು ನುಗ್ಗಲಿನಲ್ಲಿ ಎಲ್ಲಿಂದಲೋ ಕೈಹಾಕಿ ಜನರ ಜೇಬು ಕತ್ತರಿಸುವವ ಜೇಬುಗಳ್ಳನಂತೆ, ಮೊದಲೇ ಆರ್ಥಿಕ ದುಃಸ್ಥಿತಿಯಲ್ಲಿ ರೈತರು ಮುಳುಗಿದ್ದಾಗ, ಕೋವಿಡ್ ಕತ್ತಲೆಯ ಲಾಭಪಡೆದ ಸಂಘಪರಿವಾರ ಸರ್ಕಾರವು ಕಾರ್ಪೊರೇಟ್ ಬಂಡವಾಳದ ಪರವಾದ ಕಾರ್ಮಿಕ ಮತ್ತು ಕೃಷಿ ಕಾನೂನುಗಳನ್ನು ದೇಶದ ಸಂಹಿತೆಗಳೊಳಕ್ಕೆ ನುಗ್ಗಿಸಿಬಿಟ್ಟಿದೆ. ಭಾರತದ ವಿವಿಧ ಮಟ್ಟದ ರೈತರ ಕೃಷಿಯನ್ನು ಪೂರ್ಣಮಟ್ಟದ ಕಾರ್ಪೊರೇಟ್ ವ್ಯಾಪಾರವನ್ನಾಗಿಸಲು ಈ ತಿದ್ದುಪಡಿಗಳು ಕಾರ್ಪೊರೇಟ್ ಬಂಡವಳಿಗರಿಗೆ ಕಾನೂನಿನ ಬಲವನ್ನು ಒದಗಿಸುತ್ತವೆ. ಮನೆಗೆ ಕನ್ನ ಹಾಕಲು ಬರುವ ಕಳ್ಳರನ್ನು, ಮನೆಯ ರಕ್ಷಣೆಗಾಗಿ ನೇಮಿಸಿಕೊಂಡ 'ಚೌಕೀದಾರನೇ' ಸ್ವಾಗತಿಸಿ ಮನೆಯ ಮುಂಬಾಗಿಲನ್ನೇ ತೆರೆದಿಡುವ ವಿಕೃತ ಮತ್ತು ಘಾತುಕ ಕ್ರಮ ಇದು.

ಬಂಡವಾಳವು ತನ್ನ ಗೋರಿಯನ್ನು ತೋಡುವವರನ್ನು ತಾನೇ ಹುಟ್ಟಿಸುತ್ತದೆ ಎಂಬುದು ಹಳೆಯ ಮಾತು. ಈಗ ಅದು ಹಾಗೆ ಮಾಡುತ್ತಿಲ್ಲ. ಬದಲು, ಕಾರ್ಪೊರೇಟ್ ಬಂಡವಾಳದ ಮೂರ್ತರೂಪಗಳಾದ ಕೋಟ್ಯಾಧಿಪತಿಗಳು ತಮ್ಮ ಗೋರಿಗಳನ್ನು ಸ್ವತಹ ತಾವೇ ತೋಡಿಕೊಳ್ಳಲು ಹೊರಟಿದ್ದಾರೆ.

ಕಗ್ಗತ್ತಲೆಯಲ್ಲಿ ಬೆಳಕಿನ ಕಿಂಡಿಗಾಗಿ ಎಲ್ಲರೂ ತಡಕಾಡುತ್ತಿರುವಾಗ, ಅಂಥದೊಂದು ಕಿಂಡಿಯು ಕೃಷಿಕರ ಆಂದೋಲನದ ಮೂಲಕ ಕಾಣಿಸಿಕೊಂಡಿದೆ.

ಕೃಷಿ 'ಕಾನೂನು'ಗಳ ರದ್ದತಿಗಾಗಿ ದೆಹಲಿಯ ಗಡಿಗಳಲ್ಲಿ ಅಪೂರ್ವ ರೀತಿಗಳಲ್ಲಿ ಸಂಘಟಿತವಾಗಿ ನಡೆಯುತ್ತಿರುವ ಚರಿತ್ರಾರ್ಹ ರೈತಚಳುವಳಿಯಲ್ಲಿ ಏಳು ಮುಖ್ಯ ಅಂಶಗಳು ಎಲ್ಲರ, ಅದರಲ್ಲೂ ಹೋರಾಟಗಾರರ ಗಮನವನ್ನು ಸೆಳೆಯುತ್ತವೆ. ಅವೆಂದರೆ–

1. ಚಳುವಳಿಗೆ ಕಾರಣವಾಗಿರುವ ಮೂರು ಕಾನೂನುಗಳ ರಾಜಕೀಯ ಮತ್ತು ಆರ್ಥಿಕ ಒಳಸ್ವರೂಪದ ಬಗ್ಗೆ, ಅಂದರೆ ಕಾರ್ಪೊರೇಟ್ ಬಂಡವಾಳದ ಹುನ್ನಾರಗಳ ಬಗ್ಗೆ ಚಳುವಳಿ

ಪುಟ 15 ಕ್ಕೆ





ವಿದೇಶಾಂಗ ಧೋರಣೆಯಲ್ಲಿ ಗೊಂದಲ

2020 ಮುಗಿಯುತ್ತಿದ್ದಂತೆ ಅಮೆರಿಕಾದ ಮಿಲಿಟರಿ ಮಿತ್ರನಾದುದಕ್ಕೆ ತೆರಬೇಕಾಗಿರುವ ಬೆಲೆಯೇನು ಎಂಬುದನ್ನು ಭಾರತ ಕಲಿಯುತ್ತಿದೆ. ಅಧಿಕಾರ ಬಿಡುತ್ತಿರುವ ಅಮೆರಿಕನ್ ರಾಯಭಾರಿ ತನ್ನ ಬೀಳ್ಕೊಡಿಗೆ ಭಾಷಣದಲ್ಲಿ 'ಮೇಕ್ ಇನ್ ಇಂಡಿಯ' ಮತ್ತು 'ಆತ್ಮನಿರ್ಭರ' ಧೋರಣೆಗಳು ಸರಿಯಿಲ್ಲ ಎಂದು ಹೇಳಲು ಹಿಂದೆ-ಮುಂದೆ ನೋಡಲಿಲ್ಲ. ಆತ ನೀಡಿದ ಎಚ್ಚರಿಕೆ ಸ್ಪಷ್ಟವಾಗಿತ್ತು- ನೀವು ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು, ಇಲ್ಲವಾದರೆ, ವ್ಯಾಪಾರ ಒಪ್ಪಂದ ಇರುವುದಿಲ್ಲ.

ಬಿಡೆನ್ ಆಡಳಿತ ಮೂಡಿಬರುತ್ತಿರುವುದು ಸರಕಾರಕ್ಕೆ ತನ್ನ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಬಲಪಡಿಸುವಂತೆ ಅಮೆರಿಕಾದೊಂದಿಗೆ ತನ್ನ ಸಂಬಂಧಗಳನ್ನು ಪುನರ‍್ರೂಪಿಸಿಕೊಳ್ಳಲು ಅವಕಾಶ ಕೊಡುತ್ತಿದೆ. ಅದನ್ನು ಮಾಡದಿದ್ದರೆ, 2021 ಕೂಡ ಮೋದಿ ಸರಕಾರದ ಕಣ್ಣುಪಟ್ಟಿ ಕಟ್ಟಿಕೊಂಡ ವಿದೇಶಾಂಗ ಧೋರಣೆಯ ಶೋಚನೀಯ ಪರಿಣಾಮಗಳು ಅನಾವರಣಗೊಳ್ಳುವುದು ಮುಂದುವರೆಯುತ್ತದೆ.



ಪ್ರಕಾಶ ಕಾರಟ್

ಮೋದಿ ಸರಕಾರದ ವಿದೇಶಾಂಗ ಧೋರಣೆ ಗೊಂದಲಕ್ಕೆ ಬಿದ್ದಿದೆ, ಅದರ ಅಮೆರಿಕ-ಪರ ನಿಲುವು ದೇಶವನ್ನು ಮುಂದೆ ಸಾಮರಿಕವಾಗಿ ಮುಂದಿನ ದಾರಿಗಾಣದ ಪರಿಸ್ಥಿತಿಗೆ ತಂದಿಟ್ಟಿದೆ ಎಂಬುದನ್ನು ಗಂಭೀರವಾಗಿ ನೆನಪಿಸುವುದರೊಂದಿಗೆ ಹೊಸ ವರ್ಷ ಆರಂಭವಾಗಿದೆ.

ಅಧಿಕಾರದಿಂದ ಹೊರಹೋಗುತ್ತಿರುವ ಅಮೆರಿಕಾ ಸಂಯುಕ್ತ ಸಂಸ್ಥಾನ(ಅ.ಸಂ.ಸಂ.)ಗಳ ರಾಯಭಾರಿ ಕೆನೆಥ್ ಜಸ್ಟರ್ ತನ್ನ ಬೀಳ್ಕೊಡಿಗೆ ಭಾಷಣದಲ್ಲಿ ಮೋದಿ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಭಾರತವನ್ನು ಸರಣಿ-ಸರಣಿಯಾಗಿ ಮಿಲಿಟರಿ ಒಪ್ಪಂದಗಳ ಮೂಲಕ ಕಟ್ಟಿ ಹಾಕಿದ ನಂತರ, ದೇಶ ಯಾವುದೇ ರೀತಿಯಲ್ಲಿ ವ್ಯೂಹಾತ್ಮಕ 'ಸ್ವಾಯತ್ತತೆಯನ್ನು ತೋರಿಸುವುದು ಅಮೆರಿಕಾಕ್ಕೆ ಸರಿಬರದು. "ಈ ಭದ್ರತಾ ಪರಿಸರದಲ್ಲಿ, ಹೇಗೆ ಒಂದು ಸಲಕರಣೆ ಒಂದು ಸರಿಯಾದ ವ್ಯವಸ್ಥೆ ಮತ್ತು ಕಾರ್ಯವ್ಯೂಹದೊಳಕ್ಕೆ ಪರಿಣಾಮಕಾರಿಯಾಗಿ ಸಮಗ್ರಗೊಳ್ಳುತ್ತದೆ, ಮತ್ತು ಇಂದು ಖರೀದಿಸಿದ ಉತ್ಪನ್ನ ಭವಿಷ್ಯದಲ್ಲಿ ಮೇಲ್ಮಟ್ಟದ ತಂತ್ರಜ್ಞಾನದ ಉತ್ಪನ್ನಕ್ಕೆ ದಾರಿ ಮಾಡಿಕೊಡುತ್ತದೆ ಅಥವ ಅದನ್ನು ಪಡೆಯದಂತೆ ಮಾಡುತ್ತದೆ ಎಂಬದನ್ನು ಪರಿಶೀಲಿಸುವುದು ಒಳ್ಳೆಯದು" ಎಂದು ರಾಜತಾಂತ್ರಿಕ ಭಾಷೆಯಲ್ಲಿ ಜಸ್ಟರ್ ಸಾಧ್ಯವಾದಷ್ಟು ನೇರವಾಗಿಯೇ ಈ ವಿಷಯವನ್ನು ಮುಂದಿಟ್ಟರು.

BECA, COMCASA ಮತ್ತು ಕೈಗಾರಿಕಾ ಸಂಕೀರ್ಣ ಇವೆಕ್ಕೆಲ್ಲ ಸಹಿ ಮಾಡಿಯಾಗಿದೆ. ಇವೆಲ್ಲವೂ ಅಂತರ-ನಿರ್ವಹಣೆಯನ್ನು ಮತ್ತು ಷರತ್ತುಬದ್ಧ ತಂತ್ರಜ್ಞಾನವನ್ನು ಖಾತ್ರಿಗೊಳಿಸುವಂತವುಗಳು. ಇವಕ್ಕೆ ಸಹಿ ಮಾಡಿದ ಮೇಲೆ ಭಾರತ ಯಾವ ಶಸ್ತ್ರ ವ್ಯವಸ್ಥೆಯನ್ನು ಮತ್ತು ತಂತ್ರಜ್ಞಾನವನ್ನು ಪಡೆಯಬೇಕು ಎಂಬುದನ್ನು ಅ.ಸಂ.ಸಂ. ನಿರ್ದೇಶಿಸುತ್ತದೆ. ಮೋದಿ ಸರಕಾರ ಭಾರತವನ್ನು ಒಂದು ಬಲೆಯಲ್ಲಿ ಸಿಲುಕಿಸಿದೆ.

ಭಾರತವು ರಷ್ಯಾದಿಂದ ಎಸ್-400 ಕ್ಷಿಪಣಿ ವ್ಯವಸ್ಥೆಯನ್ನು ಖರೀದಿಸುವ ಒಪ್ಪಂದಕ್ಕೆ ಸಹಿ ಹಾಕಿದೆ. ಮತ್ತು ಈಗಾಗಲೇ ಮುಂಗಡ ಮೊತ್ತವನ್ನೂ ಪಾವತಿ ಮಾಡಿದೆ. ಅ.ಸಂ.ಸಂ. ತನ್ನ ಸಿ.ಎ.ಎ.ಟಿ.ಎಸ್.ಎ. (ನಿರ್ಬಂಧಗಳ ಮೂಲಕ ಅಮೆರಿಕಾದ ಎದುರಾಳಿಗಳನ್ನು ಎದುರಿಸುವ ಕಾಯ್ದೆ) ಅಡಿಯಲ್ಲಿ ರಷ್ಯಾದಿಂದ ಮಿಲಿಟರಿ ಸಲಕರಣೆಗಳನ್ನು ಖರೀದಿಸುವ ಯಾವುದೇ ದೇಶದ ಮೇಲೆ ನಿರ್ಬಂಧ ಹೇರಲು ಸಾಧ್ಯವಿದೆ. ಈಗಾಗಲೇ ಎಸ್-400 ಕ್ಷಿಪಣಿಗಳನ್ನು ಖರೀದಿಸಿದ್ದಕ್ಕಾಗಿ ಅದು ತನ್ನ ನಾಟೋ ಮಿತ್ರದೇಶವಾದ ಟರ್ಕಿಯಲ್ಲಿನ ಘಟಕಗಳಿಗೆ ನಿರ್ಬಂಧ ಹಾಕಿದೆ.

ಜಸ್ಟರ್ ಮಾತುಗಳಲ್ಲಿ ಹೇಳುವುದಾದರೆ, "ವ್ಯವಸ್ಥೆಗಳ ತಂತ್ರಜ್ಞಾನ ಹೆಚ್ಚೆಚ್ಚು ಮೇಲ್ಮಟ್ಟಗಳಿಗೆ ಹೋದಂತೆ, ದೇಶ 'ಎ'ಗೆ ದೇಶ 'ಬಿ'ಯೊಂದಿಗೆ ಸರಿಬರದಿದ್ದರೆ, ದೇಶ 'ಬಿ'ಗೆ ಸಂದೇಹಾಸ್ಪದವಾಗಬಹುದಾದ ತಂತ್ರಜ್ಞಾನವನ್ನು ಮಾರುವ ಇಚ್ಛೆ ಕಡಿಮೆಯಾಗುತ್ತದೆ." ಮುಂದುವರೆದು ಅವರು "ನಾವಿನ್ನೂ ಅಲ್ಲಿಯ ವರೆಗೆ ಹೋಗಿಲ್ಲ, ಆದರೆ ಭವಿಷ್ಯದಲ್ಲಿ ಅದು ಬರಬಹುದು... ತನ್ನ ತಂತ್ರಜ್ಞಾನದೊಳಗೆ ಮತ್ತು ಮಿತ್ರ ಶಕ್ತಿಗಳೊಂದಿಗೆ ಅಂತರ-ನಿರ್ವಹಣೆ ಸಾಧ್ಯವಿರುವ ಹೆಚ್ಚು ಮುಂದುವರೆದ ತಂತ್ರಜ್ಞಾನವನ್ನು ಪಡೆಯಲು ಎಷ್ಟರ ಮಟ್ಟಿಗೆ ಕೊಡು-ಕೊಳ್ಳು ಮಾಡಬೇಕಾಗಬಹುದು ಎಂದು ಭಾರತ ನಿರ್ಧರಿಸಬೇಕಾಗುತ್ತದೆ" ಎಂದು ಅವರು ಹೇಳಿದರು.

ಅಮೆರಿಕ ಸಂಯುಕ್ತ ಸಂಸ್ಥಾನ ಈಗ ರಷ್ಯಾದಿಂದ ಭವಿಷ್ಯದಲ್ಲಿ ಭಾರತದ ಶಸ್ತ್ರ ಖರೀದಿಗಳನ್ನೆಲ್ಲ ಮುಚ್ಚಿಸಿ ಬಿಡುವುದರಲ್ಲಿ ನಿರತವಾಗಿದೆ. ಅಮೆರಿಕಾದ ಮಿಲಿಟರಿ ಮಿತ್ರನಾದುದಕ್ಕೆ ತೆರಬೇಕಾಗಿರುವ ಬೆಲೆಯೇನು ಎಂಬುದನ್ನು ಭಾರತ ಕಲಿಯುತ್ತಿದೆ.

ಈ ರಾಯಭಾರಿ ಸರಕಾರದ 'ಮೇಕ್ ಇನ್ ಇಂಡಿಯ' ಮತ್ತು 'ಆತ್ಮನಿರ್ಭರ' ಧೋರಣೆಗಳು ಸರಿಯಿಲ್ಲ ಎಂದು ಹೇಳಲು ಹಿಂದೆ-ಮುಂದೆ ನೋಡಲಿಲ್ಲ. ಆತ ನೀಡಿದ ಎಚ್ಚರಿಕೆ ಸ್ಪಷ್ಟವಾಗಿತ್ತು- ನೀವು ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು, ಇಲ್ಲವಾದರೆ, ವ್ಯಾಪಾರ ಒಪ್ಪಂದ ಇರುವುದಿಲ್ಲ.

ರಷ್ಯಾದಿಂದ ಖರೀದಿಯ ಬಗ್ಗೆ ಕಟು ನಿಲುವು ಬಿಡೆನ್ ಆಡಳಿತ ವಹಿಸಿಕೊಂಡ ಮೇಲೆ ಬದಲಾಗಲಿಕ್ಕಿಲ್ಲ. ಏಕೆಂದರೆ ಈ ಆಡಳಿತವೂ ರಷ್ಯಾವನ್ನು ವೈರಪೂರ್ಣ ಎದುರಾಳಿ ಎಂದೇ ಪರಿಗಣಿಸುತ್ತದೆ. ಮೋದಿ ಸರಕಾರ ಅಮೆರಿಕಾದ ಸಿ.ಎ.ಎ.ಟಿ.ಎಸ್.ಎ. ಕಾಯ್ದೆಯಿಂದ ಬಚಾವಾಗಬೇಕಾದರೆ ಅಮೆರಿಕನ್ನರಿಗೆ ಹೆಚ್ಚಿನ ರಿಯಾಯ್ತಿಗಳನ್ನು ಕೊಡಬೇಕಾಗುತ್ತದೆ, ನಿರ್ದಿಷ್ಟವಾಗಿ ಅವರಿಂದ ಹೆಚ್ಚು ವೆಚ್ಚದಾಯಕ ಶಸ್ತ್ರಾಸ್ತ್ರಗಳನ್ನು ಖರೀದಿಸಬೇಕಾಗುತ್ತದೆ.

ಈ ರೀತಿ ಅಮೆರಿಕಾದೊಂದಿಗೆ ಸಾಲುಗಟ್ಟಿ ನಿಂತಿರುವುದು ಭಾರತದ ಪಾರಂಪರಿಕ ಸಂಬಂಧಗಳು ಮತ್ತು ಮಿತ್ರತ್ವಗಳನ್ನು ಪ್ರತಿಕೂಲವಾಗಿ ಬಾಧಿಸಬಹುದು ಎಂದು ಬೇರೆ ಹೇಳಬೇಕಾಗಿಲ್ಲ. ರಷ್ಯಾದ ವಿದೇಶಾಂಗ ಮಂತ್ರಿ ಸರ್ಗೆ ಲಾವ್ರೊವ್ ಕಳೆದ ತಿಂಗಳು ಭಾರತ-ಶಾಂತಿಸಾಗರ ಕಾರ್ಯವ್ಯೂಹವನ್ನು ಮತ್ತು ಕ್ವಾಡ್‌ನ್ನು ಭಾರತವನ್ನು ಚೀನಾ-ವಿರೋಧಿ ಆಟಗಳಲ್ಲಿ ತೊಡಗಿಸುವ ಮತ್ತು "ಭಾರತದೊಡನೆ ನಮ್ಮ ನಿಕಟ ಭಾಗೀದಾರಿಕೆ ಹಾಗೂ ವಿಶೇಷ ಸಂಬಂಧಗಳನ್ನು ಶಿಥಿಲಗೊಳಿಸುವ" ಪಾಶ್ಚಿಮಾತ್ಯ ದೇಶಗಳ "ಆಕ್ರಮಣಕಾರಿ ಮತ್ತು ಕಪಟ" ಧೋರಣೆ ಎಂದು ವರ್ಣಿಸಿದರು.

ಬೇರೆ ದೇಶಗಳು ಮತ್ತು ಪ್ರಮುಖ ಕೇಂದ್ರಗಳು ಚೀನಾದೊಂದಿಗೆ ಆರ್ಥಿಕ ಸಂಬಂಧಗಳನ್ನು ಗಟ್ಟಿಗೊಳಿಸುತ್ತಿರುವಾಗ, ಭಾರತ ತನ್ನನ್ನು ಚೀನಾದ ವಿರುದ್ಧ ಟ್ರಂಪ್-ಪೊಂಪಿಯೊ ಬಂಡಿಗೆ ತಗುಲಿಸಿಕೊಂಡು, ಒಂದು ಗೂಡಿನಲ್ಲಿ ಸಿಲುಕಿರುವಂತಾಗಿದೆ. ಡಿಸೆಂಬರ್ 30 ರಂದು, ಯುರೋಪಿಯನ್ ಒಕ್ಕೂಟ ಮತ್ತು ಚೀನಾ, ದೀರ್ಘ ಮಾತುಕತೆಗಳ ನಂತರ ಒಂದು 'ಸಮಗ್ರ ಹೂಡಿಕೆ ಒಪ್ಪಂದ'(ಸಿಎಐ) ಮಾಡಿಕೊಂಡಿವೆ.

ಒಬ್ಬ ಸಾಮರಿಕ ವಿಷಯಗಳ ಟಿಪ್ಪಣಿಗಾರರು ಹೇಳಿರುವಂತೆ, "ಭೌಗೋಳಿಕ-ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ, ಸಿ.ಎ.ಐ. ಯುರೋಪ್ ವ್ಯೂಹಾತ್ಮಕವಾಗಿ ಸ್ವತಂತ್ರವಾಗಿರ ಬಯಸುತ್ತದೆ ಎಂಬುದನ್ನು ಸೂಚಿಸುತ್ತದೆ. ಇದು ಚೀನಾವನ್ನು ತಡೆದಿಡುವ ಅಮೆರಿಕ ನೇತೃತ್ವದ 'ಭಾರತ- ಶಾಂತಸಾಗರ' ವ್ಯೂಹವನ್ನು ಸೇರಲು ಸಿದ್ಧಗೊಳ್ಳುತ್ತಿದೆ ಎಂಬ ಭಾರತದ ವಿದೇಶಾಂಗ ಧೋರಣೆಯನ್ನು ಪುಡಿಗುಟ್ಟಿದೆ. ಅಮೆರಿಕಾದ ಯುಗಳ ಜಗತ್ತಿನ ಪರಿಯೋಜನೆಯಿಂದ ಯುರೋಪು ಹಿಂದೆ ಸರಿಯುತ್ತಿದೆ ಎಂಬುದು ಇಲ್ಲಿನ ಕೇಂದ್ರ ವಿಷಯ."

ಈ ಮೊದಲು ಏಷ್ಯಾ-ಶಾಂತಸಾಗರ ದೇಶಗಳು ಸಹಿ ಹಾಕಿರುವ ಆರ್.ಸಿ.ಇ.ಪಿ.(ಪ್ರಾದೇಶಿಕ ಸಮಗ್ರ ಆರ್ಥಿಕ ಕಾರ್ಯಕ್ರಮ)ಯೊಂದಿಗೆ ಚೀನಾ ಜಗತ್ತಿನ ಅತ್ಯಂತ ದೊಡ್ಡ ಮುಕ್ತ-ವ್ಯಾಪಾರ ಒಪ್ಪಂದದ ಭಾಗವಾಗಿ ಬಿಟ್ಟಿದೆ. ಚೀನಾ 2020ನ್ನು ಧನಾತ್ಮಕ ಬೆಳವಣಿಗೆ ದರದೊಂದಿಗೆ ಮುಗಿಸಿರುವ ಏಕೈಕ ಪ್ರಧಾನ ದೇಶವಾಗಿದೆ ಮತ್ತು ಒ.ಇ.ಸಿ.ಡಿ.ಪ್ರಕಾರ 2021ರ ಆರ್ಥಿಕ ಪುನಶ್ಚೇತನದ ಸುಮಾರು ಮೂರನೇ ಒಂದು ಭಾಗ ಚೀನಾದ್ದಾಗಿರುತ್ತದೆ.

ಭಾರತವು ಚೀನೀ ಹೂಡಿಕೆಗಳನ್ನು ಮತ್ತು ದ್ವಿಪಕ್ಷೀಯ ವ್ಯಾಪಾರವನ್ನು ಕಡಿತ ಮಾಡುವ ಪ್ರಯತ್ನಗಳಿಂದಾಗಿ ಅಂಚಿನಲ್ಲಿ ಉಳಿಯಬೇಕಾಗಿ ಬಂದಿದೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಕಾರ್ಯದರ್ಶಿಯಾಗಿ ತನ್ನ ಕೊನೆಯ ದಿನಗಳಲ್ಲಿ ಪೊಂಪಿಯೊ ಒಂದಷ್ಟು ಆದೇಶಗಳನ್ನು ಹೊರಡಿಸಿದ್ದಾರೆ. ಅವುಗಳಲ್ಲಿ ಇರಾನಿನೊಂದಿಗೆ ವ್ಯಾಪಾರ ಮಾಡುವ ಕಂಪನಿಗಳ ಮೇಲೆ ಹೆಚ್ಚು ನಿರ್ಬಂಧಗಳು; ಕ್ಯೂಬಾಕ್ಕೆ ಮತ್ತೆ 'ಭಯೋತ್ಪಾದನೆಯ ಪ್ರಾಯೋಜಕ' ಸ್ಥಾನಮಾನ; ವೆನೆಜುವೆಲಾದ ರಾಷ್ಟ್ರೀಯ ಅಸೆಂಬ್ಲಿಗೆ ಚುನಾವಣೆಯ ನಂತರ ಸಮಾನಾಂತರ ಅಧ್ಯಕ್ಷರಿಗೆ ಬೆಂಬಲದ ಪುನರುಚ್ಚಾರ; ಮೂವರು ಪತ್ರಕರ್ತರರಿಗೆ ಶಿಕ್ಷೆ ವಿಧಿಸಿದ್ದಕ್ಕೆ ವಿಯೆಟ್ನಾಂನ ಖಂಡನೆ ಮತ್ತು ತೈವಾನಿನೊಂದಿಗೆ ಅಮೆರಿಕನ್ ಅಧಿಕಾರಿಗಳ ಸಂಪರ್ಕಗಳ ಮೇಲಿನ ಎಲ್ಲ ಮಿತಿಗಳನ್ನು ತೆಗೆದು ಹಾಕುವುದು ಸೇರಿದೆ.

ಇಂತಹ ಒಬ್ಬ ಅಸಹ್ಯ ವ್ಯಕ್ತಿಯೊಂದಿಗೇ ವಿದೇಶಾಂಗ ಮಂತ್ರಿ ಎಸ್ ಜೈಶಂಕರ್ ಭ್ರಾಮಕ ಭಾರತ-ಶಾಂತಸಾಗರ ಪ್ರದೇಶವನ್ನು ಅಮೆರಿಕ ಸಂಯುಕ್ತ ಸಂಸ್ಥಾನ ತನ್ನ ಆಧಿಪತ್ಯವನ್ನು ನಡೆಸಲಿಕ್ಕಾಗಿ "ಮುಕ್ತವಾಗಿಡಲು ಮತ್ತು ತೆರೆದಿಡಲು" ಹೊಂದಾಣಿಕೆಯಿಂದ ಜತೆ-ಜತೆಗೆ ಕೆಲಸ ಮಾಡಿದ್ದು.


ಈ ಏಕ-ಆಯಾಮದ ವಿದೇಶಾಂಗ ಧೋರಣೆಯಿಂದಾಗಿ, ತೈಲ ಖರಿದಿ ಕುರಿತಂತೆ ಅಮೆರಿಕಾದ ಆದೇಶಗಳನ್ನು ಸ್ವೀಕರಿಸಿ ಒಂದು ಪಾರಂಪರಿಕ ಮಿತ್ರದೇಶವಾದ ಇರಾನಿನೊಂದಿಗೆ ಸಂಬಂಧಗಳಲ್ಲಿ ಕ್ಲೇಶ ಉಂಟಾಗುವಂತಾಯಿತು; ತನ್ನ ದಕ್ಷಿಣ ಏಷ್ಯಾ ನೆರೆ ದೇಶಗಳೊಂದಿಗೆ ಚೀನಾದ ಬೆಳೆಯುತ್ತಿರುವ ಸಂಬಂಧಗಳನ್ನು ತಡೆಯುವ ನಿರರ್ಥಕ ಪ್ರಯತ್ನಗಳು ಮತ್ತು ಪ್ರಕ್ರಿಯೆಯಲ್ಲಿ ಅವುಗಳಿಗೆ ಕಿರಿಕಿರಿ ಉಂಟುಮಾಡುವಂತಾಯಿತು; ಮತ್ತು ಅಮೆರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿ ಅಲಿಪ್ತ ದೇಶಗಳ ಪೈಕಿ ಭಾರತವನ್ನು ಸೌದಿ ಅರೇಬಿಯಾದ ಸ್ಥಾನಕ್ಕೆ ಇಳಿಸುವಂತಾಯಿತು.

ಬಿಡೆನ್ ಆಡಳಿತ ಮೂಡಿಬರುತ್ತಿರುವುದು ಸರಕಾರಕ್ಕೆ ತನ್ನ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಬಲಪಡಿಸಲು ಅಮೆರಿಕಾದೊಂದಿಗೆ ತನ್ನ ಸಂಬಂಧಗಳನ್ನು ಪುನರ‍್ರೂಪಿಸಿಕೊಳ್ಳಲು ಅವಕಾಶ ಕೊಡುತ್ತಿದೆ. ಅದನ್ನು ಮಾಡದಿದ್ದರೆ, 2021 ಕೂಡ ಮೋದಿ ಸರಕಾರದ ಕಣ್ಣುಪಟ್ಟಿ ಕಟ್ಟಿಕೊಂಡ ವಿದೇಶಾಂಗ ಧೋರಣೆ ಮತ್ತು ಸಾಮರಿಕ ನಿಲುವಿನ ಶೋಚನೀಯ ಪರಿಣಾಮಗಳು ಅನಾವರಣಗೊಳ್ಳುವುದು ಮುಂದುವರೆಯುತ್ತದೆ.



'ಕ್ವಾಡ್' ಕೂಟದ ಬಗ್ಗೆ ಒಂದು ವ್ಯಂಗ್ಯ- ಎಸ್‌ಸಿಎಂಪಿ.ಕಾಂ

"ಭೌಗೋಳಿಕ-ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ, ಸಿ.ಎ.ಐ. ಯುರೋಪ್ ವ್ಯೂಹಾತ್ಮಕವಾಗಿ ಸ್ವತಂತ್ರವಾಗಿರ ಬಯಸುತ್ತದೆ ಎಂಬುದನ್ನು ಸೂಚಿಸುತ್ತದೆ. ಇದು ಚೀನಾವನ್ನು ತಡೆದಿಡುವ ಅಮೆರಿಕ ನೇತೃತ್ವದ 'ಭಾರತ- ಶಾಂತಸಾಗರ' ವ್ಯೂಹವನ್ನು ಸೇರಲು ಯುರೋಪ್ ಸಿದ್ಧಗೊಳ್ಳುತ್ತಿದೆ ಎಂಬ ಭಾರತದ ವಿದೇಶಾಂಗ ಧೋರಣೆಯನ್ನು ಪುಡಿಗುಟ್ಟಿದೆ."
–ಒಬ್ಬ ಸಾಮರಿಕ ವಿಷಯಗಳ ವಿಶ್ಲೇಷಕರು



ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ಕೃಷಿ ಕಾಯ್ದೆಗಳನ್ನು ಕುರಿತ ಏಕಪಕ್ಷೀಯ ಆದೇಶ

ಸುಪ್ರಿಂ ಕೋರ್ಟ್ ಮೂರು ಕೃಷಿ ಕಾಯ್ದೆಗಳ ಅನುಷ್ಠಾನದ ಮೇಲೆ ತಡೆ ಹಾಕಿರುವ ಆದೇಶ ಅದು ಸರಕಾರವನ್ನೇ ಅವಲಂಬಿಸಿ ನೇಮಿಸಿದಂತಿರುವ 'ಪರಿಣಿತರ ಸಮಿತಿ'ಯ ಪೂರ್ವನಿರ್ಧಾರಿತ ವರದಿ ಸಲ್ಲಿಕೆಯೊಂದಿಗೆ ಕೊನೆಗೊಳ್ಳುತ್ತದೆ. ರೈತರು ತಮ್ಮ ಪ್ರತಿಭಟನೆಯನ್ನು ಕೈಬಿಟ್ಟು ಮನೆಗೆ ಹೋಗಲು ಈ ಆದೇಶ ಸಾಕಾಗುತ್ತದೆ ಎಂದೂ ಸುಪ್ರಿಂ ಕೋರ್ಟ್ ಸ್ಪಷ್ಟಪಡಿಸಿದೆ. ಅಲ್ಲದೆ ಖಾಲಿಸ್ತಾನಿಗಳು ನುಸುಳಿದ್ದಾರೆಂಬ ನೆವವೊಡ್ಡಿ ಪ್ರತಿಭಟನೆಯನ್ನು ದಮನ ಮಾಡಬಹುದೆಂಬ ಸೂಚನೆಯೂ ಕೋರ್ಟಿನ ನಿಲುವಿನಿಂದ ಸರಕಾರಕ್ಕೆ ಸಿಕ್ಕಿದೆ ಎಂದು ಸಿಪಿಐ(ಎಂ) ನ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಈ ಸಂಪಾದಕೀಯ ಲೇಖನ ವಿಶ್ಲೇಷಿಸಿದೆ.

ಮೂರು ಕೃಷಿ ಕಾಯ್ದೆಗಳು ಮತ್ತು ಅವುಗಳ ವಿರುದ್ಧ ರೈತರ ಹೋರಾಟವನ್ನು ಕುರಿತ ಸರ್ವೋಚ್ಚ ನ್ಯಾಯಾಲಯದ ಆದೇಶ ಸರಿಯಾಗಿ ಗ್ರಹಿಸಿರದ ಮತ್ತು ಏಕಪಕ್ಷೀಯ ಆದೇಶವಾಗಿದೆ.

ಮುಖ್ಯ ನ್ಯಾಯಾಧೀಶ ಎಸ್.ಎ.ಬೊಬ್ಡೆ ನೇತೃತ್ವದ ಮೂವರು ನ್ಯಾಯಾಧೀಶರುಗಳಿರುವ ಪೀಠ ಈ ಮೂರು ಕೃಷಿ ಕಾಯ್ದೆಗಳ ಅನುಷ್ಠಾನವನ್ನು ಮುಂದಿನ ಆದೇಶಗಳ ವರೆಗೆ ತಡೆ ಹಿಡಿದಿದೆ. ಇದು ಕೆಲವು ವಿಭಾಗಗಳನ್ನು ತಪ್ಪು ದಾರಿಗೆಳೆದು ಸುಪ್ರಿಂ ಕೋರ್ಟಿನ ಮಧ್ಯಪ್ರವೇಶವನ್ನು ಅವು ಪ್ರಶಂಸಿಸುವಂತೆ ಮಾಡಿದೆ. ವಾಸ್ತವವಾಗಿ, ಈ ತಡೆ ಆದೇಶ 'ಪರಿಣಿತರ ಸಮಿತಿ'ಯ ರಚನೆಯೊಂದಿಗೆ ತಳಕು ಹಾಕಿಕೊಂಡಿದೆಯೇ ಹೊರತು ಈ ನ್ಯಾಯಪೀಠದ ಮುಂದಿದ್ದ ಅರ್ಜಿಗಳಲ್ಲಿ ಎತ್ತಿದ ಮುಖ್ಯ ಪ್ರಶ್ನೆಗಳು ಅಥವ ಹೋರಾಟದಲ್ಲಿ ರೈತರು ಎತ್ತುವ ಪ್ರಶ್ನೆಗಳ ಬಗ್ಗೆ ಯಾವುದೇ ಮುಂದಿನ ವಿಚಾರಣೆಯೊಂದಿಗೆ ಅಲ್ಲ. ಈ 'ಪರಿಣಿತರ ಸಮಿತಿ'ಗೆ ಎರಡು ತಿಂಗಳೊಳಗೆ ವರದಿ ನೀಡುವಂತೆ ನಿರ್ದೇಶನ ನೀಡಲಾಗಿದೆ.

ಅರ್ಜಿದಾರರಲ್ಲಿ ಯಾರೂ ಈ ಸಮಿತಿಯನ್ನು ರಚಿಸಬೇಕೆಂದು ಕೇಳಿರಲಿಲ್ಲ. ಅಲ್ಲದೆ, ರೈತರ ಪ್ರತಿನಿಧಿಗಳು ಸರಕಾರದೊಡನೆ ಮಾತುಕತೆಗಳಲ್ಲಿ ಸಮಿತಿ ರಚನೆಯ ಪ್ರಸ್ತಾವವನ್ನು ತಿರಸ್ಕರಿಸಿದ್ದರು.

ನ್ಯಾಯಾಲಯ ಈ ಸಮಿತಿಗೆ ನಾಲ್ಕು ವ್ಯಕ್ತಿಗಳನ್ನು ನೇಮಿಸಿದೆ. ಇವರೆಲ್ಲರೂ ಈ ಮೂರು ಕೃಷಿ ಕಾಯ್ದೆಗಳನ್ನು ಬೆಂಬಲಿಸಿರುವವರು ಎಂಬುದು ಎಲ್ಲರಿಗೂ ಗೊತ್ತಿದೆ. ಅಶೋಕ ಗುಲಾಟಿ ಕೃಷಿಯಲ್ಲಿ ನವ-ಉದಾರವಾದಿ ಧೋರಣೆಗಳ ಒಬ್ಬ ಪ್ರಮುಖ ಪ್ರತಿಪಾದಕರೆಂದೇ ಪರಿಚಿತರಾಗಿದ್ದಾರೆ. ಸುಪ್ರಿಂ ಕೋರ್ಟ್ ಈ ಸಮಿತಿಗೆ ಪರಿಣಿತರನ್ನು ನೇಮಿಸುವಲ್ಲಿ ಸರಕಾರವನ್ನೇ ಅವಲಂಬಿಸಿದಂತೆ ಕಾಣುತ್ತದೆ. ಪರಿಣಿತರ ಸಮಿತಿಯಲ್ಲಿರುವ ಇಬ್ಬರು ರೈತ ಪ್ರತಿನಿಧಿಗಳು ಕೂಡ ಈ ಕೃಷಿ ಕಾಯ್ದೆಗಳ ಬೆಂಬಲಿಗರು. ಸಮಿತಿಯಲ್ಲಿ ತಮ್ಮನ್ನು ಯಾರು ಪ್ರತಿನಿಧಿಸಬೇಕು ಎಂದು ರೈತರ ಸಂಘಟನೆಗಳೊಡನೆ ಸಮಾಲೋಚನೆ ನಡೆಸಬೇಕು ಎಂದು ನ್ಯಾಯಾಲಯಕ್ಕೆ ಅನಿಸಿಲ್ಲ.

ಇಂತಹ ಒಂದು ಸಮಿತಿಯ ವರದಿ ಪೂರ್ವನಿರ್ಧಾರಿತವಾಗಿರುತ್ತದೆ. ಎರಡು ತಿಂಗಳ ನಂತರ ವರದಿ ಸಲ್ಲಿಸಿದಾಗ, ನ್ಯಾಯಾಲಯ ತನ್ನದೇ ಸಮಿತಿಯ ಶಿಫಾರಸುಗಳನ್ನು ಅನಿವಾರ್ಯವಾಗಿಯೇ ಸ್ವೀಕರಿಸುತ್ತದೆ, ಮತ್ತು ಅದರೊಂದಿಗೆ ಕಾಯ್ದೆಗಳ ಜಾರಿಯ ಮೇಲಿನ ತಡೆ ಆದೇಶ ಕೊನೆಗೊಳ್ಳುತ್ತದೆ.

ಈ ಆದೇಶ "ನಾವು ಒಂದು ಶಾಂತಿಯುತ ಪ್ರತಿಭಟನೆಯ ಉಸಿರಡಗಿಸಲಿಕ್ಕಿಲ್ಲವಾದರೂ, ಕೃಷಿ ಕಾಯ್ದೆಗಳ ಅನುಷ್ಠಾನದ ಮೇಲೆ ತಡೆಯ ಈ ಅಸಾಮಾನ್ಯ ಆದೇಶವನ್ನು ಇಂತಹ ಪ್ರತಿಭಟನೆಯ ಉದ್ದೇಶದ ಸಾಧನೆಯೆಂದು ಸದ್ಯಕ್ಕಾದರೂ ಕಾಣಲಾಗುತ್ತದೆ ಎಂದು ಭಾವಿಸುತ್ತೇವೆ. ಇದು ರೈತರ ಸಂಘಟನೆಗಳು ತಮ್ಮ ಸದಸ್ಯರು, ಅವರ ಜೀವಗಳ ಮತ್ತು ಆರೋಗ್ಯದ ರಕ್ಷಣೆಗಾಗಿಯೂ ಮತ್ತು ಇತರರ ಜೀವಗಳ ಮತ್ತು ಆಸ್ತಿಗಳ ರಕ್ಷಣೆಗಾಗಿಯೂ ಕೂಡ ತಮ್ಮ ಜೀವನೋಪಾಯಗಳಿಗೆ ಮರಳಬೇಕೆಂದು ಮನವರಿಕೆ ಮಾಡಿಸುವಂತೆ ಪ್ರೋತ್ಸಾಹಿಸುತ್ತದೆ" ಎಂದು ಕೊನೆಗೊಳ್ಳುತ್ತದೆ.

ಹೀಗೆ, ರೈತರು ತಮ್ಮ ಪ್ರತಿಭಟನೆಯನ್ನು ಕೈಬಿಟ್ಟು ಮನೆಗೆ ಹೋಗಲು ಈ ಆದೇಶ ಸಾಕಾಗುತ್ತದೆ ಎಂದು ಸುಪ್ರಿಂ ಕೋರ್ಟ್ ಸ್ಪಷ್ಟಪಡಿಸಿದೆ. ವಿಚಾರಣೆಯ ವೇಳೆಯಲ್ಲಿ, ಅಟಾರ್ನಿ ಜನರಲ್ ಈ ಚಳುವಳಿಯೊಳಕ್ಕೆ ಖಾಲಿಸ್ತಾನೀ ಮಂದಿ ನುಸುಳಿದ್ದಾರೆ ಎಂಬ ಅಸಾಮಾನ್ಯ ಮಾತುಗಳನ್ನಾಡಿದ್ದಾರೆ. ನ್ಯಾಯಾಲಯ ಇದಕ್ಕೆ ಸ್ಪಂದಿಸುತ್ತ ಇದರ ವಿವರಗಳೊಂದಿಗೆ ಒಂದು ಅಫಿಡವಿಟ್ ಸಲ್ಲಿಸುವಂತೆ ಹೇಳಿದೆ, ಈ ಮೂಲಕ ಅದನ್ನು ಪರಿಗಣನೆಗೆ ತೆಗೆದುಕೊಂಡಿದೆ.

ನ್ಯಾಯಾಲಯದ ಈ ನಿಲುವನ್ನು ಸರಕಾರ ಪ್ರತಿಭಟನಾಕಾರರ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ಈ ಹೋರಾಟದಲ್ಲಿ ರಾಷ್ಟ್ರ-ವಿರೋಧಿ ಖಾಲಿಸ್ತಾನೀ ಮಂದಿ ಸಕ್ರಿಯರಾಗಿದ್ದಾರೆ ಎಂಬ ನೆವವೊಡ್ಡಿ ಅದನ್ನು ದಮನ ಮಾಡಲು ಕೊಟ್ಟಿರುವ ಸೂಚನೆ ಎಂದು ತೆಗೆದುಕೊಳ್ಳಬಹುದು.

ರೈತರ ಸಂಘಟನೆಗಳು ನ್ಯಾಯಾಲಯ ರಚಿಸಿರುವ "ಪರಿಣಿತರ ಸಮಿತಿ"ಯನ್ನು ತಿರಸ್ಕರಿಸಿರುವುದು ಮತ್ತು ಈ ಕಾಯ್ದೆಗಳನ್ನು ರದ್ದು ಮಾಡಬೇಕೆಂಬ ತಮ್ಮ ಹೋರಾಟವನ್ನು ಮುಂದುವರೆಸುವ ನಿರ್ಧಾರವನ್ನು ಪುನರುಚ್ಚರಿಸಿರುವುದು ಸರಿಯಾಗಿಯೇ ಇದೆ. ಮುಂಬರುವ ದಿನಗಳು ಈ ಹೋರಾಟಕ್ಕೆ ನಿರ್ಣಾಯಕವಾಗಲಿವೆಯಾದ್ದರಿಂದ ಎಲ್ಲ ಪ್ರಜಾಪ್ರಭುತ್ವವಾದೀ ಶಕ್ತಿಗಳು ಇದಕ್ಕೆ ಪೂರ್ಣ ಬೆಂಬಲ ಮತ್ತು ಸೌಹಾರ್ದವನ್ನು ಅಣಿನೆರೆಸಬೇಕಾಗಿದೆ.



ಅವರನ್ನು ನಂಬಿ!-ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಹಲವು ಪ್ರಶ್ನೆಗಳನ್ನೆತ್ತಿರುವ ಸಮಿತಿ

ದೇಶದ ಸರ್ವೋಚ್ಚ ನ್ಯಾಯಾಲಯ ಕೃಷಿ ಕಾಯ್ದೆಗಳಿಗೆ ವಿರೋಧಕ್ಕೆ ಸಂಬಂಧಪಟ್ಟಂತೆ ನೇಮಿಸಿರುವ ನಾಲ್ವರು ಸದಸ್ಯರ ಸಮಿತಿಯ ಬಗ್ಗೆ ಹಲವು ಪ್ರಶ್ನೆಗಳು ಎದ್ದಿವೆ. ದೇಶದ ಹಿತದೃಷ್ಟಿಯಿಂದ ಸುಪ್ರಿಂ ಕೋರ್ಟ್‌ಗೆ ಒಂದು ರಾಜಕೀಯ ಧೋರಣೆಯ ವಿಷಯದಲ್ಲಿ ಮಧ್ಯಪ್ರವೇಶಿಸಲೇ ಬೇಕು ಎಂದು ಅನಿಸಿದ್ದರೆ ಅದು ನೇಮಿಸುವ ಸಮಿತಿಯ ತಟಸ್ಥತೆ, ಪರಿಣತಿ ಮತ್ತು ವಿಶ್ವಾಸಾರ್ಹತೆ ಮತ್ತು ಗೌರವಾರ್ಹತೆಯ ಬಗ್ಗೆ ವಿಶೇಷ ಗಮನ ಕೊಡಬೇಕಾಗಿತ್ತು. ಎಂದು ಬಹಳಷ್ಟು ಮಂದಿ ಅಭಿಪ್ರಾಯ ಪಡುತ್ತಿದ್ದಾರೆ. ತಟಸ್ಥತೆಯ ಸೋಗು ಕೂಡ ಇಲ್ಲದ ಇಂತಹ ಸಮಿತಿಯ ಎದುರು ರೈತರು ಯಾಕಾದರೂ ಹೋದಾರು?

"ಒಂದು ಸಮಿತಿಯನ್ನು ಕೃಷಿ ಕಾಯ್ದೆಗಳಿಗೆ ಸಂಬಂಧಪಟ್ಟ ರೈತರ ದೂರುಗಳನ್ನು ಮತ್ತು ಸರಕಾರದ ಅಭಿಪ್ರಾಯಗಳನ್ನು ಕೇಳುವ ಉದ್ದೇಶಕ್ಕಾಗಿ ಹಾಗೂ ಶಿಫಾರಸುಗಳನ್ನು ಮಾಡಲು ರಚಿಸಲಾಗಿದೆ" ಎಂದು ಜನವರಿ 12 ರಂದು ಸುಪ್ರಿಂ ಕೋರ್ಟ್ ನೀಡಿರುವ ಆದೇಶದ ಮೂರನೇ ಅಂಶದಲ್ಲಿ ಹೇಳಲಾಗಿದೆ.

"ಎಲ್ಲ ರೈತ ಸಂಘಗಳ ಪ್ರತಿನಿಧಿಗಳು, ಅವರು ಪ್ರತಿಭಟನೆಗಳನ್ನು ನಡೆಸುತ್ತಿರಲಿ ಅಥವ ಇಲ್ಲದಿರಲಿ, ಮತ್ತು ಅವರು ಈ ಕಾಯ್ದೆಗಳನ್ನು ಬೆಂಬಲಿಸುತ್ತಿರಲಿ ಅಥವ ವಿರೋಧಿಸುತ್ತಿರಲಿ, ಈ ಸಮಿತಿಯ ಕಲಾಪಗಳಲ್ಲಿ ಭಾಗವಹಿಸುತ್ತಾರೆ ಮತ್ತು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾರೆ" ಎಂದು ಈ ಆದೇಶ ವಿಧಿಸುತ್ತದೆ.

"ಸಮಿತಿ ಸರಕಾರ ಮತ್ತು ರೈತ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಇತರ ಸಂಬಂಧಪಟ್ಟವರು ಹೇಳುವುದನ್ನು ಕೇಳಿಕೊಂಡು, ತನ್ನ ಶಿಫಾರಸುಗಳಿರುವ ಒಂದು ವರದಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸುತ್ತದೆ. ಇದನ್ನು ಅದು ಕಾರ್ಯಾರಂಭ ಮಾಡಿದ ದಿನದಿಂದ ಎರಡು ತಿಂಗಳ ಒಳಗೆ ಮಾಡಲಾಗುತ್ತದೆ. ಇಂದಿನಿಂದ ಹತ್ತು ದಿನಗಳ ಒಳಗೆ ಕಾರ್ಯಾರಂಭವಾಗುತ್ತದೆ" ಎಂದೂ ಈ ಆದೇಶ ಹೇಳಿದೆ.

ಈ ಸಮಿತಿಯಲ್ಲಿ ಯಾರಿದ್ದಾರೆ? ಆದೇಶ ನಮೂದಿಸಿರುವ ನಾಲ್ಕು ಹೆಸರುಗಳು ಹೀಗಿವೆ:

(1) ಶ್ರೀ ಭುಪಿಂದರ್ ಸಿಂಗ್ ಮಾನ್, ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಕಿಸಾನ್ ಯೂನಿಯನ್ ಮತ್ತು ಅಖಿಲ ಭಾರತ ಕಿಸಾನ್ ಸಮನ್ವಯ ಸಮಿತಿ


(2) ಡಾ. ಪ್ರಮೋದ್ ಕುಮಾರ್ ಜೋಷಿ, ಕೃಷಿ ಅರ್ಥಸಾಸ್ತ್ರಜ್ಞ, ಅಂತರ್ರಾಷ್ಟ್ರೀಯ ಆಹಾರ ಧೋರಣೆ ಸಂಶೋಧನಾ ಸಂಸ್ಥೆಯ ದಕ್ಷಿಣ ಏಷ್ಯಾ ನಿರ್ದೇಶಕರು

(3) ಶ್ರೀ ಅಶೋಕ ಗುಲಾಟಿ, ಕೃಷಿ ಅರ್ಥಶಾಸ್ತ್ರಜ್ಞರು ಮತ್ತು ಕೃಷಿ ವೆಚ್ಚಗಳು ಮತ್ತು ಬೆಲೆಗಳು ಆಯೋಗದ ಮಾಜಿ ಅಧ್ಯಕ್ಷರು

(4) ಶ್ರೀ ಅನಿಲ್ ಘನ್ವತ್, ಅಧ್ಯಕ್ಷರು, ಶೇತ್ಕರಿ ಸಂಘಟನ.


(ಭುಪಿಂದರ್ ಸಿಂಗ್ ಮಾನ್ ತಾನು ಈ ಸಮಿತಿಯಲ್ಲಿ ಇರುವುದಿಲ್ಲ ಎಂದು ಹೇಳಿರುವುದಾಗಿ ಈಗ ವರದಿಯಾಗಿದೆ)

ಕೃಷಿ ಅರ್ಥಶಾಸ್ತ್ರಜ್ಞರಾದ ಅಶೋಕ ಗುಲಾಟಿ ಕೃಷಿಯಲ್ಲಿ ನವ-ಉದಾರೀಕರಣ ನೀತಿಗಳ ಪ್ರತಿಪಾದಕರೆಂದೇ ಪರಿಚಿತರಾಗಿರುವವರು. ಈ ಮೂರು ಕಾಯ್ದೆಗಳ ಮೊದಲು ಸುಗ್ರೀವಾಜ್ಞೆ ಹೊರಡಿಸುವ ಮೊದಲೇ ಮೇ 2020ರಲ್ಲೇ ಮೋದಿ ಸರಕಾರ ದೇಶದ ಕೃಷಿ-ಮಾರುಕಟ್ಟೆ ವ್ಯವಸ್ಥೆಯಲ್ಲಿ ಕೊನೆಗೂ ಸುಧಾರಣೆಗಳನ್ನು ತರಲು ಮುಂದಾಗಿರುವುದಕ್ಕೆ ಅಭಿನಂದನೆಗೆ ಅರ್ಹರು ಎಂದವರು.





ಕೃಷಿ ಮಸೂದೆಗಳು ಕಾಯ್ದೆಗಳಾದ ನಂತರ ಅವನ್ನು ಬೆಂಬಲಿಸುತ್ತ, ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರುವಲ್ಲಿ ಮತ್ತು ಖರೀದಿಸುವವರಿಗೆ ಅವನ್ನು ಖರೀದಿಸಿ ದಾಸ್ತಾನು ಮಾಡುವಲ್ಲಿ ಹೆಚ್ಚಿನ ಆಯ್ಕೆ

ಪುಟ 14 ನೋಡಿ




ಎಂಗೆಲ್ಸ್ ಕೃತಿಗಳನ್ನು ಯಾಕೆ ಮತ್ತು ಹೇಗೆ ಓದಬೇಕು ?





ಮಾರ್ಕ್ಸ್‌ವಾದ ಯಾವಾಗಲೂ ಸಮಾಜದ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವ ವಿಶಾಲ ಚೌಕಟ್ಟಿನಲ್ಲಿ ವಿಜ್ಞಾನವನ್ನಿಡುವ ಮೂಲಕ, ವಿಜ್ಞಾನಿಗಳು, ಡಾಕ್ಟರುಗಳು ಮತ್ತು ತಂತ್ರಜ್ಞರನ್ನು ಆಕರ್ಷಿಸಿದೆ. ಇದು ತಂತ್ರಜ್ಞಾನದ ಇತಿಹಾಸ, ಹಾಗೂ ವಿಜ್ಞಾನ ಮತ್ತು ಉತ್ಪಾದನೆಯ ಜೊತೆಗೆ ಅದರ ಸಂಬಂಧವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಇದು ತನ್ನಿಂದ ತಾನೇ ಜನರು ಬಂಡವಾಳ, ಲಾಭ ಮತ್ತು ಸಾರ್ವಜನಿಕ ಆರೋಗ್ಯಗಳ ನಡುವಿನ ಸಂಬಂಧವನ್ನು ಅರಿಯುವಂತೆ ಮಾಡುತ್ತದೆಯೇ? ನಾವು ನಮ್ಮ ತಿಳುವಳಿಕೆಯನ್ನು ಜನ ವಿಜ್ಞಾನ ಚಳುವಳಿಗಳ ಮೂಲಕ ಅಥವಾ ಜನ ಆರೋಗ್ಯ ಚಳುವಳಿ ಮೂಲಕ ಜನರಿಗೆ ತಲುಪಿಸುವ ವರೆಗೆ ಅದು ಆಗುವುದಿಲ್ಲ. ಇದು ಸಾಧ್ಯವಾಗಲು ನಾವು ವಿಜ್ಞಾನಿ ಸಮುದಾಯಗಳ ನಡುವೆ ಹೋಗಬೇಕು. ಇಲ್ಲಿ ಎಂಗೆಲ್ಸ್ ಅವರ ಗತಿತಾರ್ಕಿಕ ಭೌತ‌ವಾದ ನಮಗೆ ಮುಖ್ಯವಾಗುತ್ತದೆ.

ಪ್ರಬೀರ್ ಪುರಕಾಯಸ್ಥ ಅನು: ಜಿ.ಎಸ್.ಮಣಿ



ಎಂಗೆಲ್ಸ್ ಅವರ ಜನುಮ ದಿನದ ದ್ವಿಶತಮಾನದ ಈ ಸಂದರ್ಭದಲ್ಲಿ ಅವರ ಕೊಡುಗೆಗಳ ಬಗೆಗೆ ಚಿಂತನೆಗೆ ತೊಡಗಿದರೆ ಮೂರು ಮುಖ್ಯ ಅಂಶಗಳು ಮನಸ್ಸಿಗೆ ಬರುತ್ತವೆ. ಅವರ ಬರಹಗಳನ್ನು ಇಂದು ನಾವು ಹೇಗೆ ಓದಬೇಕು? ಯಾಕೆಂದರೆ ಅವರ ಬರಹಗಳು ವ್ಯವಸ್ಥೆಯ ಸಮರ್ಥಕರ ವಿರುದ್ಧದ ವಾಗ್ವಾದಗಳಾಗಿದ್ದವು. ಅಥವಾ ದುಡಿಯುವ ಜನರ ಪರ ಮತ್ತು ಹೊಸ ಹಾಗೂ ನ್ಯಾಯಯುತ ಸಮಾಜ ರಚನೆಯ ಪರವಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಪ್ರತಿಪಾದಿಸಿದ ಸಿದ್ಧಾಂತಗಳಿಗೆ ವಿರುದ್ಧವಾಗಿದ್ದ ಸಿದ್ಧಾಂತಗಳ ಮೇಲಿನ ವಾಗ್ದಾಳಿಗಳಾಗಿದ್ದವು. ಇಲ್ಲಿ ನಮಗೆ ಎರಡು ತರಹದ ಸಮಸ್ಯೆಗಳು ಎದುರಾಗುತ್ತವೆ. ಮೊದಲನೆಯದು ಎಂಗೆಲ್ಸ್ ಯಾರ ಯಾವುದರ ವಿರುದ್ಧ ಬರೆಯುತ್ತಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು. ಉದಾಹರಣೆಗೆ ಎಂಗೆಲ್ಸ್ ಅವರ "ಎಂಟಿ–ಡ್ಯೂರಿಂಗ್ (ಡ್ಯೂರಿಂಗ್ ವಿರುದ್ಧ)" ಎಂಬ ಬರಹದಲ್ಲಿನ ಡ್ಯೂರಿಂಗ್ ಮಾತ್ರವೇ ನಮಗೆ ತಿಳಿದಿರುವುದು, ಅದು ಬಿಟ್ಟರೆ ಬೇರೇನೂ ನಮಗೆ ತಿಳಿದಿಲ್ಲ. ಎರಡನೆಯ ಸಮಸ್ಯೆ ಭಾಷೆಯದು. ಈ ಬರಹಗಳು ನಿರ್ದಿಷ್ಟ ಸಮಯ ಮತ್ತು ಸಂದರ್ಭಗಳಲ್ಲಿ ಬರೆದಿದ್ದು. ಆದ್ದರಿಂದ ಈ ಸಮಯ ಮತ್ತು ಸಂದರ್ಭಗಳ ಅರಿವು ನಮಗಿದ್ದರೆ ಮಾತ್ರ ಅವು ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತವೆ ಎಂಬ ಮಿತಿ ಇದ್ದೇ ಇದೆ. ಮೂರನೆಯದಾಗಿ, ವಿಜ್ಞಾನದ ವಿಷಯಕ್ಕೆ ಬಂದಾಗ ಎಂಗೆಲ್ಸ್ ಅವರು ಯಾವ ಸಂದರ್ಭದಲ್ಲಿ ಬರೆಯುತ್ತಿದ್ದರು ಎಂಬುದನ್ನು ಗುರುತಿಸುವುದು ನಮಗೆ ಕಷ್ಟ ಈ ಬರವಣಿಗೆಯ ವಿಷಯಗಳು ಅಂದರೆ ವಿಜ್ಞಾನಗಳು ಎಂಗೆಲ್ಸ್ ಅವರ ಸಮಯದಿಂದ ಬಹುವಾಗಿ ಬೆಳೆದಿವೆ ಮತ್ತು ಬದಲಾಗಿವೆ.

ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರು ಯಾರ ವಿರುದ್ಧ ವಾಗ್ದಾಳಿ ಮಾಡಿದ್ದರೋ ಅವರೆಲ್ಲ ಈಗ ಜನಮಾನಸದಿಂದ ಹೊರಗೆ ಹೋಗಿದ್ದಾರೆ. ಹೀಗಿರುವಾಗ ಈ ವಾಗ್ದಾಳಿಗಳ ಬರಹಗಳನ್ನು ನಾವೇಕೆ ಹಿಂಜಿ ನೋಡಬೇಕು? ಇದಕ್ಕೆ ಎರಡು ಕಾರಣಗಳಿವೆ. ವಿಜ್ಞಾನ ಸಮಾಜದಿಂದ ತಟಸ್ಥ ಮತ್ತು ಸ್ವಾಯತ್ತ ಎಂಬಂತೆ ಬಿಂಬಿಸಲಾಗುತ್ತಿದೆ. ಆದ್ದರಿಂದಲೇ ನಾವು ಇಂದು ಮೂಲಕ್ಕೆ ಹೋಗಿ ತಿಳಿದುಕೊಳ್ಳುವ ಅವಶ್ಯಕತೆಯಿದೆ. ಬಿಂಬಿತವಾಗಿರುವ ಈ ಸ್ಥಿತಿಗೆ ವ್ಯತಿರಿಕ್ತವಾಗಿ ವಿಜ್ಞಾನ, ಸಮಾಜವನ್ನು ಹತೋಟಿಯಲ್ಲಿಟ್ಟುಕೊಳ್ಳುವ ವರ್ಗಗಳಿಗೆ ಗಾಢವಾಗಿ ತಳುಕು ಹಾಕಿಕೊಂಡಿದೆ ಮತ್ತು ಅದೇ ವರ್ಗ ವಿಜ್ಞಾನದ ಬೆಳವಣಿಗೆಯನ್ನೂ ನಿಯಂತ್ರಿಸುತ್ತಿರುತ್ತದೆ ಎಂಬುದು ವಾಸ್ತವ.

ಬಂಡವಾಳಶಾಹಿ ದೇಶಗಳಲ್ಲಿ 'ದೊಡ್ಡ' ವಿಜ್ಞಾನ, ಯುದ್ಧ ಅಥವಾ ಬಂಡವಾಳಶಾಹಿಯ ಲಾಭಬಡುಕತನದ ಬಂಧಿಯಾಗಿದೆ ಎಂಬುದು ಆಕಸ್ಮಿಕವಲ್ಲ. ಕೋವಿಡ್ ಸಮಯದಲ್ಲಿ ಇದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಕೋವಿಡ್ ಲಸಿಕೆಗಳು, ಅವು ಸಾರ್ವಜನಿಕ ಹಣದಿಂದ ಸಂಶೋಧಿಸಲ್ಪಟ್ಟು ಉತ್ಪಾದಿತವಾಗಿದ್ದರೂ ಸಹ, ಲಾಭಕ್ಕಾಗಿ ಲಭ್ಯವಿವೆ. ಯುದ್ಧಾಸ್ತ್ರ ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಸಂಶೋಧನೆಗಳ ನಡುವಿನ ಸಂಬಂಧ ನೋಡಿದರೂ ಇದು ತಿಳಿಯುತ್ತದೆ. ಜೆ.ಬಿ.ಎಸ್ ಹಾಲ್ಡೆನ್ ಅವರು ಈ ವಿಷಯದಲ್ಲಿ ಹೀಗೆ ಹೇಳಿದ್ದರು "....ಪ್ರಾಧ್ಯಾಪಕರು ರಾಜಕೀಯವನ್ನು ಅದರ ಪಾಡಿಗೆ ಬಿಟ್ಟರೂ, ರಾಜಕೀಯ ಪ್ರಾಧ್ಯಾಪಕರನ್ನು ಅವರ ಪಾಡಿಗೆ ಬಿಡುವುದಿಲ್ಲ." ವೈಯಕ್ತಿಕವಾಗಿ ವಿಜ್ಞಾನಿಗಳು ರಾಜಕೀಯದಲ್ಲಿಲ್ಲದಿದ್ದರೂ, ವಿಜ್ಞಾನ ಮತ್ತು ವೈಜ್ಞಾನಿಕ ಸಂಶೋಧನೆ ರಾಜಕೀಯ ಹಿಡಿತದಲ್ಲೇ ಇದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳು ಜ್ಞಾನಶಿಸ್ತುಗಳು ಮಾತ್ರವಲ್ಲ. ನಮ್ಮನ್ನು ಅಪಾಯಕಾರಿ ಪಥದಲ್ಲಿ ಕರೆದೊಯ್ದರೂ ಅವು ಬೆಳವಣಿಗೆಯ ವಾಹಕಗಳು. ಅಣುಶಸ್ತ್ರ ಸಜ್ಜಿತ, ಶಬ್ದದ ವೇಗ ಮೀರಿದ, ಬಾಹ್ಯಾಕಾಶದಲ್ಲಿ ಅಸ್ತ್ರಗಳ ಬಗೆಗೆ, ಅವು ಇಡೀ ಮಾನವ ಕುಲಕ್ಕೆ ತರಬಹುದಾದ ಅಪಾಯಗಳ ಬಗೆಗೆ ವೈಜ್ಞಾನಿಕ ತಿಳಿವಿಲ್ಲದೆ ಮಾತನಾಡಲು ಸಾಧ್ಯವಿಲ್ಲ. ಅದೇ ರೀತಿ ಗೂಗಲ್ ಅಥವಾ ಫೇಸ್ಬುಕ್ ಪ್ರಣೀತ ಕಣ್ಗಾವಲು ಬಂಡವಾಳಶಾಹಿ ಹೇಗೆ ನಮಗೆ ಗೊತ್ತಿರುವುದನ್ನು ಮತ್ತು ಬಂಡವಾಳಶಾಹಿಯನ್ನು ಸಹ ಬದಲಾಯಿಸುತ್ತದೆ ಎಂಬುದನ್ನು ಸಹ ಅವುಗಳ ವೈಜ್ಞಾನಿಕ ಅರಿವು ಇಲ್ಲದೆ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಅಮೇರಿಕ ಎಲ್ಲ ತರಹದ ಅಣ್ವಸ್ತ್ರ ನಿರ್ಬಂಧನಾ ಒಪ್ಪಂದಗಳಿಂದ ಹೊರಬರುತ್ತಿದೆ. ಅದರ ಬಾಹ್ಯಾಕಾಶದ ಮಿಲಿಟರೀಕರಣ ಹೊಸ ಅಪಾಯಗಳನ್ನು ಹುಟ್ಟಿಹಾಕುತ್ತಿದೆ. ಆದರೂ ಹೀರೋಷಿಮ ಮತ್ತು ನಾಗಾಸಾಕಿಗಳ ಮೇಲೆ ಅಣು ಬಾಂಬ್ ಹಾಕಿದಾಗ ಮತ್ತು ನಂತರ ಎಂಬತ್ತರ ದಶಕದಲ್ಲಿ ನ್ಯೂಟ್ರಾನ್ ಬಾಂಬ್ ಹಾಗೂ ರೇಗನ್ ಅವರ 'ಸ್ಟಾರ್ ವಾರ್' ಕಾರ್ಯಕ್ರಮಗಳಿಗೆ ಬಂದಂತಹ ವಿರೋಧ/ಪ್ರತಿಭಟನೆಗಳು ಇಂದು ಕಾಣುತ್ತಿಲ್ಲ. ಶಾಂತಿ ಚಳುವಳಿಯ ದೌರ್ಬಲ್ಯಕ್ಕೆ ವೈಜ್ಞಾನಿಕ ಸಮುದಾಯದ ರಾಜಕೀಯ ಪ್ರಜ್ಞೆಯ ಕೊರತೆಯು ಒಂದೇ ಕಾರಣವಲ್ಲದೆ ಇದ್ದರೂ ಇದೊಂದು ಬಹು ಮುಖ್ಯ ದೌರ್ಬಲ್ಯ ಎಂಬುದು ವಾಸ್ತವ. ಎರಡನೇ ಜಾಗತಿಕ ಯುದ್ಧದ ನಂತರದ ಶಾಂತಿ ಮತ್ತು ಅಣ್ವಸ್ತ್ರ–ವಿರೋಧಿ ಚಳುವಳಿಯಲ್ಲಿ ವಿಜ್ಞಾನಿಗಳು ಬಹು ಮುಖ್ಯ ಪಾತ್ರ ವಹಿಸಿದ್ದರು. ಎಡ ಪಕ್ಷಗಳು ವಿಜ್ಞಾನ ಮತ್ತು ತಂತ್ರಜ್ಞಾನದ ರಂಗವನ್ನು ಪ್ರವೇಶಿಸುವ ಸಾಮರ್ಥ್ಯ ಹೊಂದಬೇಕಾಗಿದೆ. ಬರಿಯ ವಿಜ್ಞಾನಿಗಳು ಮತ್ತು ತಂತ್ರಜ್ಞರ ಕೆಲಸದ ಪರಿಣಾಮಗಳ ಆಧಾರದ ಮೇಲೆ ಮಾತ್ರವಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮಾರ್ಕ್ಸ್‌ವಾದಿ ನೋಟಗಳ ಮೂಲಕ ಅವರ ಕಲ್ಪನೆಗಳನ್ನು ತಟ್ಟಿ ಹುರುಪುಗೊಳಿಸುವ ಮೂಲಕ ಕೂಡಾ ಪ್ರವೇಶಿಸಬೇಕಾಗಿದೆ. ಸಮಾಜದ ಈ ವಿಭಾಗಗಳಿಲ್ಲದೆ ನಾವು ಅಣು ಯುದ್ಧ, ಸಾರ್ವಜನಿಕ ಆರೋಗ್ಯ ಮತ್ತು ಕೋವಿಡ್ 19 ಮಹಾಸೋಂಕಿನಿಂದ ಕಣ್ಗಾವಲು ಬಂಡವಾಳಶಾಹಿಯವರೆಗೆ, ಹಲವು ವಿಚಾರಗಳ ಬಗೆಗೆ ವಾದ ಹೂಡುವುದರಲ್ಲಿ ದುರ್ಬಲರಾಗುತ್ತೇವೆ.

ಮಾರ್ಕ್ಸ್‌ವಾದ ಯಾವಾಗಲೂ ಸಮಾಜಕ್ಕೆ ಮತ್ತು ಸಮಾಜದ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವ ವಿಶಾಲ ಚೌಕಟ್ಟಿನಲ್ಲಿ ವಿಜ್ಞಾನವನ್ನಿಡುವ ಮೂಲಕ, ವಿಜ್ಞಾನಿಗಳು, ಡಾಕ್ಟರುಗಳು ಮತ್ತು ತಂತ್ರಜ್ಞರನ್ನು ಆಕರ್ಷಿಸಿದೆ. ಕೋವಿಡ್ 19 ಮಹಾಸೋಂಕು ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳ ಆರ್ಥಿಕತೆಗೆ ಹೊಡೆತ ನೀಡಿದಾಗ ಏನು ಮಾಡುತ್ತದೋ, ಅದನ್ನು ಮಹಾಸೋಂಕು ಬಡ ರಾಷ್ಟ್ರಗಳಿಗೆ ಸಮಸ್ಯೆ ಆದಾಗ ಮಾಡುವುದಿಲ್ಲ. ಇದು ತಂತ್ರಜ್ಞಾನದ ಇತಿಹಾಸ, ಹಾಗೂ ವಿಜ್ಞಾನ ಮತ್ತು ಉತ್ಪಾದನೆಯ ಜೊತೆಗೆ ಅದರ ಸಂಬಂಧವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ.

ಇದು ತನ್ನಿಂದ ತಾನೇ ಜನರು ಬಂಡವಾಳ, ಲಾಭ ಮತ್ತು ಸಾರ್ವಜನಕ ಆರೋಗ್ಯಗಳ ನಡುವಿನ ಸಂಬಂಧವನ್ನು ಅರಿಯುವಂತೆ ಮಾಡುತ್ತದೆಯೇ? ನಾವು ನಮ್ಮ ತಿಳುವಳಿಕೆಯನ್ನು ಜನ ವಿಜ್ಞಾನ ಚಳುವಳಿಗಳ ಮೂಲಕ ಅಥವಾ ಜನ ಆರೋಗ್ಯ ಚಳುವಳಿ ಮೂಲಕ ಜನರಿಗೆ ತಲುಪಿಸುವ ವರೆಗೆ ಅದು ಆಗುವುದಿಲ್ಲ. ಇದು ಸಾಧ್ಯವಾಗಲು ನಾವು ವಿಜ್ಞಾನಿಸಮುದಾಯಗಳ ನಡುವೆ ಹೋಗಬೇಕು.

ಇಲ್ಲಿ ಎಂಗೆಲ್ಸ್ ಅವರ ಗತಿತಾರ್ಕಿಕ ಭೌತವಾದ ನಮಗೆ ಮುಖ್ಯವಾಗುತ್ತದೆ. ಮಾರ್ಕ್ಸ್ ಮತ್ತು ಎಂಗೆಲ್ಸ್ ಇಬ್ಬರಿಗೂ ಅಂದಿನ ವಿಜ್ಞಾನದ ಬಗೆಗೆ ಅಪಾರ ಆಸಕ್ತಿಯಿತ್ತು ಮತ್ತು ನಿರಂತರವಾಗಿ ಅವರು ವಿಜ್ಞಾನದ ಬೆಳವಣಿಗೆಗಳನ್ನು ತಿಳಿದುಕೊಳ್ಳುತ್ತಿದ್ದರು. ಮಾರ್ಕ್ಸ್ ಅವರಿಗೆ ತಂತ್ರಜ್ಞಾನದ ಬಗೆಗೆ ಅಗಾಧ ಆಸಕ್ತಿಯಿತ್ತು ಎಂಬುದು ಅವರು ಬ್ರಿಟನ್ನಿನ ಜವಳಿ ಕಾರ್ಖಾನೆಗಳಲ್ಲಿನ ಬದಲಾವಣೆಗಳನ್ನು ತಮ್ಮ ಬರಹಗಳಲ್ಲಿ ದಾಖಲಿಸಿರುವುದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ಭೂಮಿ ಬಾಡಿಗೆಯ ಲೆಕ್ಕಾಚಾರ ಮಾಡುವಾಗ ರಸಗೊಬ್ಬರಗಳ ಬಳಕೆಯಿಂದ ಭೂಮಿಯ ಉತ್ಪಾದಕತೆಯ ಮೇಲೆ ಎಂತಹ ಪರಿಣಾಮ ಉಂಟಾಗುತ್ತದೆ ಎಂಬುದನ್ನು ತಿಳಿಯಬಯಸಿದ್ದರು. ವಿಜ್ಞಾನದ ಬಗೆಗೆ ಬರೆಯುವ ಪ್ರಶ್ನೆ ಬಂದಾಗ ವಿಜ್ಞಾನದ ವಿಷಯಗಳನ್ನು ಬಹಳ ನಿಕಟವಾಗಿ ಗಮನಿಸುತಿದ್ದ ಎಂಗೆಲ್ಸ್ ಮುಂದಾಳತ್ವ ತೋರಲು ಅನುವು ಮಾಡಿಕೊಡುತ್ತಿದ್ದರು. ಎಂಗೆಲ್ಸ್ ಅವರು ತಮ್ಮ 'ಎಂಟಿ–ಡ್ಯೂರಿಂಗ್' ಕೃತಿಯಲ್ಲಿ ಗತಿತಾರ್ಕಿಕತೆಯ ಬಗೆಗೆ ಬರೆದು, ಅದು ಡ್ಯೂರಿಂಗ್ ಅವರ ಆಧ್ಯಾತ್ಮಿಕ ಚಿಂತನೆಗೆ ವ್ಯತಿರಿಕ್ತವೆಂದು ತೋರಿಸಿದರು. ಅವರ "ಲುಡ್‌ವಿಗ್ ಫ್ಯೂಅರ್‌ಬಾಕ್ ಮತ್ತು ಶಾಸ್ತ್ರೀಯ ಜರ್ಮನ್ ತತ್ವಶಾಸ್ತ್ರದ ಕೊನೆ" ಮತ್ತು ಅವರ ಅಪೂರ್ಣ ಕೃತಿ "ಪ್ರಕೃತಿಯ ಗತಿತಾರ್ಕಿಕತೆ"ಯಲ್ಲಿ ಅದನ್ನು ವಿಶದಪಡಿಸಿದರು.



ಹೇಗೇಲಿಯನ್ ಭಾವನಾವಾದಿ ಗತಿತಾರ್ಕಿಕತೆಯು ತನ್ನ ನಿಯಮಗಳನ್ನು ಪ್ರಕೃತಿಯ ಮೇಲೆ ಹೇರಿದ್ದರೆ, ತಾತ್ವಿಕವಾಗಿ, ಪ್ರಕೃತಿಯ ಬಗೆಗಿನ ಗತಿತಾರ್ಕಿಕ ಮತ್ತು ಭೌತವಾದಿ ದೃಷ್ಟಿಕೋನದಿಂದ ಹಿಮ್ಮೆಟ್ಟಿತ್ತು. ಭೌತವಾದಕ್ಕೆ ತೀರ ಹತ್ತಿರವಾಗಿರುವ ವಾಸ್ತವವಾದಿ ಚಿಂತಕರ ಗುಂಪು, ವಿಜ್ಞಾನವು ತನ್ನ ಸಿದ್ಧಾಂತಗಳ ಮೂಲಕ ವರ್ಣಿಸುವ ಹೊರಜಗತ್ತಿನ ವಾಸ್ತವವನ್ನು ಒಪ್ಪಿಕೊಂಡರೂ, ತನ್ನನ್ನು ಭೌತವಾದಿ ಎಂದು ಕರೆದುಕೊಳ್ಳಲು ಹಿಂದೇಟು ಹಾಕುತ್ತಿದೆ. ಅವರ ದೃಷ್ಟಿಯಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಮತ್ತು ಆನಂತರ ಕಮ್ಯುನಿಸ್ಟರ ಜತೆ ತಳುಕು ಹಾಕಿಕೊಂಡಿದ್ದ ಭೌತವಾದ ಎಂಬ ಶಬ್ದವೇ "ಕಳಂಕಿತ"ವಾಗಿತ್ತು. ವಿಜ್ಞಾನಿಗಳ ನಡುವೆ, ವಿಜ್ಞಾನಕ್ಕೆ ಒಂದು ದರ್ಶನದ ಅವಶ್ಯಕತೆ ಇದೆ ಎಂಬ ನಿಲುವನ್ನೇ ತಿರಸ್ಕರಿಸಿದ್ದರಿಂದ ಗತಿತಾರ್ಕಿಕತೆಯಿಂದ ಹಿಮ್ಮೆಟ್ಟುವಿಕೆಯು ಬಂದಿದೆ. ಅಲ್ಲದೆ ವಿಜ್ಞಾನ ತನ್ನಷ್ಟಕ್ಕೆ ತಾನು ಪೂರ್ಣ. ವಿಜ್ಞಾನಕ್ಕೆ ವಿಶಾಲ ಸಂಯೋಜನೆಯ ತತ್ವಗಳ ಅವಶ್ಯಕತೆ ಇಲ್ಲ ಎಂಬ ನೋಟ ಮತ್ತು ನಿಲುವಿನಂದಲೂ ಈ ಹಿಮ್ಮೆಟ್ಟುವಿಕೆಯು ಬಂದಿದೆ.

ಗತಿತಾರ್ಕಿಕತೆಯು ವಿಜ್ಞಾನದ ವಿವಿಧ ಅಂಗಗಳನ್ನು ಒಗ್ಗೂಡಿಸುವ ವಿಶಾಲ ಸಂಯೋಜನಾ ತತ್ವಗಳನ್ನು

ಪುಟ 10 ನೋಡಿ



ಎಂಗೆಲ್ಸ್ ಕೃತಿಗಳನ್ನು ಯಾಕೆ ಮತ್ತು ಹೇಗೆ ಓದಬೇಕು?

ಪುಟ 9 ರಿಂದ

ಒದಗಿಸುತ್ತದೆ. ದ್ರವ್ಯವೂ ಸೇರಿ ಜಗತ್ತಿನಲ್ಲಿರುವ ಎಲ್ಲವೂ ಸದಾ ಚಲನೆಯಲ್ಲಿ ಇರುತ್ತವೆ ಅಥವಾ ಬದಲಾವಣೆ ಆಗುತ್ತಿರುತ್ತವೆ ಎಂಬುದು ಗತಿತಾರ್ಕಿಕತೆಯಲ್ಲಿ ಅಡಕವಾಗಿರುವ ನಂಬಿಕೆ. ನಾವು ಸಮಾಜ ಅಥವಾ ಪ್ರಕೃತಿಯನ್ನು ನೋಡುವಾಗ, ಅವು ಕಾಲ ಮತ್ತು ಸ್ಥಳಗಳಲ್ಲಿ ಹೆಪ್ಪುಗಟ್ಟಿದಂತೆ ಸ್ಥಿರವಾಗಿ ಇವೆ ಎಂದು ನೋಡದೆ, ಅವುಗಳನ್ನು ಬದಲಾವಣೆಗಳ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಎಂಗೆಲ್ಸ್ ಅವರು ತಮ್ಮ 'ಎಂಟಿ–ಡ್ಯೂರಿಂಗ್' ನಲ್ಲಿ ಗತಿತಾರ್ಕಿಕತೆಯ ಮೂರು ತತ್ವಗಳನ್ನು ವಿವರಿಸುತ್ತಾರೆ: ಪರಿಮಾಣಾತ್ಮಕದಿಂದ ಗುಣಾತ್ಮಕ ಬದಲಾವಣೆ (ಅಥವಾ ಭೌತಶಾಸ್ತ್ರಜ್ಞರು 'ಹಂತ ಬದಲಾವಣೆ' ಎಂದು ಕರೆಯುವಂತಹದ್ದು) ಪ್ರಕೃತಿಯಲ್ಲಿ ವೈರುಧ್ಯಗಳ ಪಾತ್ರ ಮತ್ತು ಹೆಚ್ಚುವ ಸಂಕೀರ್ಣತೆಯಿಂದಾಗಿ ಉದಯಿಸುವ ಹೊಸ ಗುಣಗಳು (ನಕಾರದ ನಕಾರ). ವಿಜ್ಞಾನದಲ್ಲಿ ಒಂದು ವಿಶಿಷ್ಟ ವಿದ್ಯಮಾನಕ್ಕೆ ಸೀಮಿತವಾಗುವ ನಿಯಮಗಳನ್ನಾಗಿ ನೋಡುವ ಬದಲು, ಇವುಗಳನ್ನು ವಿಶಾಲ ತಳಹದಿಯ ಸಂಯೋಜನಾ ತತ್ವಗಳೆಂದು ಪರಿಗಣಿಸಿ, ಆ ಚೌಕಟ್ಟಿನಲ್ಲಿ ವೈಜ್ಞಾನಿಕ ನಿಯಮಗಳನ್ನು ಅರ್ಥೈಸುವುದು ಸೂಕ್ತ.

ಮಾರ್ಕ್ಸ್ ತಾನು ಆರ್ಥಿಕ ನಿಯಮಗಳನ್ನು ಗತಿತಾರ್ಕಿಕತೆಯಿಂದ ವ್ಯುತ್ಪನ್ನ ಮಾಡಲಿಲ್ಲ ಎಂದು ಬರೆದಿದ್ದಾರೆ. ಆದರೆ ಬಂಡವಾಳದ ನಿಯಮಗಳನ್ನು ವ್ಯುತ್ಪನ್ನ ಮಾಡಿದ ನಂತರ ಅವು ಗತಿತಾರ್ಕಿಕತೆಯನ್ನು ಅನುಸರಿಸುತ್ತವೆ ಎಂದರು. ಹಾಗೆಯೇ ಎಂಗೆಲ್ಸರು ವಿಜ್ಞಾನಕ್ಕೆ ಗತಿತಾರ್ಕಿಕತೆಯ ನಿಯಮಗಳನ್ನು ವಿಧಿಸುವುದಿಲ್ಲ. ಬದಲಿಗೆ ಪ್ರಕೃತಿಯ ನಿಯಮಗಳನ್ನು ವಿಜ್ಞಾನ ಆವಿಷ್ಕರಿಸಿದಾಗ, ಅವುಗಳನ್ನು ಗತಿತಾರ್ಕಿಕತೆಯ ಚೌಕಟ್ಟಿನಲ್ಲಿ ಇರಿಸುವುದು ಸಾಧ್ಯ ಎಂದು ತೋರಿಸಿದರು.

ಎಂಗೆಲ್ಸರು "ಪ್ರಕೃತಿಯ ಗತಿತಾರ್ಕಿಕತೆ"ಯನ್ನು ಪೂರ್ಣಗೊಳಿಸಲಿಲ್ಲ. ಈ ಕೃತಿಗೆ 1939 ರಲ್ಲಿ ಪೀಠಿಕೆ ಬರೆಯುತ್ತಾ ಬ್ರಿಟಿಷ್ ಮಾರ್ಕ್ಸ್‌ವಾದಿ ಹಾಗು ಪ್ರಖ್ಯಾತ ವಿಕಸನ ಜೀವಶಾಸ್ತ್ರಜ್ಞ ಜೆ.ಬಿ.ಎಸ್ ಹಾಲ್ಡೆನ್ ಅವರು ಈ ಕೃತಿ ಬಹಳ ಕಾಲ ಪ್ರಕಟಿತವಾಗದೆ ಇದ್ದುದಕ್ಕೆ ಖೇದ ವ್ಯಕ್ತಪಡಿಸುತ್ತಾ "ಡಾರ್ವಿನ್‌ವಾದದ ಬಗೆಗಿನ ಅವರ ಟಿಪ್ಪಣಿಗಳು ಗೊತ್ತಾಗಿದ್ದರೆ, ನನ್ನ ಚಿಂತನೆಯಲ್ಲಿ ಒಂದಷ್ಟು ಗೊಂದಲಗಳು ತಪ್ಪುತಿತ್ತು" ಎಂದು ಹೇಳುತ್ತಾರೆ. ಇದರ ಒಂದು ಅಪೂರ್ಣ ತುಣುಕು ಮಾನವ ವಿಕಸನದಲ್ಲಿ ಶ್ರಮದ ಪಾತ್ರ ಅದರಲ್ಲೂ ವಿಶೇಷವಾಗಿ ಕೈ ಯ ವಿಕಸನ. ಮಂಗಗಳಿಂದ ಮಾನವನನ್ನು ಪ್ರತ್ಯೇಕಿಸುವುದು ಶ್ರಮದ ಮೂಲಕ ಸಾಧನಗಳನ್ನು ಸೃಜಿಸುವ ಕೈಯ ವಿಕಸನ. ಅದಕ್ಕೆ ಎಂಗೆಲ್ಸ್ ಬರೆಯುವುದು "ಕೈ ಶ್ರಮದ ಅಂಗವಷ್ಟೇ ಅಲ್ಲ, ಅದು ಶ್ರಮದ ಉತ್ಪನ್ನವೂ ಹೌದು". ಕೈ ಯ ವಿಕಸನದಿಂದಾಗಿ ಮಾನವ ಜಾತಿಯ ವಿಕಸನವಾಯಿತು ಎನ್ನುವುದಕ್ಕಿಂತ, ಚಾರಿತ್ರಿಕ ಪ್ರಕ್ರಿಯೆಯಾಗಿ ಕೈ ಮತ್ತು ಶ್ರಮದ ಸಹ ವಿಕಸನದಿಂದ ಮಾನವನ ವಿಕಸನವಾಯಿತು ಎನ್ನುವುದು ಹೆಚ್ಚು ಸೂಕ್ತವಾಗುತ್ತದೆ.

ವಿಕಾಸದ ಸಿದ್ಧಾಂತದ ಕುರಿತಾಗಿ ಲಾಮಾರ್ಕ ನಿಲುವನ್ನು ಅನುಸರಿಸಿದ್ದಕ್ಕಾಗಿ ಎಂಗೆಲ್ಸ್ ಅವರನ್ನು ಟೀಕಿಸಲಾಗುತ್ತದೆ. ಅವರ ಶ್ರಮದ ಕೌಶಲ್ಯಗಳ ಅನುವಂಶಿಕತೆಯ ಬಗೆಗಿನ ವಿವರಣೆಗಳನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಈ ಟೀಕೆಯನ್ನು ಮಾಡಲಾಗುತ್ತದೆ. ಡಾರ್ವಿನ್ ತನ್ನ ನೈಸರ್ಗಿಕ ಆಯ್ಕೆಯ ಸಿದ್ಧಾಂತ ಪ್ರತಿಪಾದಿಸುವಾಗ, ಲಾಮಾರ್ಕನ ಸಂಪಾದಿತ ಗುಣಲಕ್ಷಣಗಳ ಅನುವಂಶೀಯತೆಯನ್ನು ವಿಕಸನದ ಚಾಲಕ ಎಂದು ಕರೆದು ಬೆಂಬಲಿಸಿದ್ದನ್ನು ಈ ಟೀಕಾಕಾರರು ಮರೆಯುತ್ತಾರೆ. ಆತನ 1868 ರಲ್ಲಿ ಪ್ರಕಟವಾದ ಆನುವಂಶಿಕತೆಯ ಸಿದ್ಧಾಂತದಲ್ಲಿ ಆತ ತನ್ನ ಈ ಸಿದ್ಧಾಂತ ನೈಸರ್ಗಿಕ ಆಯ್ಕೆ ಮತ್ತು ಲಾಮಾರ್ಕನ ಸಂಪಾದಿತ ಗುಣಲಕ್ಷಣಗಳ ಆನುವಂಶಿಕತೆಯ ಸಂಗಮ ಎಂದಿದ್ದಾನೆ. ಮೆಂಡೆಲ್ ನ ಆನುವಂಶಿಕತೆಯ ಸಿದ್ಧಾಂತ ಅಂದಿನ ಜೀವ ವಿಜ್ಞಾನಿಗಳಿಗೆ ಗೊತ್ತಿರಲಿಲ್ಲ. ಜೀವ ವಿಜ್ಞಾನ ನಂತರದಲ್ಲಿ ಮೆಂಡೆಲನ ಆನುವಂಶಿಕತೆಯನ್ನು ಸಂಯೋಜಿಸಿಕೊಂಡಿತು.

ಎಂಗೆಲ್ಸರ ಪ್ರಮುಖ ಕೊಡುಗೆಯೆಂದರೆ ಪ್ರಕೃತಿಯು, ಬರಿಯ ಬದಲಾಗದ ಪ್ರಕೃತಿಯಲ್ಲ ಅಥವಾ ಅದು ಇತಿಹಾಸಕ್ಕೆ ಒಂದು ಹಿನ್ನೆಲೆಯಷ್ಟೇ ಅಲ್ಲ ಎಂಬುದನ್ನ ತೋರಿಸಿದ್ದು. ಜೀವ ಜಾತಿಗಳು ವಿಕಸನಗೊಂಡಂತೆ, ಪ್ರಕೃತಿಯೂ ಬದಲಾಗುತ್ತದೆ ಅಂದರೆ ಅದೂ ವಿಕಸನದ ಭಾಗ ಎಂಬುದನ್ನು ಅವರು ಎತ್ತಿ ತೋರಿಸಿದರು. ಪ್ರಕೃತಿ ಮತ್ತು ಜೀವ ಜಾತಿಗಳು (ಮಾನವನೂ ಸೇರಿ) ಈ ಚಲನಶೀಲ ಬದಲಾವಣೆಯ ಮತ್ತು ವಿಕಾಸದ ಚಾರಿತ್ರಿಕ ಪ್ರಕ್ರಿಯೆಯ ಭಾಗ.

ಮಾರ್ಕ್ಸ್ ಮತ್ತು ಎಂಗೆಲ್ಸರ ಹಲವು ಅಧ್ಯಯನಗಳಲ್ಲಿ ಒಂದು ಪ್ರಮುಖ ಒತ್ತು ಉತ್ಪಾದನೆಯೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಸಂಬಂಧಗಳ ಅಧ್ಯಯನವಾಗಿತ್ತು. ಮಾರ್ಕ್ಸ್ ಅವರು ಉದ್ಯಮ ಮತ್ತು ಕೃಷಿಯಲ್ಲಿನ ತಂತ್ರಜ್ಞಾನದ ಬದಲಾವಣೆಗಳ ಮೇಲೆ ಗಮನ ಕೇಂದ್ರೀಕರಿಸಿದ್ದರು. ಅವರಿಗೆ ಯಾರಾದರೊಬ್ಬರು ತಂತ್ರಜ್ಞಾನದ ಬೆಳವಣಿಗೆಯನ್ನು ಅರ್ಥೈಸಿಕೊಂಡು ಈ ಎಲ್ಲ ಬದಲಾವಣೆಗಳನ್ನು ಸಾಧ್ಯಗೊಳಿಸುವ ವಿಜ್ಞಾನದಲ್ಲಿನ ಮುನ್ನಡೆಯನ್ನು ತಿಳಿದು ವಿವರಿಸುವವರು ಬೇಕಾಗಿದ್ದರು. ಮಾರ್ಕ್ಸ್ ಅವರು ವಿಜ್ಞಾನದಲ್ಲಿನ ಬೆಳವಣಿಗೆಗಳನ್ನು ಗಮನಿಸುತ್ತಿದ್ದರೂ ವಿಜ್ಞಾನಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು ತಂತ್ರಜ್ಞಾನದ ಬೆಳವಣಿಗೆಗಳ ಮೇಲೆ ಯಾವ ಪ್ರಭಾವ ಬೀರುತ್ತದೆ ಎಂಬುದನ್ನು ತಿಳಿಯಲು ಎಂಗೆಲ್ಸರತ್ತ ನೋಡುತ್ತಿದ್ದರು.

ಔದ್ಯಮಿಕ ಕ್ರಾಂತಿಯ ಪರಿಣಾಮವಾಗಿ ಇಂಗ್ಲಂಡಿನಲ್ಲಿ ದುಡಿಯುವ ವರ್ಗದ ಪರಿಸ್ಥಿತಿ ಕುರಿತು ಎಂಗೆಲ್ಸ್ ಬರೆದಿದ್ದರಷ್ಟೇ ಅಲ್ಲ. ಅವರು ಮ್ಯಾಂಚೆಸ್ಟರ್ ನ ಜವಳಿ ಗಿರಣಿಯ ಪಾಲುದಾರರಾಗಿಯೂ ದುಡಿದಿದ್ದರು. ಆಗ ಇಂಗ್ಲಂಡಿನಲ್ಲಿ ನಡೆಯುತ್ತಿದ್ದ ಔದ್ಯಮಿಕ ಕ್ರಾಂತಿಯ ಭಾಗವಾಗಿದ್ದರು ಕೂಡ. ರಸಾಯನ ಶಾಸ್ತ್ರಜ್ಞ ಮತ್ತು ಆಜೀವನ ಕಮ್ಯೂನಿಸ್ಟರಾಗಿದ್ದ ಕಾರ್ಲ್ ಶ್ಹೋರ್ ಲೇಮ್ಮರ್ ಅವರನ್ನು ಆತ್ಮೀಯ ಗೆಳೆಯನೆಂದು ಎಂಗೆಲ್ಸರು ಪರಿಗಣಿಸಿದ್ದರು. ರೋಯಲ್ ಸೊಸೈಟಿಯ ಫೆಲೋ ಆಗಿದ್ದು ಆ ಕಾಲದ ಪ್ರಮುಖ ವಿಜ್ಞಾನಿಯಾಗಿದ್ದ ಈ ಕಾರ್ಲ್ ಶ್ಹೋರ್ ಲೇಮ್ಮರ್, ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರಿಗೆ ವಿಜ್ಞಾನವನ್ನು ಅರಿಯುವಲ್ಲಿ ಸಹಾಯ ಮಾಡುತ್ತಿದ್ದರು.

ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ನಡುವೆ ಇದ್ದ ಶ್ರಮ ವಿಭಜನೆಯು ವಿಜ್ಞಾನದ ಮೇಲಿನ ಬರವಣಿಗೆಗಷ್ಟೇ ಸೀಮಿತವಾಗದೆ, ಪ್ರಕೃತಿ ಮತ್ತು ಸಮಾಜದ ಮೂಲಭೂತ ಗುಣವಾದ ಬದಲಾವಣೆಯನ್ನು ಅಲ್ಲಗಳೆಯುವ ಆಧ್ಯಾತ್ಮಿಕ ಚಿಂತನೆಯ ವಿರುದ್ಧದ ಹೋರಾಟವನ್ನೂ ಒಳಗೊಂಡಿತ್ತು. 'ಕ್ಯಾಪಿಟಲ್'ನ ಮೊದಲ ಸಂಪುಟ ಔದ್ಯಮಿಕ ಕ್ರಾಂತಿ ಮತ್ತು ತಂತ್ರಜ್ಞಾನದ ಚರಿತ್ರೆಯ ಅತ್ಯಂತ ಹರಿತವಾದ ವಿಶ್ಲೇಷಣೆಯಾಗಿದ್ದರೆ, 'ಪ್ರಕೃತಿಯ ಗತಿತಾರ್ಕಿಕತೆ"ಯು, ತನ್ನ ಅಪೂರ್ಣ ರೂಪದಲ್ಲೂ, ಎಂಗೆಲ್ಸ್ ಅವರ ಜೀವಮಾನ ಪೂರ್ತಿ ಅವಧಿಯಲ್ಲಿನ ವಿಜ್ಞಾನದ ಬೆಳವಣಿಗೆಯ ಆಳವಾದ ತಿಳುವಳಿಕೆಯ ಉದಾಹರಣೆಯಾಗಿದೆ.

ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಹಲವು ಟೀಕಾಕಾರರು ಮಾರ್ಕ್ಸ್‌ವಾದ ಉತ್ಪಾದನಾ–ಸಂಬಂಧಿತ ಪಕ್ಷಪಾತವನ್ನು ಹೊಂದಿದೆ. ಆದ್ದರಿಂದ ಪ್ರಕೃತಿಯನ್ನು ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಲಭ್ಯವಿರುವ ಅನಂತ ಸಂಪನ್ಮೂಲ ಎಂದು ಅದು ಪರಿಗಣಿಸುತ್ತದೆ ಎಂದು ಟೀಕಿಸುತ್ತಾರೆ. ನಮ್ಮ ದೇಶದಲ್ಲಿನ ಗಾಂಧೀವಾದಿಗಳು ಇಂತಹದೇ ಟೀಕೆಯನ್ನು ಮಾಡುತ್ತಾರೆ. ಅವರ ಪ್ರಕಾರ ಮಾರ್ಕ್ಸ್‌ವಾದ ಮತ್ತು ಬಂಡವಾಳವಾದ ಎರಡೂ ಔದ್ಯಮಿಕ ಬೆಳವಣಿಗೆಗೆ ಒಟ್ಟು ನೀಡುತ್ತವೆ. ಇಂತಹ ಧೋರಣೆ ಒಟ್ಟು ಪರಿಸರದ ಬಿಕ್ಕಟ್ಟಿಗೆ ಕಾರಣವಾಗುತ್ತದೆ ಎಂಬುದು ಅವರ ಟೀಕೆ.

ಇಂತಹ ಟೀಕೆಗೆ ವ್ಯತಿರಿಕ್ತವಾಗಿ, ಬಂಡವಾಳಶಾಹಿ ಉತ್ಪಾದನೆಯ ವಿಚಾರಹೀನ ವಿಸ್ತರಣೆಯು ಪ್ರಕೃತಿಗೆ ಅಪಾರ ಹಾನಿ ಮಾಡುವುದರ ಜೊತೆಗೆ ಉತಾದ್ಪನೆಯೇ ಕುಸಿದು ಬೀಳುವ ಅಪಾಯಕ್ಕೆ ಎಡೆ ಮಾಡಿ ಕೊಡುವ ಬಗೆಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಸವಿಸ್ತಾರವಾಗಿ ಬರೆದಿದ್ದಾರೆ. ಮೆಸೊಪೊಟೆಮಿಯಾದ ಮರುಭೂಮೀಕರಣದಿಂದ ಹಿಡಿದು, ಭಾರತದಲ್ಲಿನ ಬ್ರಿಟಿಷರ ವಿಪತ್ಕಾರಕ ನೀತಿಗಳಿಂದಾಗಿ ನೇಕಾರರ ಸರ್ವನಾಶದವರೆಗೆ ಹಲವು ಉದಾಹರಣೆಗಳನ್ನು ಅವರು ನೀಡಿದ್ದಾರೆ. 'ಕ್ಯಾಪಿಟಲ್'ನ ಮೊದಲ ಸಂಪುಟದಲ್ಲಿ ಮಾರ್ಕ್ಸ್ ಬರೆಯುತ್ತಾರೆ, "ಇಂಗ್ಲಿಷರ ಹತ್ತಿ ಯಂತ್ರಗಳು ಭಾರತದಲ್ಲಿ ತೀವ್ರ ಪರಿಣಾಮ ಬೀರಿವೆ. ಗವರ್ನರ್ ಜನರಲ್ ಅವರ 1834–35 ವರದಿ ಹೇಳುವಂತೆ ವಾಣಿಜ್ಯದ ಇತಿಹಾಸದ ಪುಟಗಳಲ್ಲೆಲ್ಲೂ ಸರಿಸಾಟಿಯಾಗದ ದುರ್ದೆಸೆ ಇದು. ಹತ್ತಿ ನೇಕಾರರ ಎಲುಬುಗಳು ಭಾರತದ ಬಯಲು ನಾಡುಗಳನ್ನು ಬಿಳಿಚಿಕೊಳ್ಳುವಂತೆ ಮಾಡುತ್ತಿವೆ".



ಬಂಡವಾಳಶಾಹಿಯು ಪ್ರಕೃತಿಯ ಉತ್ಪಾದನಾ ಸಾಮರ್ಥ್ಯಕ್ಕೆ ಎಂತಹ ಹಾನಿ ಮಾಡಬಲ್ಲುದೆಂಬುದರ ಪೂರ್ಣ ಅರಿವು ಎಂಗೆಲ್ಸ್ ಅವರಿಗಿತ್ತು. ಬೆಲ್ಲಾಮಿ ಫೋಸ್ಟರ್ ಅವರು 'ಮಂಥ್ಲೀ ರಿವ್ಯೂ'ನಲ್ಲಿ (ನವೆಂಬರ್ 1, 2020) ನಲ್ಲಿ ಬರೆದಿರುವಂತೆ " ಎಂಗೆಲ್ಸ್ ಅವರು "ಎಂಟಿ–ಡ್ಯೂರಿಂಗ್"ನಲ್ಲಿ ಗುರುತಿಸಿರುವಂತೆ, ಬಂಡವಾಳಶಾಹಿ ವರ್ಗ ಎಂತಹ ವರ್ಗವೆಂದರೆ ಅದರ ನಾಯಕತ್ವದಡಿ ಸಮಾಜವು, ಭದ್ರತಾ ಕವಾಟಗಳು(ಸೇಫ್ಟಿ ವಾಲ್ವ್) ಹಾಳಾಗಿರುವ ಉಗಿಬಂಡಿಯಂತೆ ವಿನಾಶಡೆದೆಗೆ ವೇಗದಿಂದ ಧಾವಿಸುತ್ತಿದೆ ಮತ್ತು ಅದರ ಚಾಲಕ ಈ ಕವಾಟವ (ಸೇಫ್ಟಿ ವಾಲ್ವ್)ನ್ನು ತೆರೆಯಲಾರದಷ್ಟು ದುರ್ಬಲನಾಗಿದ್ದಾನೆ.' ಬಂಡವಾಳವು 'ಉತ್ಪಾದಕ ಶಕ್ತಿಗಳನ್ನು ನಿಗ್ರಹಿಸಲಾರದ ಸ್ಥಿತಿಯಲ್ಲಿದೆಯಷ್ಟೆ ಅಲ್ಲ ಅದರ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರಗಳ ಮೇಲಿನ ವಿನಾಶಕಾರಿ ಪರಿಣಾಮಗಳನ್ನು ತಡೆಯಲಾರದೆ ಇಡೀ ಬೂರ್ಜ್ವಾ ಸಮಾಜವನ್ನು ಕ್ರಾಂತಿ ಅಥವಾ ಅಳಿವಿನಂಚಿಗೆ ದೂಡುತ್ತಿದೆ." 'ಇಡೀ ಆಧುನಿಕ ಸಮಾಜ ಅಳಿವಿನಿಂದ ತಪ್ಪಿಸಿಕೊಳ್ಳಬೇಕಾದರೆ, ಉತ್ಪಾದನಾ ವಿಧಾನ ಮತ್ತು ವಿತರಣೆಯಲ್ಲಿ ಕ್ರಾಂತಿಯ ಅಗತ್ಯವಿದೆ' ಎನ್ನುತ್ತಾರೆ ಎಂಗೆಲ್ಸ್.

ಬಂಡವಾಳ ಪ್ರಕೃತಿಯನ್ನು ಹಾಳುಗೆಡಹುವುದು ಮಾರ್ಕ್ಸ್ ಮತ್ತು ಎಂಗೆಲ್ಸರ ಅರಿವಿನಲ್ಲಿತ್ತು. ಅದು ಪ್ರಕೃತಿಯಲ್ಲಿ ಹುಟ್ಟುಹಾಕುವ ಬಿಕ್ಕಟ್ಟುಗಳ ತಿಳುವಳಿಕೆಯೂ ಅವರಿಗಿತ್ತು. ಮುಂದಿನ ತ್ರೈಮಾಸಿಕದ ಲಾಭಕ್ಕಿಂತ ಅಥವಾ ಷೇರು ಮಾರುಕಟ್ಟೆಯಲ್ಲಿ ತನ್ನ ಷೇರುಗಳ ಬೆಲೆಯನ್ನು ಮೀರಿ ಚಿಂತಿಸಲಾರದ, ಬಂಡವಾಳಶಾಹಿ ಉತ್ಪಾದನಾ ವಿಧಾನವು ತರುವ ಸಮಸ್ಯೆಗಳನ್ನು ದುಡಿಯುವ ವರ್ಗವು ಎದುರಿಸುವ ಅವಶ್ಯಕತೆಯನ್ನು, ಪರಿಸರ–ಸಾಮಾಜಿಕ ಚಳುವಳಿಯು ಒತ್ತಿ ಹೇಳುತ್ತದೆ.

ಎಡ ಚಳುವಳಿಯು ವೈಜ್ಞಾನಿಕ ಮತ್ತು ತಂತ್ರಜ್ಞಾನಿಕ ಮನಸ್ಸುಗಳಲ್ಲಿ ಅತ್ಯುತ್ತಮವಾದವುಗಳನ್ನು ಒಟ್ಟಿಗೆ ತಂದು ಬಂಡವಾಳದ ಲಾಭ ಪಿಪಾಸೆ ತರುವ ಹಲವು ದುರಂತಗಳ ವಿರುದ್ಧ ಹೋರಾಡಬೇಕಿದೆ. ನಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಇದನ್ನೇ ಮಾಡಲಾಯಿತು. ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜದಲ್ಲಿ ಪರ್ಯಾಯಗಳು ಲಭ್ಯವಿವೆ ಎಂಬುದನ್ನೂ ಎತ್ತಿ ತೋರಿಸಬೇಕಿದೆ. ಸಮಾಜದ ಮತ್ತು ಪ್ರಕೃತಿಯ ಸಮಸ್ಯೆಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನಗಳು ತಾವೇ ತಾವಾಗಿ ಪರಿಹಾರಿಸಲಾರವು. ಹಾಗೆಯೇ ಈ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಹಾರಗಳ ಭಾಗವಾಗದೇ ಇರುವುದೂ ಸಾಧ್ಯವಿಲ್ಲ. ಎಂಗೆಲ್ಸ್ ಅವರು ಈ ಉದಾಹರಣೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾವು ಈ ದಾರಿಯನ್ನು ಅನುಸರಿಸುವ ಅವಶ್ಯಕತೆಯಿದೆ. ●

ಕಾಂ. ಗಣೇಶ ಶಂಕರ ವಿದ್ಯಾರ್ಥಿ ನಿಧನ

ಬಿಹಾರದ ಹಿರಿಯ ಕಮ್ಯುನಿಸ್ಟ್ ನೇತಾರ ಗಣೇಶ ಶಂಕರ ವಿದ್ಯಾರ್ಥಿ ಜನವರಿ 11ರಂದು ಪಾಟ್ನಾದಲ್ಲಿ ನಿಧನರಾದರು. ಅವರಿಗೆ 96 ವರ್ಷಗಳಾಗಿದ್ದವು.

ಗಣೇಶ್‌ದಾ ಎಂದು ಹೆಸರಾಗಿದ್ದ ಇವರು 17 ವರ್ಷದವರಾಗಿದ್ದಾಗಲೇ ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕಿ ಸುಮಾರು ಎಂಟು ದಶಕಗಳ ಸಾರ್ವಜನಿಕ ಜೀವನವನ್ನು ನಡೆಸಿದವರು. 1942ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಅವರು ಹಲವು ವರ್ಷಗಳ ಕಾಲ ಪಕ್ಷದ ಬಿಹಾರ ರಾಜ್ಯ ಕಾರ್ಯದರ್ಶಿಯಾಗಿದ್ದರು ಮತ್ತು ಕೇಂದ್ರ ಸಮಿತಿ ಸದಸ್ಯರೂ ಅಗಿದ್ದರು.



ಭೂಮಾಲಕರ ಕುಟುಂಬದಿಂದ ಬಂದಿದ್ದರೂ ಕಾಂ.ವಿದ್ಯಾರ್ಥಿ, ಭೂಹೀನರು ಮತ್ತು ಅಂಚಿನಲ್ಲಿರುವ ರೈತರ ಹಕ್ಕುಗಳಿಗಾಗಿ ಹೋರಾಡಿದವರು. ಈ ಹೋರಾಟಗಳಲ್ಲಿ ಅವರು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯದ ನಂತರವೂ ಆರು ವರ್ಷಗಳ ಜೈಲುವಾಸ ಅನುಭವಿಸಿದ್ದರು.

ಎರಡು ಬಾರಿ ವಿಧಾನಸಭಾ ಸದಸ್ಯರಾಗಿ ಮತ್ತು ಒಂದು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಅವರು ಆಯ್ಕೆಯಾಗಿದ್ದರು.

ಸರಳ ಜೀವಿಯಾದ ಅವರ ನಿಧನ ಬಿಹಾರದ ಎಡ ಆಂದೋಲನಕ್ಕೆ ಒಂದು ದೊಡ್ಡ ನಷ್ಟ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.

ಮಹಿಳಾ ರೈತ ದಿನಾಚರಣೆಗೆ ಮಹಿಳಾ ಸಂಘಟನೆಗಳ ಬೆಂಬಲ

ಪುಟ 2 ರಿಂದ

ಮುಂದೊತ್ತುತ್ತಿದೆ.

ರೈತರು ಒಂದೂವರೆ ತಿಂಗಳುಗಳಿಂದ ಈ ಮಾರಕ ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು, ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಕಾನೂನಾತ್ಮಕಗೊಳಿಸಬೇಕು ಎಂದು ದಿಲ್ಲಿಯ ಐದು ಗಡಿಗಳಲ್ಲಿ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ನಡೆಯುತ್ತಿರುವ ಸತ್ಯಾಗ್ರಹದಲ್ಲಿ ಸಾವಿರಾರು ಮಹಿಳೆಯರು ಕೂಡ ಭಾಗವಹಿಸುತ್ತಿದ್ದಾರೆ. ಇದುವರೆಗೆ 60ಕ್ಕೂ ಹೆಚ್ಚು ಪ್ರತಿಭಟನಾಕಾರರ ಸಾವುಗಳು ಸಂಭವಿಸಿದರೂ ಮೋದಿ ಸರಕಾರ ರೈತರು ಬೇಡವೇ ಬೇಡ ಎನ್ನುತ್ತಿರುವ ಕಾಯ್ದೆಗಳನ್ನು ರದ್ದು ಮಾಡಲು ನಿರಾಕರಿಸುತ್ತ ತನ್ನ ಹೃದಯಹೀನತೆಯನ್ನು ಪ್ರದರ್ಶಿಸುತ್ತಿದೆ. ಆದ್ದರಿಂದ ಈ ಆರು ಮಹಿಳಾ ಸಂಘಟನೆಗಳು ತಾವು ಮಹಿಳಾ ರೈತರ ದಿನಾಚರಣೆಯಲ್ಲಿ ಭಾಗವಹಿಸಲು ನಿರ್ಧರಿಸಿರುವುದಾಗಿ ಹೇಳಿವೆ.

ಕಾರ್ಮಿಕರ ಸಂಘಟನೆಯ ಆರಂಭಿಕ ಪ್ರಯತ್ನಗಳು



ವಸಾಹತುಶಾಹಿ ಆಳ್ವಿಕೆಯ ಅಡಿಯಲ್ಲಿ ಇಡೀ ಪ್ರಭುತ್ವ ವ್ಯವಸ್ಥೆಯ ಬೆಂಬಲವನ್ನು ಅನುಭವಿಸುತ್ತಿದ್ದ ವಿದೇಶಿ ಗುತ್ತೇದಾರಿಗಳ ಎದುರು, ಸ್ಥಳೀಯ ಬಂಡವಾಳಶಾಹಿಗಳು ಸ್ಪರ್ಧಿಸಬೇಕಾದ ಅತ್ಯಂತ ಕಷ್ಟಕರ ಸ್ಥಿತಿಗೆ ಇಳಿಯುತ್ತಾರೆ. ಈ ಅಸಮತೋಲನವನ್ನು ಸರಿದೂಗಿಸಲು, ಸ್ಥಳೀಯ ಬೂರ್ಜ್ವಾಗಳು ಕಾರ್ಮಿಕ ವರ್ಗವನ್ನು ನಿರ್ಲಜ್ಜ ಮತ್ತು ಅನಾಗರೀಕ ಶೋಷಣೆಗೆ ಒಳಪಡಿಸುತ್ತಾರೆ. ಇದು ಭಾರತದಲ್ಲಿ ಕಾರ್ಮಿಕ ವರ್ಗವನ್ನು ನೇರ ದೈಹಿಕ ಅಳಿವಿನ ಬೆದರಿಕೆಗೆ ಒಡ್ಡಿತು. ಆದ್ದರಿಂದ, ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟವು ವಾಸ್ತವದಲ್ಲಿ ಭಾರತದ ಶ್ರಮಜೀವಿಗಳ ಪ್ರಾಥಮಿಕ ಕಾರ್ಯವಾಯಿತು, ಆದರೆ ಈ ಸಾಕ್ಷಾತ್ಕಾರವು ಅವರಿಗೆ ತಕ್ಷಣ ಬರಲಿಲ್ಲ. ಈ ರಾಜಕೀಯ ಪ್ರಜ್ಞೆ ಹೊಂದುವ ಮೊದಲು ಅವರು ಹಲವಾರು ಆರ್ಥಿಕ ಹೋರಾಟಗಳ ಮೂಲಕ ತುಲನಾತ್ಮಕವಾಗಿ ದೀರ್ಘಕಾಲದ ಹಾದಿಯಲ್ಲಿ ಸಾಗಬೇಕಾಯಿತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: **ಸಿ.ಆರ್.ಶಾನಭಾಗ**

ವಿಭಿನ್ನ ದಾಖಲೆಗಳು ಮತ್ತು ದಾಖಲೆಗಳಲ್ಲಿ ಹರಡಿರುವ ಸಂಗತಿಗಳು ಮತ್ತು ಮಾಹಿತಿಗಳನ್ನು ಕಲೆ ಹಾಕಿದಾಗ 1881ರಿಂದ 1895ರ ನಡುವೆ ದೇಶದ ವಿವಿಧ ಭಾಗಗಳಲ್ಲಿ ಸೂರತ್, ಬಾಂಬೆ, ವಾರ್ಧಾ, ಕೊಯಮತ್ತೂರು, ಬಂಗಾಲ, ಅಹಮದಾಬಾದ್‌ಗಳಲ್ಲಿ ಹಲವು ಸಣ್ಣ –ದೊಡ್ಡ ಮುಷ್ಕರಗಳು ನಡೆದಿರುವುದು ಕಂಡು ಬರುತ್ತದೆ. 1893 ರಲ್ಲಿ ಬಾಂಬೆಯಲ್ಲಿ ಕಾರ್ಮಿಕರ ಅತಿ ದೊಡ್ಡ ಮುಷ್ಕರವು ಗಿರಣಿಗಳ ಮೇಲೆ ಪರಿಣಾಮ ಬೀರಿತು. ಕಾರ್ಮಿಕರು 'ಮುಷ್ಕರದ–ಉನ್ಮಾದ'ದಿಂದ ಬಳಲುತ್ತಿದ್ದಾರೆ ಎಂದು ಆಡಳಿತವರ್ಗ ದೂಷಿಸಿತು. 12,000 ರಿಂದ 15,000 ಕಾರ್ಮಿಕರು ಇದರಲ್ಲಿ ಭಾಗಿಯಾಗಿದ್ದರು. 1895 ರ ಫೆಬ್ರವರಿಯಲ್ಲಿ ಅಹಮದಾಬಾದ್‌ನ 8,000 ಕಾರ್ಮಿಕರು ಮುಷ್ಕರ ನಡೆಸಿದರು, ಅಹಮದಾಬಾದ್‌ನ ಪ್ರೆಸಿಡೆನ್ಸಿ ಇನ್ಸ್‌ಪೆಕ್ಟರ್ ಈ ಮುಷ್ಕರವನ್ನು ಬೃಹತ್ ಎಂದು ಬಣ್ಣಿಸಿದರು. ಇದು 10 ದಿನಗಳವರೆಗೆ ನಡೆದು ನಂತರ ವಿಫಲವಾಗಿ ಮುಗಿಯಿತು. 1895 ರಲ್ಲಿಯೇ ನಡೆದ ಬಡ್ಜ್–ಬಡ್ಜ್ ಸೆಣಬಿನ ಗಿರಣಿಯ ಮೊದಲ ಮುಷ್ಕರವು ಗಂಭೀರ ಮತ್ತು ವ್ಯಾಪಕವಾದದ್ದಾಗಿತ್ತು. ಮುಷ್ಕರದಲ್ಲಿದ್ದ, ಕಾರ್ಮಿಕರ ಮೇಲೆ ಗುಂಡು ಹಾರಿಸಲಾಯಿತು.

ಕಾರ್ಮಿಕ ಸಂಘಗಳು ಇನ್ನೂ ಬೆಳೆದಿರದಿದ್ದಾಗ ಯುರೋಪಿಯನ್ ಬಂಡವಾಳಶಾಹಿಗಳ ಶೋಷಣೆಗೆ ಕಾರ್ಮಿಕರ ಪ್ರತಿರೋಧವನ್ನು ಕ್ರೂರವಾಗಿ ನಿಗ್ರಹಿಸುವ ಪ್ರಯತ್ನ ನಡೆಯಿತು. ಇದನ್ನು ಇನ್ನೂ ಹೋರಾಟದ ಅನುಭವವಿಲ್ಲದ ಕಾರ್ಮಿಕರು ಅಪಾರ ಧೈರ್ಯ ಮತ್ತು ಸಮರಶೀಲತೆಯಿಂದ ಎದುರಿಸಿದ್ದು ಕಾಣುತ್ತದೆ. ಬಡ್ಜ್ –ಬಡ್ಜ್ ಸೆಣಬಿನ ಗಿರಣಿ ಕಾರ್ಮಿಕರ ಮುಷ್ಕರವು ನಿಸ್ಸಂದೇಹವಾಗಿ ಆ ಅವಧಿಯ ಕಾರ್ಮಿಕ–ವರ್ಗದ ಚಳವಳಿಯಲ್ಲಿ ಬಹಳ ಮಹತ್ವದ ಘಟನೆಯೆಂದು ಗುರುತಿಸಲ್ಪಡುತ್ತದೆ.

1897ರಲ್ಲಿ ಬಾಂಬೆಯಲ್ಲಿ ವ್ಯಾಪಕ ಕಾರ್ಮಿಕ ಅಶಾಂತಿ ಇತ್ತು. ತೊಂಬತ್ತರ ದಶಕದ ಉತ್ತರಾರ್ಧದಲ್ಲಿ, ಬಾಂಬೆ, ಕಾನ್ಪುರ ಮತ್ತು ಇತರ ಕೇಂದ್ರಗಳಲ್ಲಿ ಗಡ್ಡೆ–ಪ್ಲೇಗ್ ನ ವಿನಾಶಕಾರಿ ಹಾವಳಿ ಏಕಾಏಕಿ ಭಾರಿ ಜೀವ–ನಷ್ಟಕ್ಕೆ ಕಾರಣವಾಯಿತು. ಅನೇಕ ಕಾರ್ಮಿಕರು ಕೆಲಸವನ್ನು ತ್ಯಜಿಸಿ ಗ್ರಾಮಾಂತರಕ್ಕೆ ಓಡಿಹೋದರು, ಇದರಿಂದಾಗಿ ಬಾಂಬೆ ಮತ್ತು ಇತರ ಕೈಗಾರಿಕಾ ಕೇಂದ್ರಗಳಲ್ಲಿ ಹಲವಾರು ವರ್ಷಗಳ ಕಾಲ ಕಾರ್ಮಿಕರ ಭಾರಿ ಕೊರತೆಯಾಯಿತು.. "ಬಾಂಬೆಯಲ್ಲಿ, ಸುಮಾರು 1898ರಲ್ಲಿ, ಕೆಲಸಗಾರರಿಗಾಗಿ ಪೈಪೋಟಿಯು ಎಷ್ಟಾಯಿತೆಂದರೆ, ಕಾರ್ಮಿಕರನ್ನು ಪಡೆಯಲು ವಾಸ್ತವವಾಗಿ ಬೀದಿ ಮೂಲೆಗಳಲ್ಲಿ ಹರಾಜು ಮಾಡಲಾಯಿತು." ಇದು ಕಾರ್ಮಿಕರ ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸಿತು ಮತ್ತು ವಿವಿಧ ಗಿರಣಿಗಳಲ್ಲಿ ಹಲವಾರು ಕಾರ್ಮಿಕ ಅಶಾಂತಿಯ ಘಟನೆಗಳು ಸಂಭವಿಸಿದವು, ಕೆಲವೊಮ್ಮೆ ವೇತನ ಹೆಚ್ಚಿಸಲು ಮಾಲಿಕರರ ಮೇಲೆ ಒತ್ತಾಯಗಳು ಬಂದವು.

ಗಿರಣಿ ಮಾಲೀಕರು ಈ ಸಮಯದಲ್ಲಿ, ಮಾಸಿಕ ವೇತನವನ್ನು ಬದಲಿಸಿ ದೈನಂದಿನ ವೇತನ ವ್ಯವಸ್ಥೆಯನ್ನು ಪರಿಚಯಿಸಿದರು. ಸಾಂಕ್ರಾಮಿಕ ರೋಗವು ಕಡಿಮೆಯಾದಾಗ, ಕಾರ್ಮಿಕರು ಕೈಗಾರಿಕಾ ಕೇಂದ್ರಗಳಿಗೆ ಹಿಂದಿರುಗಿದಾಗ ಮಾಲೀಕರು ಮಾಸಿಕ ವೇತನದ ಹಳೆಯ ವ್ಯವಸ್ಥೆಗೆ ಮರಳಿದರು. ಇದು ಕಾರ್ಮಿಕರಿಗೆ ಹಿಡಿಸಲಿಲ್ಲ, ದೈನಂದಿನ ವೇತನ ವ್ಯವಸ್ಥೆಯನ್ನು ಮುಂದುವರೆಸಬೇಕೆಂದು ಒತ್ತಾಯಿಸಿ ಅವರು ಮುಷ್ಕರ ಮಾಡಿದರು. ಮುಷ್ಕರ ಯಶಸ್ವಿಯಾಗಲಿಲ್ಲ, ಬದಲಿಗೆ ಕಾರ್ಮಿಕರು ಮಾಲೀಕರಿಂದ ಪ್ರತಿದಾಳಿ ಎದುರಿಸಬೇಕಾಯಿತು. ಗಿರಣಿ ಮಾಲೀಕರು, ಕಾರ್ಮಿಕರನ್ನು ನೇಮಿಸಿಕೊಳ್ಳಲು ಮತ್ತು ಗುತ್ತಿಗೆದಾರರ ಮೂಲಕ ವೇತನವನ್ನು ನೀಡಲು ನಿರ್ಧರಿಸಿದ್ದಾರೆ ಎಂದು ವರದಿಯಾಯಿತು. ಕಾರ್ಮಿಕರ ಪರ್ಯಾಯ ಪಟ್ಟಿಯನ್ನು ತಯಾರಿಸಿಟ್ಟುಕೊಂಡು, ಮತ್ತು ಅಸ್ತಿತ್ವದಲ್ಲಿರುವ ಕಾರ್ಮಿಕರಿಂದ ಯಾವುದೇ ಮುಷ್ಕರವಾದಾಗ ಅವರನ್ನು ಬದಲಿಯಾಗಿ ಕೆಲಸಕ್ಕೆ ಬಳಸಲು ನಿರ್ಧರಿಸಿದರು.

ದೇಶದ ಹಲವಾರು ಕೈಗಾರಿಕಾ ಕೇಂದ್ರಗಳಲ್ಲಿ ಇನ್ನೂ ಅನೇಕ ಸಣ್ಣಪುಟ್ಟ ಮುಷ್ಕರಗಳು ಮತ್ತು ಕಾರ್ಮಿಕ ವಿವಾದಗಳು ನಡೆದಿವೆ ಆದರೆ ಆ ಹೋರಾಟಗಳ ಯಾವುದೇ ವಾಸ್ತವಿಕ ಹೇಳಿಕೆಯು ದಾಖಲೆಗಳ ಕೊರತೆಯಿಂದ ಕಷ್ಟಕರವೆಂದು ತೋರುತ್ತದೆ. ಆದರೆ ಈ ಅಸಮರ್ಪಕ ದಾಖಲೆಗಳಿಂದಲೂ, ಮುಷ್ಕರಗಳ ಇನ್ನೂ ಕೆಲವು ಹನ–ಹನಿಯಾದ ಸಂಗತಿಗಳನ್ನು ಸಂಗ್ರಹಿಸಬಹುದು.

ಮದ್ರಾಸಿನ ಬಿನ್ನಿ & ಕಂ ಹೀಗೆಂದು ವರದಿ ಮಾಡಿತ್ತು: "ನಾವು ಅಂತರಗಳಲ್ಲಿ ಸಂಭವಿಸುತ್ತಿರುವ ಅನೇಕ ಮುಷ್ಕರಗಳನ್ನು ಅನುಭವಿಸಿದ್ದೇವೆ., ಕಾರ್ಖಾನೆಯ ಗಾತ್ರ ಮತ್ತು ಸ್ವರೂಪದ ಪ್ರಕಾರ ನಮಗೆ 300 ರಿಂದ 3,000 ರೂಪಾಯಿಗಳವರೆಗೆ ನಷ್ಟವಾಗುತ್ತದೆ." ಮದ್ರಾಸ್‌ನ ಮತ್ತೊಂದು ಕೈಗಾರಿಕೆ, ಹಾರ್ವೆ & ಕಂ.ಹೇಳಿತು : "ಸಾಂದರ್ಭಿಕ ಘರ್ಷಣೆ ಇದೆ. ಆದರೆ ಮುಷ್ಕರ ಹೆಸರಿನಿಂದ ಗುರುತಿಸಬಹುದಾಗಿದ್ದು ಯಾವುದೂ ಇಲ್ಲ". ನಾಗ್ಪುರ ಎಂಪ್ರೆಸ ಮಿಲ್ಸ್‌ನ ವ್ಯವಸ್ಥಾಪಕ ನಿರ್ದೇಶಕರ ಹೇಳಿಕೆ ಪ್ರಕಾರ : "ದಂಡ ವಿಧಿಸಿದ್ದರಿಂದ ಅಥವಾ ವೇತನವನ್ನು ಕಡಿಮೆಗೊಳಿಸಿದ್ದರಿಂದ, ಉತ್ತರ ವಿಭಾಗದಲ್ಲಿ ಸಾಂದರ್ಭಿಕವಾಗಿ ಒಂದು ಅಥವಾ ಎರಡು ದಿನಗಳವರೆಗೆ ಕೆಲಸ ನಿಲ್ಲಿಸಲಾಗಿದೆ."

ಆರಂಭಿಕ ಸಂಘಟನೆಗಳು

1895 ಕ್ಕಿಂತ ಮೊದಲು, ಭಾರತದ ಕಾರ್ಮಿಕರು ಸ್ವಲ್ಪವೇ ವರ್ಗ ಪ್ರಜ್ಞೆಯನ್ನು ಬೆಳೆಸಿಕೊಂಡರು ಮತ್ತು ತಮ್ಮನ್ನು ಸಂಘಟಿಸಿಕೊಳ್ಳಲು ಏನನ್ನೂ ಮಾಡಲಿಲ್ಲ. ಆದಾಗ್ಯೂ ಸಂಭವಿಸಿದ ಸಣ್ಣ ಮುಷ್ಕರಗಳು ಕಾರ್ಮಿಕರಿಗೆ ಯಾವುದೇ ಸಂಘಗಳಿಲ್ಲದಿದ್ದರೂ ಸಹ ಒಗ್ಗಟ್ಟಿನ ಶಕ್ತಿಯನ್ನು ಕಲಿಸಿದವು.

ಈ ಅವಧಿಯಲ್ಲಿ ಕಾಣಿಸಿಕೊಂಡ ಸಂಘಗಳು ಪಾಶ್ಚಿಮಾತ್ಯ ದೇಶಗಳಲ್ಲಿದ್ದ ಸಂಘಗಳನ್ನು ಹೋಲುತ್ತಿರಲಿಲ್ಲ. 1897 ರಲ್ಲಿ, 'ಅಮಾಲ್ಗಮೇಟೆಡ್ ಸೊಸೈಟಿ ಆಫ್ ರೈಲ್ವೆ ಸರ್ವೆಂಟ್ಸ್ ಆಫ್ ಇಂಡಿಯಾ ಅಂಡ್ ಬರ್ಮಾ' ವನ್ನು ಆಯೋಜಿಸಲಾಯಿತು. ಇದು ಭಾರತದ ಕಂಪನಿಗಳ ಕಾಯ್ದೆ, 1882 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿತು. ವಾಸ್ತವವಾಗಿ, ರೈಲ್ವೆಯ ಯುರೋಪಿಯನ್ ಮತ್ತು ಅಂಗ್ಲೋ–ಇಂಡಿಯನ್ ನೌಕರರು ಮಾತ್ರ ಈ ಸಂಘಕ್ಕೆ ಸೇರಿದವರಾಗಿದ್ದು, ಅದು ಭಾರತದ ಕಾರ್ಮಿಕರನ್ನು ಪ್ರತಿನಿಧಿಸಲಿಲ್ಲ. ಇದಲ್ಲದೆ, ಅದರ ಪಾತ್ರವು ಮೂಲಭೂತವಾಗಿ ಪರಸ್ಪರ ಸಹಾಯ ಸಮುದಾಯದ್ದಾಗಿದ್ದು, ಈ ಸಂಘವು ಇಪ್ಪತ್ತನೇ ಶತಮಾನದ ಎರಡನೇ ದಶಕದಲ್ಲಿಯೂ ಅಸ್ತಿತ್ವದಲ್ಲಿದ್ದರೂ ಅದು ಯಾವುದೇ ಟ್ರೇಡ್ ಯೂನಿಯನ್ ಚಟುವಟಿಕೆಯನ್ನು ನಡೆಸಲಿಲ್ಲ, ಆದ್ದರಿಂದ ಈ ಸಂಘವು ಕಾರ್ಮಿಕ ಸಂಘಗಳ ವರ್ಗಕ್ಕೆ ಸೇರುವದಿಲ್ಲ.

1908 ರಲ್ಲಿ ಫ್ಯಾಕ್ಟರಿ ಕಾರ್ಮಿಕ ಆಯೋಗವನ್ನು (ಮೊರಿಸನ್ ಕಮಿಷನ್) ನೇಮಕ ಮಾಡಿ ಅದರ ವಿಚಾರಣೆ ಪ್ರಾರಂಭವಾದಾಗ, ಬಾಂಬೆ ಮಿಲ್–ಹ್ಯಾಂಡ್ಸ್ ಅಸೋಸಿಯೇಷನ್ ಅಸ್ತಿತ್ವದಲ್ಲಿರಲಿಲ್ಲ. ಕಲ್ಕತ್ತಾದಲ್ಲಿ, ಎರಡು ವಿಭಿನ್ನ ಸಂಘಗಳನ್ನು ಉಲ್ಲೇಖಿಸಲಾಗಿದೆ, ಅವುಗಳಲ್ಲಿ ಒಂದನ್ನು ಕೆಲವೊಮ್ಮೆ ಮಹಮ್ಮದನ್ ಅಸೋಸಿಯೇಷನ್ ಎಂದು ಕರೆಯಲಾಗುತ್ತದೆ, ಇದು ಕೇವಲ ಗಿರಣಿ ಕೆಲಸಗಾರರಿಂದ ಕೂಡಿದೆ ಮತ್ತು 1895 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅದರ ವಕ್ತಾರರೊಬ್ಬರು ವರದಿ ಮಾಡಿದಹಾಗೆ "[ಇದು] ಗಿರಣಿಯ ಕೆಲಸವನ್ನು ಸಾಮಾನ್ಯವಾಗಿ ಜನಸಮೂಹದಲ್ಲಿ ಮತ್ತು ವಿಶೇಷವಾಗಿ ಮುಸಲ್ಮಾನರ ನಡುವೆ ಜನಪ್ರಿಯಗೊಳಿಸಲು ತನ್ನ ಹೆಚ್ಚಿನ ಪ್ರಯತ್ನವನ್ನು ಮಾಡುತ್ತಿದೆ. ... ಅವರು ಸದಸ್ಯರ ಪಟ್ಟಿಯನ್ನು ಇಟ್ಟುಕೊಂಡಿಲ್ಲ, ಆದರೆ ಅವರ ಸದಸ್ಯತ್ವವು ಸಾವಿರಾರು ಸಂಖ್ಯೆಯಲ್ಲಿದೆ. ಅವರಿಗೆ ಸ್ಥಿರವಾದ ಸಭೆ ಸೇರುವ ಸ್ಥಳ ಇರಲಿಲ್ಲ."

ಆದ್ದರಿಂದ ಈ ಸಂಘದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಯಾವುದೇ ತೊಂದರೆ ಇಲ್ಲ. ಮತ್ತೊಂದು ಕಾರ್ಮಿಕ ಸಂಘಟನೆ, ಇಂಡಿಯನ್ ಲೇಬರ್ ಯೂನಿಯನ್ ಬಹಳ ಮಹತ್ವಾಕಾಂಕ್ಷೆಯ ಹೆಸರಿನ ಹೊರತಾಗಿಯೂ, ನಿಜವಾದ ಅರ್ಥದಲ್ಲಿ ಟ್ರೇಡ್ ಯೂನಿಯನ್ ಆಗಿ ಕಾಣಿಸಿಕೊಂಡಿಲ್ಲ, ಅದರ 'ಅಧ್ಯಕ್ಷ' ಒಬ್ಬ 'ಸ್ಥಳೀಯ ನ್ಯಾಯವಾದಿ' ಕಾರ್ಮಿಕ ಪರಿಸ್ಥಿತಿಯ ಬಗ್ಗೆ ಅವರ ಜ್ಞಾನಕ್ಕಿಂತ ಹೆಚ್ಚಾಗಿ ಅವರ ನ್ಯಾಯ ಸಾಮರ್ಥ್ಯಗಳಿಂದಾಗಿ ಬಹುಶಃ ಹೆಚ್ಚು ಅಥವಾ ಕಡಿಮೆ ಸ್ವಯಂ–ನೇಮಕವಾದವರು. ಆಯೋಗದ ಕೆಲಸಕ್ಕೆ ಅವರ ಕೊಡುಗೆಯೆಂದರೆ ಐದು ನೇಕಾರರು ಮತ್ತು ಹತ್ತು ಸ್ಪಿನ್ನರ್‌ಗಳನ್ನು ಬಡ್ಜ್ ಬಡ್ಜ್ ಸೆಣಬಿನ ಗಿರಣಿಯಿಂದ ಹಾಜರಪಡಿಸಿದ್ದು ಮತ್ತು ಅವರು ತಾವೇ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದು. ಹತ್ತೊಂಬತ್ತನೇ ಶತಮಾನದ ಮುಕ್ತಾಯದ ವರ್ಷಗಳಲ್ಲಿ 'ಕಾರ್ಮಿಕ ಸಂಘಟನೆಗಳ' ಸ್ವರೂಪವನ್ನು ತೋರಿಸಲು ಈ ನಿದರ್ಶನಗಳು ಸಾಕು. ಈ ಪದದ ನೈಜ ಅರ್ಥದಲ್ಲಿ ಇನ್ನೂ ಬೆಳೆಯಬೇಕಿದ್ದ ಕಾರ್ಮಿಕ ಸಂಘಗಳಿಗಾಗಿ ಭಾರತದ ಕಾರ್ಮಿಕರು ಹುಡುಕಾಟದಲ್ಲಿದ್ದರು ಎಂದು ಹೇಳಬಹುದು.

ವಸಾಹತು ಶೋಷಣೆಯ ವಿಶಿಷ್ಟ ಲಕ್ಷಣಗಳು

ಬಂಡವಾಳಶಾಹಿ ಶೋಷಣೆಯ ವಿರುದ್ಧದ ಆರ್ಥಿಕ ಹೋರಾಟಗಳ ಮುನ್ನಡೆಗೆ ಅನುಗುಣವಾಗಿ ಶ್ರಮಜೀವಿಗಳ ವರ್ಗ–ಪ್ರಜ್ಞೆಯು ಏರುತ್ತದೆಂಬುದು ಸಾಮಾನ್ಯ ನಿಯಮ. ಆದರೆ ಒಂದು ವಸಾಹತು ಪ್ರದೇಶದಲ್ಲಿ, ಶೋಷಣೆಯ ಕೆಲವು ನಿರ್ದಿಷ್ಟ ಲಕ್ಷಣಗಳು ಕಾರ್ಮಿಕರ ಆರ್ಥಿಕ ಹೋರಾಟಗಳ ಬೆಳವಣಿಗೆಗೆ ಅಡ್ಡಿಯಾಗುತ್ತವೆ ಮತ್ತು ಇದರ ಪರಿಣಾಮವಾಗಿ ಅವರ ವರ್ಗ ರಾಜಕೀಯದ ಪ್ರಜ್ಞೆಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ.

ವಸಾಹತುಶಾಹಿ ಭಾರತದಲ್ಲಿ ಬಂಡವಾಳದ ಶೋಷಣೆಯ ಸಾಮಾನ್ಯ ಸ್ವರೂಪ, ಈ ನಿರ್ದಿಷ್ಟ ವೈಶಿಷ್ಟ್ಯಗಳಿಂದ ಮತ್ತಷ್ಟು ದಬ್ಬಾಳಿಕೆಗೆ ಕಾರಣವಾಯಿತು. ವಸಾಹತುಶಾಹಿ ಆಳ್ವಿಕೆಯೆಂದರೆ ಒರಟಾದ ರೂಪಗಳಲ್ಲಿ ಸಾಮ್ರಾಜ್ಯಶಾಹಿಯ ಮುಕ್ತ ಸರ್ವಾಧಿಕಾರ. ಆ ಮೂಲಕ ವಸಾಹತಿನಲ್ಲಿ ಕಾರ್ಮಿಕ ವರ್ಗದ ಮೇಲಿನ ದಬ್ಬಾಳಿಕೆಯು ಅಗಾಧವಾಗಿ ಬೆಳೆದು ಅತ್ಯಂತ ಕಠಿಣ ಮತ್ತು ದೈತ್ಯಾಕಾರದ ಪಾತ್ರವನ್ನು ವಹಿಸುತ್ತದೆ. ವಸಾಹತುಶಾಹಿ ಭಾರತದ ಸಂದರ್ಭದಲ್ಲಿ ದುಡಿಯುವ ವರ್ಗಗಳನ್ನು ಭಾರತದ ಇಡೀ ಜನಸಮುದಾಯದ ಒಂದು ವಿಭಾಗವಾಗಿ ರಾಷ್ಟ್ರೀಯ ದಬ್ಬಾಳಿಕೆ ಮಾತ್ರವಲ್ಲ, ಸಾಮಾಜಿಕ ದಬ್ಬಾಳಿಕೆಗೂ ಒಳಪಡಿಸಲಾಯಿತು, ಸ್ವತಃ ಬಂಡವಾಳಶಾಹಿ ಶೋಷಣೆ ಎಷ್ಟು ಬದಲಾಯಿತೆಂದರೆ ಕಾರ್ಮಿಕ ವರ್ಗದ ಮೇಲೆ ಅದರ ಹೊರೆ ಭಯಂಕರವಾಗಿ ಹೆಚ್ಚಾಯಿತು.

ಯಶಸ್ವಿ ಆರ್ಥಿಕ ಹೋರಾಟವು ಕಾರ್ಮಿಕ–ಶಕ್ತಿಯ ಮಾರಾಟದ ಪರಿಸ್ಥಿತಿ ಮತ್ತು ಬಂಡವಾಳಶಾಹಿ ಶೋಷಣೆಯ ಮಟ್ಟವನ್ನು ನಿರ್ಧರಿಸುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಇದಲ್ಲದೆ, ಈ ಹೋರಾಟವು ಸ್ಪರ್ಧೆಯಿಂದ ಪ್ರಚೋದಿಸಲ್ಪಟ್ಟ ಬಂಡವಾಳದ ಲಾಭಕ್ಕಾಗಿನ ಮಿತಿಯಿಲ್ಲದ ಅನ್ವೇಷಣೆಗೆ ತಡೆಯನ್ನು ಒಡ್ಡುತ್ತದೆ. ಸ್ವತಂತ್ರ ದೇಶಗಳಲ್ಲಿ, ಕೈಗಾರಿಕಾ ಕಾರ್ಮಿಕನು ತನ್ನ ಶ್ರಮ–ಶಕ್ತಿಯನ್ನು ಅದರ ಮೌಲ್ಯಕ್ಕೆ ಹೆಚ್ಚು ಅಥವಾ ಕಡಿಮೆ ಹತ್ತಿರದ ಬೆಲೆಗೆ ಅಥವಾ ಕನಿಷ್ಟ ಕೆಲಸಗಾರನಗೆ ದೈಹಿಕವಾಗಿ ಅಗತ್ಯವಿರುವ ಜೀವನಾಧಾರದ ಸಾಧನಗಳ ವೆಚ್ಚದ ಹತ್ತಿರದ ಬೆಲೆಗೆ ಮಾರಬಹುದು. ಆದರೆ ವಸಾಹತುಶಾಹಿ ಭಾರತದಲ್ಲಿ, ಒಂದೆಡೆ ಕಡಿಮೆ ಸಾಂಸ್ಕೃತಿಕ ಗುಣಮಟ್ಟ, ಪ್ರಾಥಮಿಕ ಶಿಕ್ಷಣದ ಕೊರತೆ, ಅದರ ಸಂಯೋಜನೆಯಲ್ಲಿನ ವೈವಿಧ್ಯತೆ ಮತ್ತು ಸಂಘಟಿತವಾಗುವಲ್ಲಿ ವಿಳಂಬವು ಕಾರ್ಮಿಕ–ವರ್ಗದ ಯಶಸ್ವಿ ಆರ್ಥಿಕ ಹೋರಾಟಕ್ಕೆ ಹೆಚ್ಚು ಅಡ್ಡಿಯುಂಟುಮಾಡಿತು, ಮತ್ತೊಂದೆಡೆ ಶೋಷಣೆಯ ತೀವ್ರತೆ ಎಷ್ಟು ಮಟ್ಟಕ್ಕೆ ಏರಿತೆಂದರೆ, ಕಾರ್ಮಿಕರ ಶ್ರಮಶಕ್ತಿಯನ್ನು ಅದರ ನೈಜ ಮೌಲ್ಯದ ಒಂದು ಭಾಗಕ್ಕೆ ಮಾರಾಟ ಮಾಡುವುದು ಸಾಮಾನ್ಯ ನಿಯಮವಾಯಿತು.

ವಸಾಹತುಶಾಹಿ ಆರ್ಥಿಕತೆಯ ಸಂಪೂರ್ಣ ರಚನೆಯು ಕಾರ್ಮಿಕ ವರ್ಗದ ಪರಿಸ್ಥಿತಿಯು ಹದಗೆಡಲು ಕಾರಣವಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರಾಬಲ್ಯವು ಭಾರತದ ಬಂಡವಾಳವನ್ನು ಅದು ಅತ್ಯಂತ ಅನಾಗರಿಕ ಶೋಷಣೆಯ ಸ್ವರೂಪವನ್ನು ಕಾಪಾಡಿಟ್ಟು ಕೊಂಡಿರಬೇಕಾದ ಸ್ಥಾನಕ್ಕೆ ದೂಡಿತು. ವಸಾಹತುಶಾಹಿ ಆಳ್ವಿಕೆಯ ಅಡಿಯಲ್ಲಿ ಇಡೀ ಪ್ರಭುತ್ವ ವ್ಯವಸ್ಥೆಯ ಬೆಂಬಲವನ್ನು ಅನುಭವಿಸುತ್ತಿದ್ದ ವಿದೇಶಿ ಗುತ್ತೇದಾರಿಗಳ ಎದುರು, ಸ್ಥಳೀಯ ಬಂಡವಾಳಶಾಹಿಗಳು ಸ್ಪರ್ಧಿಸಬೇಕಾದ ಅತ್ಯಂತ ಕಷ್ಟಕರ ಸ್ಥಿತಿಗೆ ಇಳಿಯುತ್ತಾರೆ. ಈ ಅಸಮತೋಲನವನ್ನು ಸರಿದೂಗಿಸಲು, ಸ್ಥಳೀಯ ಬೂರ್ಜ್ವಾಗಳು ಕಾರ್ಮಿಕ ವರ್ಗವನ್ನು ನಿರ್ಲಜ್ಜ ಮತ್ತು ಅನಾಗರೀಕ ಶೋಷಣೆಗೆ ಒಳಪಡಿಸುತ್ತಾರೆ.

ಭಾರತದಲ್ಲಿ ಕೆಲಸ ಮಾಡಿದ ಈ ಪ್ರಕ್ರಿಯೆಯು ಕಾರ್ಮಿಕ ವರ್ಗವನ್ನು ನೇರ ದೈಹಿಕ ಅಳಿವಿನ ಬೆದರಿಕೆಗೆ ಒಡ್ಡಿತು. ಆದ್ದರಿಂದ, ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟವು ವಸ್ತುನಿಷ್ಠವಾಗಿ ಭಾರತದ ಶ್ರಮಜೀವಿಗಳ ಪ್ರಾಥಮಿಕ ಕಾರ್ಯವಾಯಿತು, ಆದರೆ ಈ ಸಾಕ್ಷಾತ್ಕಾರವು ಅವರಿಗೆ ತಕ್ಷಣ ಬರಲಿಲ್ಲ. ಈ ರಾಜಕೀಯ ಪ್ರಜ್ಞೆ ಹೊಂದುವ ಮೊದಲು ಅವರು ಹಲವಾರು ಆರ್ಥಿಕ ಹೋರಾಟಗಳ ಮೂಲಕ ತುಲನಾತ್ಮಕವಾಗಿ ದೀರ್ಘಕಾಲದ ಹಾದಿಯಲ್ಲಿ ಸಾಗಬೇಕಾಯಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಅದರ ಸಂಕುಚಿತ ಸಾಮಾಜಿಕ ನೆಲೆ ಮತ್ತು ಅದರ ಆರಂಭಿಕ ವರ್ಷಗಳಲ್ಲಿನ ನಿರ್ಬಂಧಿತ ದೃಷ್ಟಿಕೋನದ ಕಾರಣ, ಹೊಸದಾಗಿ ಪ್ರಾರಂಭವಾದ ಈ ಐತಿಹಾಸಿಕ ಪ್ರಕ್ರಿಯೆಯ ಕುರಿತು ಯಾವುದೇ ಪ್ರಜ್ಞೆಯನ್ನು ಹೊಂದಿರಲಿಲ್ಲ. ●



ಜನವರಿ 18 : ರೈತ ಮಹಿಳೆಯರ ದಿನ

ಎಲ್ಲೆಲ್ಲೂ ಇದ್ದೂ. . . ಎಲ್ಲೂ ಕಾಣದವರು..

'ದೆಹಲಿಯ ಗಡಿಯಲ್ಲಿ ಸ್ವಾಭಿಮಾನಿ ಕೃಷಿಕ್ಷೇತ್ರದಲ್ಲಿ ದುಡಿಯುತ್ತಿರುವ ರೈತಕುಟುಂಬಗಳ ಮಹಿಳೆಯರು ಕೃಷಿ ಕ್ಷೇತ್ರದ ಉಳಿವಿಗಾಗಿ, ಸ್ವಾಭಿಮಾನಿ ಬದುಕಿಗಾಗಿ ಬಂದು ನಿಂತಿದ್ದಾರೆ. ಅಲ್ಲಿ ಅಸಹಾಯಕತೆ ಇಲ್ಲ, ಆಕ್ರೋಶವಿದೆ. ಸಾತ್ವಿಕ ಆಕ್ರೋಶ, ಬೆವರಿನ ಬೆಲೆ ಗೊತ್ತಿರುವ ಆಕ್ರೋಶ'ವದು. ಹಾಗಾಗಿ 'ಮಹಿಳೆಯರು ಯಾಕಿದ್ದಾರೆ ಅಲ್ಲಿ? ಅವರನ್ನು ಸಮಜಾಯಿಸಿ ವಾಪಸ್ ಕಳಿಸಿ' ಎನ್ನುವ ನಿಮ್ಮ ಮಾತಿನಲ್ಲಿ ಮನುವಿನ ಆಲೋಚನೆಗಳ ವಾಸನೆ ಬಡಿಯುತ್ತಿದೆ. ..ಯುವರ್ ಆನರ್..'

.. ಆದರೆ, ಈ ದೇಶದ ಬಹು ಸಂಖ್ಯಾತ ತಿನ್ನುವ ಅನ್ನದ ಮೂಲ ಗೊತ್ತಿರುವ ಜನ ಇದನ್ನು ಬೆಂಬಲಿಸುವುದಿಲ್ಲ. ಹಾಗೆಂದೇ ಸಂಯುಕ್ತ ಕಿಸಾನ್ ಮೋರ್ಚಾ ಜನವರಿ 18ನ್ನು ರೈತ ಮಹಿಳಾ ದಿನವೆಂದು ಘೋಷಿಸಿದೆ. ಇದನ್ನು ಬೆಂಬಲಿಸಿ ದೇಶದ ರಾಷ್ಟ್ರೀಯ ಆರು ಮಹಿಳಾ ಸಂಘಟನೆಗಳು ಕೃಷಿ ಮಸೂದೆಗಳನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳಲು ಒತ್ತಾಯಿಸಿ ಈ ದಿನವನ್ನು ರಾಷ್ಟ್ರೀಯ ಪ್ರತಿಭಟನಾ ದಿನವನ್ನಾಗಿ ಆಚರಿಸಲು ಕರೆ ನೀಡಿವೆ.

ಕೆ.ಎಸ್. ವಿಮಲ

ಮಹಿಳೆಯರೇಕೆ ಅಲ್ಲಿದ್ದಾರೆ? ಅವರನ್ನು ಕಳಿಸಿಬಿಡಿ. ಇದು ದೇಶದ ಸರ್ವೋಚ್ಚ ನ್ಯಾಯಾಲಯದ ಪ್ರಶ್ನೆ. ಕರಾಳ ಕೃಷಿ ಮಸೂದೆಯನ್ನು ಹಿಂತೆಗೆದುಕೊಳ್ಳಲು ನಡೆಯುತ್ತಿರುವ ರೈತ ಸ್ವಾಭಿಮಾನೀ ಹೋರಾಟದ ಕಣದಲ್ಲಿ ದೆಹಲಿಯ ಗಡಿಗಳಲ್ಲಿ ಚಳಿ ಮಳೆ ಸರಕಾರದ ದಬ್ಬಾಳಿಕೆ ಜಲಫಿರಂಗಿ, ಲಾಠಿಗಳಿಗೆ ಹೆದರದೆ ಕುಳಿತ ರೈತ ಸಮೂಹದಲ್ಲಿರುವ ರೈತ ಮಹಿಳೆಯರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಆಡಿದ ಮಾತಿದು.

ಹ್ಞಾಂ... ಕೇಳಬೇಕಾದ್ದೇ. ಯಾಕೆಂದರೆ ಮಹಿಳೆಯರು ಎಲ್ಲ ಕಡೆಯೂ ಗೋಚರರೂ ಹೌದು ಅಗೋಚರರೂ ಹೌದು. ಸಮಾಜ ಅವರನ್ನು ಮನುಷ್ಯರೆಂದೇ ಗುರುತಿಸದ ಮೇಲೆ ಅವರ ದುಡಿಮೆಯಲ್ಲಿ, ಕೃಷಿಯಲ್ಲಿ ಅವರನ್ನೆಂತು ಗುರುತಿಸೀತು? ಆದರೆ ಮಹಿಳೆಯರು ಇತಿಹಾಸ ರಚಿಸಿದವರು. ಇಂದೂ ರಚಿಸುತ್ತಿದ್ದಾರೆ, ಮುಂದೆಯೂ ರಚಿಸುತ್ತಾರೆ. ಯಾಕೆಂದರೆ ಮಹಿಳೆಯರು ಪಾಲ್ಗೊಳ್ಳದ ಯಾವ ಕ್ಷೇತ್ರವೂ ಇಲ್ಲ. ಕುರುಡಾದ ಸಮಾಜಕ್ಕೆ ಕಾಣದ ಸಂಗತಿಗಳವು. ಹಾಗೆಂದೇ ಸರ್ವೋಚ್ಚ ನ್ಯಾಯಾಲಯಕ್ಕೆ, ದೆಹಲಿಯ ಗಡಿಗಳಲ್ಲಿ 'ಯೇ ಹಮಾರಾ ಫರ್ಜ್ ಬನತಾ ಹೈ' (ಇದು ನಮ್ಮ ಕರ್ತವ್ಯ) ಎಂದು ಹೆಮ್ಮೆಯಿಂದ ಹೇಳುತ್ತ ಚಳಿ ಮಳೆ ಗಾಳಿಗಳಿಗೆ ಅಂಜದೇ ಕುಳಿತ ರೈತ ಮಹಿಳೆಯರು ಅಲ್ಲಿ ಅನಗತ್ಯ ಎನಿಸಿದೆ.

ಮರೆತ ಚರಿತ್ರೆ:

ನೆಲದ ಚರಿತ್ರೆ, ಕೃಷಿಯ ಕಥೆ, ನಾಗರಿಕತೆಯ ಬೆಳವಣಿಗೆಯಲ್ಲಿ ಕೇಳುವ ಪಿಸುದನಿಗೆ ಕಿವಿಗೊಟ್ಟು ಆಲಿಸಿದರೆ ಅಲ್ಲಿ ಕೇಳುವುದು ಹೆಣ್ದನಿ. ಕೃಷಿಯನ್ನು ಕಂಡುಹಿಡಿದವಳೇ ಮಹಿಳೆ. ನೆಂದ ನೆಲಕ್ಕೆ ಬಿದ್ದ ಬೀಜ ಮಣ್ಣಿನ ಸೊಗಡು ಹೀರಿ, ಫಲವಂತಿಕೆ ಪಡೆದು ಮೊಳೆತು ಚಿಗುರಾಗಿ ಹಸಿರಾಗಿ ಎದ್ದು ಮೇಲೆದ್ದು ಮತ್ತೆ ಹೂ ಕಾಯಿ ಹಣ್ಣು ಬೀಜಗಳಾಗುವ ಆವರ್ತನ ಪ್ರಕ್ರಿಯೆಗೆ ಬೆರಗುಗೊಂಡವಳು. ಕ್ರಮೇಣ ತಾನೇ ಅದರ ಭಾಗವಾಗಿರುವುದನ್ನು ಅನುಭವಿಸಿ ಪುಳಕಗೊಂಡವಳು. ಏಯ್...ಕ್ರೂರ ಸಮಾಜವೇ! ಭೂಮಿಯನ್ನು ಆಸ್ತಿ ಎಂದು ಪರಿಗಣಿಸುತ್ತ ಬೆಳೆಯನ್ನು ಸಂಪತ್ತೆಂದು ಭಾವಿಸಿದ ಮೇಲಲ್ಲವೇ ನೀವು ಹೆಣ್ಣಿನಿಂದ ಕೃಷಿಯ ಮೇಲಿನ ಅಧಿಕಾರ ಕಿತ್ತುಕೊಂಡಿದ್ದು. ಮರೆತಿರೇನು ಚರಿತ್ರೆಯನ್ನು?!

ಚರಿತ್ರೆಗೊಂದು ವರ್ತಮಾನದ ಬೆಳಕು:

ಆದರೆ ಸತ್ಯ ಮತ್ತು ವಾಸ್ತವ ಮರೆಯಗೊಡುವುದಿಲ್ಲ. ಅಂದಿನ ಚರಿತ್ರೆಗೆ ಇಂದಿನ ವರ್ತಮಾನ ಬೆಳಕು ಬೀರುತ್ತಿದೆ.

ದೆಹಲಿಯ ಗಡಿಗಳಲ್ಲಿ ರೈತ ಸೈನ್ಯ ಬೀಡುಬಿಟ್ಟಿದೆ. ಅದು ಕೃಷಿ ಸ್ವಾತಂತ್ರ್ಯಕ್ಕಾಗಿ, ಸ್ವಾಭಿಮಾನದ ವೈರಿಗಳ ವಿರುದ್ಧ ಸಮರ ಸಾರಿದೆ. ಸಮರದ ಪ್ರತಿ ಕಣವೂ, ಪ್ರತಿ ಕ್ಷಣವೂ ಸಂಘರ್ಷದ ಘೋಷಣೆಗಳಿವೆ, ಆತ್ಮಾಭಿಮಾನದ, ಭೂಮಿಯ ಘನತೆಯನ್ನು ಕಾಯುವ ಛಲವಿದೆ. ಆದರೆ ಅಷ್ಟೇ ಆತ್ಮಬಲವಿದೆ. ಸಂಘರ್ಷವೆಂದರೆ ಹಿಂಸೆಯಲ್ಲ. ಅರಾಜಕವೂ ಅಲ್ಲ. ದೇಶದ ಗಡಿ ಕಾಯುವ ಸೈನಿಕರೂ ಸೇರಿದಂತೆ ದೇಶದ ಎಲ್ಲರಿಗೆ ಅನ್ನ ನೀಡಿ ಕಾಪಾಡುವವರು ನಾವು ಎನ್ನುವ ಮನೋಬಲದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಹ್ಞಾಂ. . . ಸಾಮಾನ್ಯವಾಗಿ ರೈತರೆಂದರೆ ಕಣ್ಣಮುಂದೆ ಚಿತ್ರ ಸುಳಿಯುತ್ತದೆ ಮುಂಡಾಸು ಸುತ್ತಿದ, ನೇಗಿಲು ಹೊತ್ತ, ಹಿಂದೆಲ್ಲ ಎತ್ತುಗಳನ್ನು ಹಿಡಿದ, ಈಗ ಬದಲಾದ ಚಿತ್ರಣದಲ್ಲಿ ಟ್ರಾಕ್ಟರ್ ಓಡಿಸುವ ಪುರುಷ!. ಆದರೆ ಅದು ಅರ್ಧ ಸತ್ಯ. ಹೇಗೆ ಕುಟುಂಬವೆಂದರೆ, ಕುಟುಂಬದ ಯಜಮಾನಿಕೆ ಎಂದರೆ, ಕುಲವೆಂದರೆ ಪುರುಷರನ್ನೇ ಅರಸುವ ಪರಿಪಾಠವಿದೆಯೋ ಹಾಗೆಯೇ ಇಲ್ಲಿಯೂ. . ಸತ್ಯವೆಂದರೆ ಇಡೀ ವಿಶ್ವದಲ್ಲಿ ಸರಿ ಸುಮಾರು 43% ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಹಲವಾರು ಅಧ್ಯಯನಗಳು ತಿಳಿಸುತ್ತವೆ. ಭಾರತಕ್ಕೆ ಸಂಬಂಧಿಸಿದಂತೆ 85% ಗ್ರಾಮೀಣ ಮಹಿಳೆಯರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಭೂ ಒಡೆತನ ಕೇವಲ 13% ಮಾತ್ರ!!.

ದೆಹಲಿಯ ಹೋರಾಟದ ಕಣಕ್ಕೆ ಹತ್ತಾರು ಮಹಿಳೆಯರು ಟ್ರಾಕ್ಟರ್ ಓಡಿಸಿಕೊಂಡೇ ಬರುತ್ತಿರುವ ಹೆಮ್ಮೆ ಎನಿಸುವ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಓಡಾಡುತ್ತಿವೆ. ಅದು ಈ ಸಮಾಜಕ್ಕೆ 'ಮನೋಭಾವ ಬದಲಿಸಿಕೊಳ್ಳು.. ..ಏ ಸಮಾಜವೇ!' ಎನ್ನುತ್ತಿದೆ. ಅಂದ ಹಾಗೆ ಅದು ಎದುರಿಗೊಬ್ಬ ಪಟ ಹಿಡಿಯುವವರನ್ನು ನಿಲ್ಲಿಸಿಕೊಂಡು ನವಿಲಿಗೆ ಕಾಳು ತಿನ್ನಿಸುವಷ್ಟು ಸರಾಗವೂ ಅಲ್ಲ. ಅಲ್ಲೊಂದು ಸ್ಪಷ್ಟ ಸೂಚನೆ ಇದೆ. ತೊಟ್ಟಿಲು ಮಾತ್ರ ತೂಗೆಂದು ನೀವು ಹೇಳಬಹುದು. ಆದರೆ ಪ್ರಕೃತಿದತ್ತವಾದ ತಾಯಾಗುವ ಕೆಲಸದಷ್ಟೇ ಜವಾಬ್ದಾರಿಯಿಂದ ನಾನು ಕೃಷಿಯನ್ನೂ ನಿಭಾಯಿಸುತ್ತಿದ್ದೇನೆ. ನೀವದನ್ನು ಗುರುತಿಸಿಲ್ಲ. ಆದರೆ ಗುರುತಿಸಲೇಬೇಕೆಂಬ ಛಲ ಅದು.

ಭಾರತದ ಬಡವರಲ್ಲಿ 40% ಭೂಹೀನ ಕೃಷಿ ಕಾರ್ಮಿಕರು. 45% ಎರಡು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ಸಾಮಾನ್ಯ ರೈತರು. 7.5% ಗ್ರಾಮೀಣ ಕುಶಲಕರ್ಮಿಗಳು. ಮತ್ತು 'ಇತರರು' ಎಂದು ನಗರದ ಬಡವರೂ ಸೇರಿದಂತೆ – ಅರ್ಥಶಾಸ್ತ್ರಜ್ಞರು ಪರಿಗಣಿಸುವ ವಿಭಾಗ ಉಳಿದ 7.5%. ಇದರಲ್ಲಿ ಮೊದಲ 40% ಭೂಹೀನ ಕೃಷಿ ಚಟುವಟಿಕೆಗಾರರು ಬಹುತೇಕ ಮಹಿಳೆಯರು. ಅಲ್ಲದೇ 40%+45% = 85% ನಲ್ಲಿ ಬರುವ ಮೊದಲ ಕೆಟಗರಿ ಭೂ ಸಂಬಂಧೀ ಹಲವು ಸಮಸ್ಯೆಗಳನ್ನು ಎದುರಿಸುವ ವಿಭಾಗ. ಭಾರತದಲ್ಲಿ ಮಹಿಳೆಯರು ಬಹುತೇಕ ಭೂಹೀನರು. ಯಾಕೆಂದರೆ ಅವರ ಹೆಸರಿನಲ್ಲಿ ಜಮೀನು ಮನೆ ಆಸ್ತಿ ಪಾಸ್ತಿ ಇರುವುದೇ ಇಲ್ಲ. ಜೊತೆಗೆ ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಯ ಈ ದೇಶದಲ್ಲಿ 67% ಕೃಷಿ ಕೂಲಿಕಾರ ಮಹಿಳೆಯರು ದಲಿತರು. ಇದು ಈ ದೇಶದ ವಾಸ್ತವ ಮತ್ತು ಸತ್ಯ.

ಬಹುಸಂಖ್ಯಾತ ದಲಿತರಿಗೆ ಭೂ ಒಡೆತನವಿಲ್ಲ. ದಲಿತ ಮಹಿಳೆಯರ ಸ್ಥಿತಿ ಕೇಳುವುದೇ ಬೇಡ. ಇನ್ನು ಇತರ ವರ್ಗದ ಮಹಿಳೆಯರ ವಿಷಯದಲ್ಲಿಯೂ ಭೂಒಡೆತನದ ವಿಷಯ ಬಂದಾಗ ಅವರ ಸ್ಥಿತಿಯಲ್ಲಿಯೂ ಬಹಳ ವ್ಯತ್ಯಾಸವಿಲ್ಲ. ಭೂ ಒಡೆತನ ಸುಲಭ ಸಾಧ್ಯದ್ದಲ್ಲ.

ಹೀಗಿರುವಾಗ ಭಾರತದ ಸರ್ವೋಚ್ಚನ್ಯಾಯಾಲಯ ಕೇಳಬೇಕಿತ್ತು – 'ಭೂ ಒಡೆತನದ ಪಟ್ಟಿಯಲ್ಲಿ ಮಹಿಳೆಯರ ಹೆಸರೇಕೆ ಕಾಣುತ್ತಿಲ್ಲ. ಕೆಲಸಗಾರರಲ್ಲಿ ಬಹುತೇಕ ಮಹಿಳೆಯರಿದ್ದಾರೆ. ಆದರೆ ಅವರಿಗೇಕೆ ಸಮಾನ ಕೆಲಸಕ್ಕೆ ಸಮಾನವೇತನ ಸಿಗುತ್ತಿಲ್ಲ' ಎಂದು.

ಇಲ್ಲ. .. .ಸರ್ವೋಚ್ಚ ನ್ಯಾಯಾಲಯಕ್ಕೆ ದೆಹಲಿಯ ಗಡಗಡ ಚಳಿ, ಚಳಿಗಾಲದಲ್ಲಿ ಸುರಿದ ಮಳೆ, ಅದರಿಂದಾಗಿ 'ಕೋಮಲ ಕಾಯದ ಮಹಿಳೆಯರು' ತೊಂದರೆ ಅನುಭವಿಸುತ್ತಾರೆ ಎಂಬ ಕಕ್ಕುಲತೆ ಎಂದುಕೊಳ್ಳೋಣವೇನು? ಹಾಗಿದ್ದರೆ ನಿಜವಾದ ಅರ್ಥದಲ್ಲಿ ಸೂಚನೆ ಕೊಡಬಹುದಿತ್ತು ಆಳರಸರಿಗೆ. ಜೊತೆಗೇ. . . . ಈ ದೇಶದ ಪ್ರಭುತ್ವ ಕಾಶ್ಮೀರದಲ್ಲಿ ತಮ್ಮ ಮೇಲುಗೈ ಸಾಧಿಸಲು ತಿಂಗಳಾನುಗಟ್ಟಲೇ ಕರ್ಫ್ಯೂ ಹೇರಿ ನಾಗರಿಕ ಸೌಲಭ್ಯಗಳನ್ನೆಲ್ಲ ನಿರಾಕರಿಸಿದಾಗ ತೊಂದರೆಗೆ ಒಳಗಾದ ಗರ್ಭಿಣಿ, ಬಾಣಂತಿಯರು, ವಯೋವೃದ್ಧರು ಕಣ್ಣಿಗೆ ಬೀಳಬೇಕಿತ್ತು. ಸರ್ಕಾರಕ್ಕೆ ತಾಕೀತು ಮಾಡಬೇಕಿತ್ತು ತಕ್ಷಣ, ಇಂತಹ ಅಪ್ರಜಾಪ್ರಭುತ್ವ ರೀತಿಯ ಆಡಳಿತ ನಿಲ್ಲಿಸಿ ದೇಶದ ಸಂವಿಧಾನ ನೀಡಿದ ಮಾನವರ ಘನತೆಯ ಬದುಕಿನ ಹಕ್ಕನ್ನು ಉಲ್ಲಂಘಿಸಬೇಡಿರೆಂದು. ಸಂವಿಧಾನದಲ್ಲಿರುವ ಅಪರೂಪದ ಅನಿವಾರ್ಯದ ಸಂದರ್ಭದಲ್ಲಿ ಬಳಸಬೇಕಾದ ಕಲಮುಗಳ ದುರ್ಬಳಕೆ ಮಾಡದಿರುವಂತೆ ಹೇಳುವುದು ಅಗತ್ಯವಿತ್ತಲ್ಲವೇ? ನ್ಯಾಯಕ್ಕಾಗಿ ಮಾನವ ಹಕ್ಕುಗಳ ಸ್ಥಾಪನೆಗಾಗಿ ಸಲ್ಲಿಸಿದ ಅರ್ಜಿಗಳತ್ತ ಗಮನ ನೀಡದ ಸಂಗತಿಯೂ ಚರಿತ್ರೆಯೇ ಈಗ.

ಹಾಗೆಯೇ, ಯಾವುದೇ ಪೂರ್ವ ಸಿದ್ಧತೆಯೂ ಇಲ್ಲದೇ, ಪೂರ್ವ ಸೂಚನೆಗಳೂ ಇಲ್ಲದೇ, ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕನಿಷ್ಟ ಸುಳಿವಾದರೂ ನೀಡದೇ ಏಕಾಏಕಿ ಲಾಕ್ಡೌನ್ ಘೋಷಿಸಿ, ತವರಿನಲ್ಲಿ ಬೆವರಿಗೆ ಬೆಲೆ ಸಿಗದ ಕಾರಣ ಊರಿಂದೂರಿಗೆ ವಲಸೆ ಬಂದವರಿಗೆ ದಿಕ್ಕು ಕಾಣದ ಸ್ಥಿತಿ ಉಂಟಾಗಿ ತಂಡೋಪತಂಡವಾಗಿ ಜೀವದ ಭಯವನ್ನೂ ಲೆಕ್ಕಿಸದೇ 'ಸಾವಾದರೆ ನಾ ಹುಟ್ಟಿದ ನೆಲದಲ್ಲಿ, ನನ್ನ ಬಂಧು ಬಳಗಗಳ ಮಧ್ಯೆಯೇ ಆಗಲಿ' ಎಂದು ಕಾಲ್ನಡಿಗೆಯಲ್ಲಿಯೇ ಹೊರಟೇ ಬಿಟ್ಟ ಕೂಲಿ ಕಾರ್ಮಿಕರಲ್ಲಿ ಎಷ್ಟೊಂದು ಜನ ಮಹಿಳೆಯರಿದ್ದರಲ್ಲ. ಗರ್ಭಿಣಿಯರು, ದಾರಿಯಲ್ಲಿಯೇ ಹೆತ್ತು ಹಸುಗೂಸನ್ನೇ ಎದೆಗವಚಿ, ಹೆರಿಗೆಯ ರಕ್ತ ಹರಿಯುತ್ತಿರುವಾಗಲೇ ಮತ್ತೆ ನಡೆದವರು. . . .ಅಲ್ಲೆಲ್ಲೂ ಕಾಣದ ಕಕ್ಕುಲತೆ ಇಲ್ಲೇಕೆ.. ಯುವರ್ ಆನರ್. . ..ದೆಹಲಿಯ ಗಡಿಯಲ್ಲಿ ಸ್ವಾಭಿಮಾನಿ ಕೃಷಿಕ್ಷೇತ್ರದಲ್ಲಿ ದುಡಿಯುತ್ತಿರುವ ರೈತಕುಟುಂಬಗಳ ಮಹಿಳೆಯರು ಕೃಷಿ ಕ್ಷೇತ್ರದ ಉಳಿವಿಗಾಗಿ, ಸ್ವಾಭಿಮಾನಿ ಬದುಕಿಗಾಗಿ ಬಂದು ನಿಂತಿದ್ದಾರೆ. ಅಲ್ಲಿ ಅಸಹಾಯಕತೆ ಇಲ್ಲ, ಆಕ್ರೋಶವಿದೆ. ಸಾತ್ವಿಕ ಆಕ್ರೋಶ, ಬೆವರಿನ ಬೆಲೆ ಗೊತ್ತಿರುವ ಆಕ್ರೋಶವದು. ಹಾಗಾಗಿ 'ಮಹಿಳೆಯರು ಯಾಕಿದ್ದಾರೆ ಅಲ್ಲಿ? ಅವರನ್ನು ಸಮಜಾಯಿಸಿ ವಾಪಸ್ ಕಳಿಸಿ' ಎನ್ನುವ ನಿಮ್ಮ ಮಾತಿನಲ್ಲಿ ಮನುವಿನ ಆಲೋಚನೆಗಳ ವಾಸನೆ ಬಡಿಯುತ್ತಿದೆ.

ಆದರೆ, ಈ ದೇಶದ ಬಹು ಸಂಖ್ಯಾತ ತಿನ್ನುವ ಅನ್ನದ ಮೂಲ ಗೊತ್ತಿರುವ ಜನ ಇದನ್ನು ಬೆಂಬಲಿಸುವುದಿಲ್ಲ. ಹಾಗೆಂದೇ ಸಂಯುಕ್ತ ಕಿಸಾನ್ ಮೋರ್ಚಾ ಜನವರಿ 18ನ್ನು ರೈತ ಮಹಿಳಾ ದಿನವೆಂದು ಘೋಷಿಸಿದೆ. ಇದನ್ನು ಬೆಂಬಲಿಸಿ ದೇಶದ ರಾಷ್ಟ್ರೀಯ ಆರು ಮಹಿಳಾ ಸಂಘಟನೆಗಳು ಕೃಷಿ ಮಸೂದೆಗಳನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳಲು ಒತ್ತಾಯಿಸಿ ಈ ದಿನವನ್ನು ರಾಷ್ಟ್ರೀಯ ಪ್ರತಿಭಟನಾ ದಿನವನ್ನಾಗಿ ಆಚರಿಸಲು ಕರೆ ನೀಡಿವೆ. ಜೊತೆ ಜೊತೆಗೇ ಮಹಿಳೆಯರ ಆರೋಗ್ಯ, ಆಹಾರ, ದುಡಿಮೆಗಳ ಪ್ರಶ್ನೆಗಳನ್ನು ಎತ್ತಲು, ಮಹಿಳೆಯರನ್ನು ಆರ್ಥಿಕ ಸಂಕಷ್ಟದಿಂದ ರಕ್ಷಿಸಲು, ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಪಾರುಮಾಡಲು, ಸ್ವ-ಸಹಾಯ ಸಂಘಗಳ ಸಾಲ ಮನ್ನಾ ಬೇಡಿಕೆಗಳನ್ನು ಇಟ್ಟು ಪ್ರತಿಭಟನೆಯನ್ನು ನಡೆಸಲು ತೀರ್ಮಾನಿಸಿವೆ. ಈ ಆಕ್ರೋಶ ಗಡಿಯಲ್ಲಿ ಮಾತ್ರವಲ್ಲ ದೇಶದೆಲ್ಲೆಡೆ ಜನವರಿ 18 ರಂದು ರೈತ ಮಹಿಳೆಯರ ದಿನವಾಗಿ ಪ್ರಕಟಗೊಳ್ಳಲಿದೆ.

ನಮ್ಮದು ಸಾತ್ವಿಕ ಸಂಘರ್ಷ. ಆದರೆ ರಾಜಿರಹಿತ ಸಂಘರ್ಷವೆಂಬ ಸಂಯುಕ್ತ ಕಿಸಾನ್ ಮೋರ್ಚಾದ ಕರೆಯ ಜೊತೆಗೆ ಬಲಿಷ್ಟ ಮಹಿಳಾ ಚಳುವಳಿಯನ್ನು ಮುನ್ನಡೆಸುತ್ತಿರುವ ಆರು ಮಹಿಳಾ ಸಂಘಟನೆಗಳು ನಾವಿದ್ದೇವೆಂಬ ಬೆಂಬಲ ವ್ಯಕ್ತಪಡಿಸಿದೆ. ಇದು ಸುಮ್ಮನೆ ಕರೆಯಲ್ಲ. ಅನ್ನದಾತರನ್ನು ಅವಮಾನಿಸುವ, ಆಹಾರ ಸ್ವಾವಲಂಬನೆಯನ್ನು ಕಸಿದು ಅದಾನಿ ಅಂಬಾನಿಗಳ ಕೈಗೆ ಮುಫತ್ತಾಗಿ ಕೊಡುತ್ತಿರುವ ಅನ್ನದ್ರೋಹಿ ಕೆಲಸದ ವಿರುದ್ಧ ರಣಕಹಳೆಯಿದು.





ಅಂಜುಬುರುಕುತನ ಮತ್ತು ನಿರ್ದಯತೆಯನ್ನು ಮೇಳವಿಸಿಕೊಂಡಿರುವ ಮೋದಿ ಸರ್ಕಾರ



ಮೋದಿ ಸರ್ಕಾರಕ್ಕೆ, ಕೊರೊನ ಸಾಂಕ್ರಾಮಿಕವನ್ನು ಎದುರಿಸುವಲ್ಲಿ, ಯೂರೋಪಿನ ಸರ್ಕಾರಗಳ ರೀತಿಯಲ್ಲಿ, ವಿತ್ತೀಯ ಕೊರತೆಯ ಮಿತಿಯನ್ನು ದಾಟಿ ಜಾಗತಿಕ ಹಣಕಾಸು ಬಂಡವಾಳವನ್ನು ಎದುರಿಸುವ ಧೈರ್ಯವೂ ಇಲ್ಲ ಮತ್ತು ಆ ಕೆಲಸಕ್ಕೆ ಬೇಕಾಗುವ ಪ್ರೇರಣೆಯನ್ನು ಒದಗಿಸುವ ಜನ-ಪರ ಕಾಳಜಿಯೂ ಇಲ್ಲ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಎದುರಿಗೆ ಅಂಜುಬುರುಕುತನ, ದೇಶದ ದುಡಿಯುವ ಜನತೆಯ ಬಗ್ಗೆ ನಿರ್ದಯತೆ ಮತ್ತು ಮತದಾರರನ್ನು ಹಾಗೂ ಶಾಸಕರನ್ನು ಮರುಳುಗೊಳಿಸುವ ಸಿನಿಕತನ-ಇಂತಹ ಸಂಯೋಜನೆಯೇ ಮೋದಿ ಸರ್ಕಾರವನ್ನು ಬಹುಶಃ ಜಗತ್ತಿನ ಅತ್ಯಂತ ಉಗ್ರ-ಬಲ ಪಂಥೀಯ ಸರ್ಕಾರವನ್ನಾಗಿ ರೂಪುಗೊಳಿಸಿದೆ.

ಪ್ರೊ. ಪ್ರಭಾತ ಪಟ್ನಾಯಕ್

ಅನು: ಕೆ.ಎಂ. ನಾಗರಾಜ್

ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಎದುರಾಗಿ ಮೋದಿ ಸರ್ಕಾರಕ್ಕೆ ಇರುವಷ್ಟು ಅಂಜುಬುರುಕುತನ ಜಗತ್ತಿನಲ್ಲಿ ಬಹುಷಃ ಯಾರಿಗೂ ಇರಲಿಕ್ಕಿಲ್ಲ. ಅಂತೆಯೇ, ದೇಶದ ದುಡಿಯುವ ಜನರಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಜಗತ್ತಿನಲ್ಲೇ ಅಷ್ಟೊಂದು ಪಾಷಾಣ ಹೃದಯ ಹೊಂದಿದ ಸರ್ಕಾರ ಮತ್ತೊಂದು ಬಹುಷಃ ಇರಲಾರದು. ಇಕ್ಕೆಲಗಳಲ್ಲಿರುವ ಇವುಗಳನ್ನು ನೋಡಲು ಮಗ್ಗಲು ಮಗುಚಿದರೆ ಸಾಕು. ಕೊರೊನಾ ಸಾಂಕ್ರಾಮಿಕದ ಅವಧಿಯಲ್ಲಿ ಸರ್ಕಾರವು ತಳೆದಿದ್ದ ಆರ್ಥಿಕ ನಿಲುವಿನಲ್ಲಿ ಅದರ ಅಂಜುಬುರುಕುತನವನ್ನು ಮತ್ತು ಅದರ ಪಾಷಾಣ ಹೃದಯವನ್ನು ಸಲೀಸಾಗಿ ಗುರುತಿಸಬಹುದು.

ಕೊರೊನಾ ಸಾಂಕ್ರಾಮಿಕ ಸಂಬಂಧಿತ ಲಾಕ್‌ಡೌನ್ ಅವಧಿಯಲ್ಲಿ ಆದಾಯ ಮೂಲಗಳು ಬತ್ತಿ ಹೋಗಿದ್ದರಿಂದ, ಎಲ್ಲ ಮುಂದುವರಿದ ದೇಶಗಳ ಸರ್ಕಾರಗಳೂ ಆದಾಯ ಕಳೆದುಕೊಂಡ ತಮ್ಮ ಜನರಿಗೆ ಸಾಕಷ್ಟು ಪ್ರಮಾಣದ ಪರಿಹಾರ ಪ್ಯಾಕೇಜ್‌ಗಳನ್ನು ಒದಗಿಸಿದವು. ಡೊನಾಲ್ಡ್ ಟ್ರಂಪ್ ಅವರ ಅಮೆರಿಕ ಕೂಡ ಜಿಡಿಪಿಯ ಶೇ.10ರಷ್ಟು ಮೊತ್ತದ ಒಂದು ಪ್ಯಾಕೇಜನ್ನು ಒದಗಿಸಿತು. ಪ್ರತಿ ಕುಟುಂಬಕ್ಕೂ ಹಲವು ತಿಂಗಳ ಕಾಲ ನಗದು ವರ್ಗಾವಣೆ ಮಾಡುವ ಕ್ರಮವನ್ನು ಟ್ರಂಪ್ ಪ್ಯಾಕೇಜ್ ಒಳಗೊಂಡಿತ್ತು. ಭಾರತದಲ್ಲಿ, ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲ ಕುಟುಂಬಗಳಿಗೂ, ಪರಿಸ್ಥಿತಿ ಸುಧಾರಿಸುವವರೆಗೂ, ಪ್ರತಿ ಕುಟುಂಬಕ್ಕೂ ತಿಂಗಳಿಗೆ 7,000 ರೂ ನಗದು ವರ್ಗಾವಣೆ ಮಾಡುವಂತೆ ವಿರೋಧ ಪಕ್ಷಗಳು, ಅರ್ಥಶಾಸ್ತ್ರಜ್ಞರು ಮತ್ತು ನಾಗರಿಕ ಸಮಾಜ ಸಂಘಟನೆಗಳು ಒಕ್ಕೊರಲಿನಿಂದ ಒತ್ತಾಯಿಸಿದ್ದರೂ ಸಹ, ಸರಕಾರ ಸ್ಪಂದಿಸಲಿಲ್ಲ. ಗುರುತಿಸಿದ ಕೆಲವು ನಿರ್ದಿಷ್ಟ ಗುಂಪುಗಳಿಗೆ ಅಲ್ಪ ಮೊತ್ತದ ನೆರವಿನ ಭರವಸೆ ಮಾತ್ರ ನೀಡಲಾಗಿತ್ತು. ಅದೂ ಸಹ ಅವರಿಗೆ ತಲುಪಲಿಲ್ಲವೆಂದು ತೋರುತ್ತದೆ. ಕೊರೊನಾ ಅಪ್ಪಳಿಸುವ ಮೊದಲು ಕೆಲಸ ಮಾಡುತ್ತಿದ್ದವರ ಪೈಕಿ ಸುಮಾರು 25% ಮಂದಿ ಕೆಲಸ ಕಳೆದುಕೊಂಡರು. ಆದಾಯ ಕಳೆದುಕೊಂಡ ಈ ಮಂದಿ ನಿರೀಕ್ಷೆಯಿಂದ ಸರ್ಕಾರದತ್ತ ಮುಖ ಮಾಡಿದಾಗ, ಸರ್ಕಾರವು ಕೋಪಗೊಂಡ ಆಂಜನೇಯನಂತೆ ಮತ್ತೊಂದು ಕಡೆ ಮುಖ ತಿರುಗಿಸಿಕೊಂಡಿತು.

ಬಳಸದೆ ಸುಮ್ಮನೆ ಬಿದ್ದಿದ್ದ ಸಂಪನ್ಮೂಲಗಳ ಬಗ್ಗೆ ಯೋಚಿಸಿ. ಬೃಹತ್ ಪ್ರಮಾಣದ ನಿರುದ್ಯೋಗ ಮತ್ತು ಬಳಕೆಯಾಗದ ಸಾಮರ್ಥ್ಯ ಇವೆರಡೂ ಏಕ ಕಾಲದಲ್ಲಿ ಒಟ್ಟಿಗೇ ಇದ್ದವು. ಅವುಗಳನ್ನು ಬಳಸಿಕೊಳ್ಳಬಹುದಿತ್ತು. ಒಂದು ಸಮಯದಲ್ಲಿ ಆಹಾರ ಧಾನ್ಯಗಳ ದಾಸ್ತಾನು 100 ದಶಲಕ್ಷ ಟನ್ನುಗಳಿಗೂ ಹೆಚ್ಚಿಗೆ ಇತ್ತು ಮತ್ತು ಸಾಧಾರಣವಾಗಿ ಇಟ್ಟುಕೊಳ್ಳುವುದಕ್ಕಿಂತಲೂ ನಾಲ್ಕು ಪಟ್ಟು ಹೆಚ್ಚಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ವಿದೇಶಿ ವಿನಿಮಯದ ಸಂಗ್ರಹವೂ ಗಮನಾರ್ಹವಾಗಿ ಏರಿಕೆಯಾಗಿತ್ತು. ಬೃಹತ್ ಪ್ರಮಾಣದ ನಿರುದ್ಯೋಗ, ಆರ್ಥಿಕ ಸಂಕಟಗಳು ಮತ್ತು ಬಳಕೆಯಾಗದೆ ಸುಮ್ಮನೆ ಬಿದ್ದಿದ್ದ ಸಂಪನ್ಮೂಲಗಳು ಒಟ್ಟಿಗೆ ಇದ್ದಾಗ ಸರ್ಕಾರವು ಹೆಚ್ಚಿನ ಖರ್ಚು-ವೆಚ್ಚಗಳನ್ನು ಕೈಗೊಳ್ಳಬೇಕೆಂದು ಮುಖ್ಯಧಾರೆ ಅರ್ಥಶಾಸ್ತ್ರದ ಪ್ರಾಥಮಿಕ ಪಠ್ಯ ಪುಸ್ತಕವೂ ತಿಳಿಸುತ್ತದೆ. ಆದರೆ, ಮೋದಿ ಸರ್ಕಾರವು ಬಳಕೆಯಾಗದೆ ಸುಮ್ಮನೆ ಬಿದ್ದಿದ್ದ ಈ ಯಾವ ಸಂಪನ್ಮೂಲಗಳನ್ನೂ ಬಳಕೆ ಮಾಡಿಕೊಳ್ಳಲಿಲ್ಲ.

ಮಾರ್ಚ್ ತಿಂಗಳ ಕೊನೆಯಲ್ಲಿ 477 ಶತಕೋಟಿ ಡಾಲರ್ ಮೊತ್ತದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಡಿಸೆಂಬರ್ ಅಂತ್ಯದ ವೇಳೆಗೆ 580 ಶತಕೋಟಿ ಡಾಲರ್‌ಗಳಿಗೆ ಏರಿಕೆಯಾಗಲು ಕಾರಣವೆಂದರೆ, ಮುಂದುವರಿದ ದೇಶಗಳಲ್ಲಿ ಒದಗಿಸಿದ ಪರಿಹಾರ ಪ್ಯಾಕೇಜ್‌ಗಳ ಪ್ರಮಾಣದ ಅಗಾಧತೆ. ಪರಿಹಾರದ ಈ ಪ್ಯಾಕೇಜ್‌ಗಳು ಈ ದೇಶಗಳಲ್ಲಿ ವಿತ್ತೀಯ ಕೊರತೆಯ ಪ್ರಮಾಣವನ್ನು ಏರಿಸಿದವು. ಬಡ್ಡಿ ದರಗಳನ್ನು ಉದ್ದೇಶಪೂರ್ವಕವಾಗಿ ಕೆಳ ಮಟ್ಟದಲ್ಲಿ ಇಡಲಾಗಿದ್ದ ಪರಿಸ್ಥಿತಿಯಲ್ಲಿ, ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದ ವಿತ್ತೀಯ ಕೊರತೆಯನ್ನು ಈ ದೇಶಗಳು ಹೊಸ ಹಣವನ್ನು ಮುದ್ರಿಸುವ ಮೂಲಕ ನಿಭಾಯಿಸಿಕೊಂಡವು. ಈ ದೇಶಗಳಲ್ಲಿ ಹೆಚ್ಚಿಗೆ ಹಣವನ್ನು ವ್ಯವಸ್ಥೆಯ ಒಳಗೆ ತುಂಬಿದ ಪರಿಣಾಮವಾಗಿ ಹಣದ ಲಭ್ಯತೆ ಅಪಾರಗೊಂಡಿತು. ನಂತರ, ಸುಲಭವಾಗಿ ಕೈಗೆಟುಕುತ್ತಿದ್ದ ಈ ಹಣವನ್ನು ಲಾಭ ಪಡೆಯುವ ಉದ್ದೇಶದಿಂದ ಜಗತ್ತಿನಾದ್ಯಂತ ಹೂಡಿಕೆಯಾಗಿ ಹರಿಸಲಾಯಿತು.

ಭಾರತದಲ್ಲಿ ಬಡ್ಡಿದರಗಳು, ಸಾಮಾನ್ಯವಾಗಿ, ಮುಂದುವರಿದ ದೇಶಗಳಲ್ಲಿ ಇರುವ ದರಗಳಿಗಿಂತ ಹೆಚ್ಚಿನ ಮಟ್ಟದಲ್ಲಿರುವ ಕಾರಣದಿಂದ, ಭಾರತಕ್ಕೆ ಹಣಕಾಸಿನ(ಬಂಡವಾಳ) ಒಳಹರಿವು ಹೆಚ್ಚಿತು. ಒಳ ಹರಿದ ಈ ಬಂಡವಾಳವನ್ನು ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯ ಮೀಸಲಿಗೆ ಸೇರಿಸಿತು. ಈ ವಿದ್ಯಮಾನವು, ಅಮೇರಿಕಾ ಮತ್ತು ಇತರ ಮುಂದುವರಿದ ಬಂಡವಾಳಶಾಹಿ ದೇಶಗಳು ಜಗತ್ತಿನಾದ್ಯಂತ ಹಣದ ಲಭ್ಯತೆಯನ್ನು ಹೆಚ್ಚಿಸುತ್ತಿವೆಯೊ ಏನೋ ಎನ್ನುವಂತಿತ್ತು. ಒಳ ಹರಿದ ಈ ಬಂಡವಾಳವನ್ನು ಸರ್ಕಾರವು ತನ್ನ ಖರ್ಚು-ವೆಚ್ಚಗಳನ್ನು ಹಿಗ್ಗಿಸಿಕೊಳ್ಳಲು ಬಳಸಿಕೊಳ್ಳಬಹುದಿತ್ತು. ಬದಲಿಗೆ, ಅದನ್ನು ಸುಮ್ಮನೇ ವಿದೇಶಿ ವಿನಿಮಯದ ಮೀಸಲಿಗೆ ಸೇರಿಸಲಾಯಿತು.

ಒಳ ಹರಿದ ಈ ವಿದೇಶಿ ಬಂಡವಾಳವನ್ನು ಆಧರಿಸಿ, ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ವೃದ್ಧಿಸಿದ ದೇಶದ ಆದಾಯವನ್ನು ಆಮದುಗಳಿಗೆ ಬಳಸಿಕೊಂಡರೆ, ಒಂದೊಮ್ಮೆ ವಿದೇಶಿ ಹಣಕಾಸು(ಬಂಡವಾಳ)ಹಠಾತ್ತಾಗಿ ಹೊರ ಹರಿಯುವ ಪ್ರಸಂಗ ಉದ್ಭವಿಸಿದರೆ ದೇಶವು ಅಪಾಯಕ್ಕೆ ಸಿಲುಕುತ್ತದೆ ಎಂಬ ಕಾರಣದ ಮೇಲೆ ಸರ್ಕಾರದ ವಕ್ತಾರರು ಈ ಅಭಿಪ್ರಾಯವನ್ನು ವಿರೋಧಿಸುತ್ತಿದ್ದರು. ಆದರೆ, ವಿದೇಶಿ ಹಣಕಾಸು ಹಠಾತ್ತಾಗಿ ಹೊರ ಹರಿಯುತ್ತದೆ ಎಂಬ ಭಯದಲ್ಲಿ ಇಡೀ ಒಳಹರಿವನ್ನು ಮೀಸಲು ರೂಪದಲ್ಲಿ ಹಿಡಿದಿಟ್ಟುಕೊಳ್ಳಬಾರದು. ಏಕೆಂದರೆ, ಈ ಕ್ರಮವು ದೇಶವನ್ನು ವಿದೇಶಿ ಹಣಕಾಸಿಗೆ ಒಂದು ತಂಗುದಾಣವಾಗಿಸುತ್ತದೆ. ಮೇಲಾಗಿ, ಈ ವಿದೇಶಿ ಹಣವನ್ನು ಮೀಸಲು ರೂಪದಲ್ಲಿ ಇಟ್ಟುಕೊಳ್ಳಲು ತಗಲುವ ವೆಚ್ಚವೂ ದುಬಾರಿಯೇ. ಒಳ ಈ ಹರಿದ ವಿದೇಶಿ ಹಣದ ಮೇಲೆ ತೆರಬೇಕಾದ ಬಡ್ಡಿಯು, ಮೀಸಲು ರೂಪದಲ್ಲಿ ಅದು ಗಳಿಸುವ ಬಡ್ಡಿಗಿಂತ ಹೆಚ್ಚಾಗಿರುತ್ತದೆ. ವಾಸ್ತವವಾಗಿ, ಒಳ ಹರಿದ ಇಡೀ ವಿದೇಶಿ ಹಣವನ್ನು ಮೀಸಲು ರೂಪದಲ್ಲೇ ಇಟ್ಟುಕೊಳ್ಳುವ ಕ್ರಮವು, ತಾರ್ಕಿಕವಾಗಿ, ಠೇವಣಿಯಾದ ಇಡೀ ಹಣವನ್ನು (ನೂರಕ್ಕೆ ನೂರು ರೂಗಳನ್ನು) ಬ್ಯಾಂಕ್‌ಗಳು ನಗದು ರೂಪದಲ್ಲೇ ಇಟ್ಟುಕೊಂಡಂತಾಗುತ್ತದೆ. (ಸಾಲ ಕೊಡುವುದಕ್ಕಾಗಿಯೇ ಠೇವಣಿಗಳನ್ನು ಸ್ವೀಕರಿಸುವುದೇ ಬ್ಯಾಂಕ್‌ಗಳ ಉದ್ದೇಶ. ಆದ್ದರಿಂದ, ಕಡಿಮೆ ಬಡ್ಡಿಗೆ ಠೇವಣಿಯಾದ ಹಣವನ್ನು ಬ್ಯಾಂಕ್‌ಗಳು ಹೆಚ್ಚಿನ ಬಡ್ಡಿಯ ಮೇಲೆ ಸಾಲ ಕೊಟ್ಟು ಲಾಭ ಗಳಿಸುತ್ತವೆ. ಮತ್ತು, ಠೇವಣಿಗಳ ಸುರಕ್ಷತೆಯ ದೃಷ್ಟಿಯಿಂದ ನಿಯಮಗಳ ಪ್ರಕಾರ ಠೇವಣಿಗಳ ಒಂದು ಸಣ್ಣ ಭಾಗವನ್ನು ಮಾತ್ರ ನಗದು ರೂಪದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ). ಹಾಗಾಗಿ, ಒಳ ಹರಿದ ಇಡೀ ವಿದೇಶಿ ಹಣವನ್ನು ಮೀಸಲು ರೂಪದಲ್ಲೇ ಇಟ್ಟುಕೊಳ್ಳುವ ಕ್ರಮವು ಕತ್ತೆ ಮೈ ತೂರಿಸಿದಂತಾಗುತ್ತದೆ.

ಕಳೆದ ಕೆಲವು ತಿಂಗಳುಗಳಲ್ಲಿ ಒಳ ಹರಿದ ಅರ್ಧದಷ್ಟು ಹಣವನ್ನು ಮೀಸಲಿಗೆ ಸೇರಿಸಲಾಗಿದೆ ಮತ್ತು ಉಳಿದ ಅರ್ಧ ಭಾಗವನ್ನು ಹೆಚ್ಚಿನ ಆಮದುಗಳಿಗೆ ಬಳಸಲಾಗಿದೆ ಎಂದು ನಾವು ವಾದಕ್ಕಾಗಿ ಭಾವಿಸೋಣ. ಈ ಭಾವನೆಯ ಆಧಾರದ ಮೇಲೆ ಒಂದು ನಿದರ್ಶನಾತ್ಮಕ ಲೆಕ್ಕಾಚಾರವನ್ನು ಮಾಡೋಣ. 2020ರ ಮಾರ್ಚ್ ಅಂತ್ಯದಿಂದ ಡಿಸೆಂಬರ್ ಅಂತ್ಯದವರೆಗೆ 6.7 ಲಕ್ಷ ಕೋಟಿ ರೂ.ಗಳಿಗೆ ಸಮನಾದ ವಿದೇಶಿ ವಿನಿಮಯ ಸಂಗ್ರಹವಾಗಿದೆ. ಈ ಮೊತ್ತದಲ್ಲಿ, ಮೇಲಿನ ಉದಾಹರಣೆಯ ಪ್ರಕಾರ, ಆಮದು-ಜಿಡಿಪಿ ಅನುಪಾತವು 15% ಎಂದು ಪರಿಗಣಿಸಿ, 3.35 ಲಕ್ಷ ಕೋಟಿ ರೂ.ಗಳನ್ನು ದೊಡ್ಡ ದೊಡ್ಡ ಆಮದುಗಳಿಗೆ ಬಳಸಿಕೊಂಡು, ಜಿಡಿಪಿಯನ್ನು ಸುಮಾರು 22 ಲಕ್ಷ ಕೋಟಿ ರೂ ಗಳಷ್ಟು ಹೆಚ್ಚಿಸಬಹುದಿತ್ತು. ಅಂದರೆ, ವಿವಿಧ ರೀತಿಯಲ್ಲಿ ಅಧಿಕ ಬೇಡಿಕೆಯನ್ನು ಸೃಷ್ಟಿಸುವ ಮೂಲಕ, ಸರ್ಕಾರದ ಆದಾಯವನ್ನು ಎರಡು ಪಟ್ಟು ಹೆಚ್ಚಿಸಿಕೊಂಡು, ಸುಮಾರು ರೂ.11 ಲಕ್ಷ ಕೋಟಿಗಳಷ್ಟು ಅಧಿಕ ವೆಚ್ಚವನ್ನು ಸರ್ಕಾರವು ಕೈಗೊಳ್ಳಬಹುದಿತ್ತು, ಅದೂ ಕೂಡ ವಿದೇಶಿ ವಿನಿಮಯದ ಮೀಸಲಿಗೆ ಯಾವುದೇ ಧಕ್ಕೆ ತಗುಲಿಸದಂತೆ.

ಈ 11 ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜಿಡಿಪಿಯನ್ನು 22 ಲಕ್ಷ ಕೋಟಿ ರೂಗಳಷ್ಟು ಹೆಚ್ಚಿಸಿಕೊಂಡಿದ್ದರೆ, ಆಗ, ಸರ್ಕಾರಕ್ಕೆ (ಕೇಂದ್ರ ಮತ್ತು ರಾಜ್ಯಗಳಿಗೆ ಒಟ್ಟಾಗಿ) 3.3 ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ತೆರಿಗೆ ಸಂಗ್ರಹವಾಗುತ್ತದೆ, ತೆರಿಗೆ-ಜಿಡಿಪಿ ಅನುಪಾತವನ್ನು 15% ಎಂದು ಭಾವಿಸಿಕೊಂಡರೆ. ಈ ಪ್ರಮಾಣದ ಜಿಡಿಪಿಯನ್ನು ಹೆಚ್ಚಿಸಿಕೊಳ್ಳಲು, 7.7 ಲಕ್ಷ ಕೋಟಿ ರೂಗಳ ಮಟ್ಟದ ವಿತ್ತೀಯ ಕೊರತೆ ಬೀಳುತ್ತಿತ್ತು (ಅಂದರೆ, ಸರ್ಕಾರದ ಸುಮಾರು ರೂ.11 ಲಕ್ಷ ಕೋಟಿಗಳಷ್ಟು ಅಧಿಕ ವೆಚ್ಚದಲ್ಲಿ 3.3 ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ತೆರಿಗೆ ಸಂಗ್ರಹವನ್ನು ಕಳೆದರೆ, 7.7 ಲಕ್ಷ ಕೋಟಿ ರೂಗಳ ವಿತ್ತೀಯ ಕೊರತೆ ಉಳಿಯುತ್ತದೆ). ಇದು, 2019-20ರ ಜಿಡಿಪಿಯ 3.5% ಆಗುತ್ತದೆ. ಒಟ್ಟಾರೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಸುಮಾರು 7.5%ಗೆ ಏರಿಸುತ್ತಿತ್ತು (ಪರಿಹಾರ ವೆಚ್ಚವನ್ನು ವಾಸ್ತವವಾಗಿ ಕೈಗೊಂಡಿದ್ದರೆ ಕೂಡ ವಿತ್ತೀಯ ಕೊರತೆಯು 2020-21ರ ಜಿಡಿಪಿಯ 7.5% ಆಗುತ್ತಿತ್ತು).

ಈ ಅಂಕಿ-ಅಂಶಗಳು ಕೇವಲ ಉದಾಹರಣೆಗಳು. ಅವು ಬಿಗಿಯಾಗಿ ಮಾಡಿದ ಅಂದಾಜುಗಳು. ವಿತ್ತೀಯ ಕೊರತೆಯ ಗಾತ್ರವನ್ನು ಜಿಡಿಪಿಯ ಶೇ.12ಕ್ಕೆ ಏರಿಸಬಹುದು ಎಂದು ಅನೇಕರು ವಾದಿಸಿದ್ದಾರೆ. ನಿಖರ ಅಂಕಿ-ಅಂಶಗಳಿಗಿಂತ ಮುಖ್ಯವಾದ ವಿಷಯವೇನೆಂದರೆ, ವಿತ್ತೀಯ ಕೊರತೆಯು ಗಣನೀಯವಾಗಿ ಏರಿಕೆಯಾದರೂ ಸಹ, ನೊಂದ ಜನರಿಗೆ ಅಗತ್ಯ ಪರಿಹಾರ ಒದಗಿಸಲು ಸಾಕಷ್ಟು ಪ್ರಮಾಣದ ಪರಿಹಾರ ಕ್ರಮಗಳನ್ನು ಕೈಗೊಳ್ಳಬಹುದಿತ್ತು. ಮೋದಿ ಸರ್ಕಾರವು ಅದನ್ನು ನಿರ್ಲಕ್ಷಿಸಿದೆ. ಅದಕ್ಕಿಂತಲೂ ಮುಖ್ಯವಾಗಿ, ಕೇವಲ ನಾಲ್ಕು ಗಂಟೆಗಳ ಮುನ್ಸೂಚನೆಯನ್ನಷ್ಟೇ ಕೊಟ್ಟು ಘೋಷಣೆ ಮಾಡಿದ ಒಂದು ಘೋರ ಮತ್ತು ಸಂಪೂರ್ಣ ನಿಷ್ಪ್ರಯೋಜಕ ಲಾಕ್‌ಡೌನ್‌ನಿಂದಾಗಿ ಲಕ್ಷಾಂತರ ಮಂದಿ ದುಡಿಯುವ ಜನರು ಉದ್ಯೋಗ ಕಳೆದುಕೊಂಡರು. ಅವರಿಗೆ ಅಗತ್ಯವಿದ್ದ ನೆರವನ್ನು ಸುಲಭವಾಗಿ ಒದಗಿಸಬಹುದಿತ್ತು. ಅದನ್ನೂ ಗಮನಾರ್ಹ ಪ್ರಮಾಣದಲ್ಲಿ ಒದಗಿಸಲಿಲ್ಲ. ಅವರು ಉದ್ಯೋಗಹೀನರೂ ಆದರು, ಆದಾಯಹೀನರೂ ಆದರು.

ಈಗ ವಿಷಯವೆಂದರೆ: ಮೋದಿ ಸರ್ಕಾರವು ಏಕೆ ಹೀಗೆ ಮಾಡಿತು ಎಂಬುದು. ಜಗತ್ತಿನಲ್ಲಿ ಯಾರಿಗೂ ಇಲ್ಲದಷ್ಟು ಅಂಜುಬುರುಕುತನ ಮೋದಿ ಸರ್ಕಾರಕ್ಕೆ ಮಾತ್ರ ಇದೆ ಎಂಬುದು ಗೊತ್ತಾಗುವುದು ಇಲ್ಲಿಯೇ. ಮೋದಿ ಸರ್ಕಾರದ ಕ್ರಿಯೆಗಳ ಬಗ್ಗೆ ಸಾಕಷ್ಟು ಉದಾರವಾಗಿಯೇ ಹೇಳುವುದಾದರೆ, ವಿತ್ತೀಯ ಕೊರತೆಯನ್ನು ಹೆಚ್ಚಿಸಿದರೆ, ಅದನ್ನು ಎಳ್ಳಷ್ಟೂ ಇಷ್ಟಪಡದ ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳವು ಕೋಪಗೊಳ್ಳಬಹುದು ಎಂಬ ಹೆದರಿಕೆ ಮೋದಿ ಸರ್ಕಾರಕ್ಕೆ. ಅದನ್ನು ಸಂತೃಪ್ತಗೊಳಿಸಲಿಕ್ಕೇ ತಾನೇ ಎಫ್‌ಆರ್‌ಬಿಎಂ ಕಾಯ್ದೆಯು ಸರ್ಕಾರದ ವಿತ್ತೀಯ ಕೊರತೆಯ ಮಿತಿಯನ್ನು ಜಿಡಿಪಿಯ ಶೇ.3ರಷ್ಟು ಎಂದು ನಿಗದಿಪಡಿಸಿರುವುದು. ವಾಸ್ತವವಾಗಿ, ಅನೇಕ ಸರ್ಕಾರಗಳು, ಅದರಲ್ಲೂ ವಿಶೇಷವಾಗಿ ಯೂರೋಪಿನ ಅನೇಕ ಸರ್ಕಾರಗಳು ಈ ಮಿತಿಯನ್ನು ಎಗ್ಗಿಲ್ಲದೆ ದಾಟುವ ಕೆಲಸ ಮಾಡಿದ್ದವು; ಅದಕ್ಕೆ ಕೊರೊನಾ ಸಾಂಕ್ರಾಮಿಕದ ಸಮರ್ಥನೆಯನ್ನು ಕೊಟ್ಟವು. ಆದರೆ, ಮೋದಿ ಸರ್ಕಾರಕ್ಕೆ, ಯೂರೋಪಿನ ಸರ್ಕಾರಗಳ ರೀತಿಯಲ್ಲಿ, ವಿತ್ತೀಯ ಕೊರತೆಯ ಮಿತಿಯನ್ನು ದಾಟಿ ಜಾಗತಿಕ ಹಣಕಾಸು ಬಂಡವಾಳವನ್ನು ಎದುರಿಸುವ ಧೈರ್ಯವೂ ಇರಲಿಲ್ಲ ಮತ್ತು ಆ ಕೆಲಸಕ್ಕೆ ಬೇಕಾಗುವ ಪ್ರೇರಣೆಯನ್ನು ಒದಗಿಸುವ ಜನ-ಪರ ಕಾಳಜಿಯೂ ಇರಲಿಲ್ಲ. ಹಣಕಾಸು ಬಂಡವಾಳ ಮತ್ತು ಜನರ ನಡುವಿನ ವೈರುಧ್ಯವು ನವ-ಉದಾರವಾದದ ಇಡೀ ಯುಗದ ಗುಣ ಲಕ್ಷಣವಾಗಿದ್ದು, ಈ ವೈರುಧ್ಯವು ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಮುನ್ನೆಲೆಗೆ ಬಂದ ಸಮಯದಲ್ಲಿ ಮತ್ತು ಹಣಕಾಸು ಬಂಡವಾಳದ ನಿರ್ದೇಶನಗಳನ್ನು ಉಲ್ಲಂಘಿಸುವ ಸುವರ್ಣಾವಕಾಶ ದೊರೆತ ಸಂದರ್ಭದಲ್ಲೂ ಸಹ, ಕಣ್ಣು ರೆಪ್ಪೆಯನ್ನೂ ಮಿಟುಕಿಸದೆ, ಭಿನ್ನಮತದ ಕೊಂಚ ಗೊಣಗಾಟವೂ ಇಲ್ಲದೆ, ಮೋದಿ ಸರ್ಕಾರವು ಹಣಕಾಸು ಬಂಡವಾಳಕ್ಕೆ ಡೊಗ್ಗು ಸಲಾಮು ಹೊಡೆಯುವ ದಾರಿಯನ್ನೇ ಆಯ್ಕೆ ಮಾಡಿಕೊಂಡಿತು.

ದೇಶದ ದುಡಿಯುವ ಜನರ ಬಗ್ಗೆ ಮೋದಿ ಸರ್ಕಾರವು ಹೊಂದಿರುವ ನಿರ್ದಯತೆಯು ಅಲ್ಲಿಗೆ ಮುಗಿಯುವುದಿಲ್ಲ. ಯಾವುದೇ ಪ್ರಜಾಪ್ರಭುತ್ವದಲ್ಲಿ ಜನರು ಚುನಾವಣೆಯ ಸಂದರ್ಭದಲ್ಲಿ ಕಡೆಗಣಿಸುವ ಭಯ ಆಡಳಿತ ಪಕ್ಷಗಳಿಗೆ ಇದ್ದೇ ಇದೆ. ಹಾಗಾಗಿ, ಡೊನಾಲ್ಡ್ ಟ್ರಂಪ್ ಅವರ ಅಮೇರಿಕಾ ಸೇರಿದಂತೆ ಮುಂದುವರಿದ ದೇಶಗಳ ಸರ್ಕಾರಗಳು ಗಣನೀಯ ಪ್ರಮಾಣದ ಪರಿಹಾರ ಪ್ಯಾಕೇಜ್‌ಗಳನ್ನು ಒದಗಿಸಲು ಮುಂದೆ ಬಂದವು. ಅದರ ಅರ್ಥ ಅವರಿಗೆ ಜನರ ಬಗ್ಗೆ ಅಪಾರ ಪ್ರೀತಿ ಇತ್ತು ಎಂದಲ್ಲ. ಜನರ ಬಗ್ಗೆ ಕಾಳಜಿ ವಹಿಸುವಂತೆ ಪ್ರಜಾಸತ್ತೆಯ ಸಂಸ್ಥೆಗಳು ಈ ಸರ್ಕಾರಗಳನ್ನು ಒತ್ತಾಯಿಸಿದವು. ಆದರೆ, ಪ್ರಜಾಸತ್ತೆಯ ಸಂಸ್ಥೆಗಳ ಅಂತಹ ಒತ್ತಾಯಗಳಿಗೆ ಯಾವತ್ತೂ ಮಣಿಯದ ಮೋದಿ ಸರ್ಕಾರವು ಜನರಿಗೆ ಪರಿಹಾರ ಒದಗಿಸುವ ಆಸಕ್ತಿ ವಹಿಸಲಿಲ್ಲ.

ಆಟದಲ್ಲಿ ಹಿಂದುತ್ವದ ಇಸ್ಪೀಟೆಲೆಯನ್ನು ಸರಿಯಾದ ಸಮಯದಲ್ಲಿ ಎಸೆಯುವ ಮೂಲಕ ಮತ್ತು ಚುನಾವಣೆಯ ಮೊದಲೇ ಮತ್ತು ಚುನಾವಣೆಯ ನಂತರದಲ್ಲಿಯೂ ಹಣಬಲದ ಮೂಲಕ ವಿರೋಧ ಪಕ್ಷಗಳ ಸದಸ್ಯರನ್ನು ಸೆಳೆಯುವ ಮೂಲಕ ಅಧಿಕಾರ ಹಿಡಿಯುವ ಕಲೆಯನ್ನು ಬಿಜೆಪಿಯು ಕರಗತ ಮಾಡಿಕೊಂಡಿದೆ. ಅದರ ಸಿನಿಕತನ ಅಪರಿಮಿತ. ಕೋಮು ದ್ವೇಷ ಹರಡುವಲ್ಲಿ ಅದಕ್ಕೆ ಯಾವುದೇ ಅಳುಕೂ ಇಲ್ಲ, ಗೊಂದಲವೂ ಇಲ್ಲ; ಅದು ರಾಜಕೀಯವನ್ನು ಎಷ್ಟರ ಮಟ್ಟಿಗೆ ಒಂದು ಸರಕನ್ನಾಗಿ ಮಾಡಿದೆಯೆಂದರೆ, ಜನರು ಯಾವುದೇ ರಾಜಕೀಯ ಪಕ್ಷಕ್ಕೆ ಮತ ನೀಡಿರಲಿ, ಗೆದ್ದವರನ್ನು ಖರೀದಿಸಿ ತಾನೇ ಸರ್ಕಾರ ರಚಿಸುವುದಂತೂ ಖಚಿತವೇ.

ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಎದುರಿಗೆ ಅಂಜುಬುರುಕುತನ, ದೇಶದ ದುಡಿಯುವ ಜನತೆಯ ಬಗ್ಗೆ ನಿರ್ದಯತೆ ಮತ್ತು ಮತದಾರರನ್ನು ಹಾಗೂ ಶಾಸಕರನ್ನು ಮರುಳುಗೊಳಿಸುವ ಸಿನಿಕತನ-ಇಂತಹ ಸಂಯೋಜನೆಯೇ ಮೋದಿ ಸರ್ಕಾರವನ್ನು ಬಹುಶಃ ಜಗತ್ತಿನ ಅತ್ಯಂತ ಉಗ್ರ-ಬಲ ಪಂಥೀಯ ಸರ್ಕಾರವನ್ನಾಗಿ ರೂಪುಗೊಳಿಸಿದೆ.

ಹಲವು ಪ್ರಶ್ನೆಗಳನ್ನೆತ್ತಿರುವ ಸಮಿತಿ

ಪುಟ 8 ರಿಂದ

ಮತ್ತು ಸ್ವಾತಂತ್ರ್ಯ ಒದಗಿಸುವುದು ಈ ಕಾಯ್ದೆಗಳ ಆರ್ಥಿಕ ತರ್ಕ ಎಂದು ಅವರು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದ ಲೇಖನದಲ್ಲಿ ಹೇಳಿದ್ದರು. ಸರಕಾರ ವಿಚಲಿತಗೊಳ್ಳಬಾರದು, ವಿಪಕ್ಷಗಳಿಗೆ ತಪ್ಪು ಮಾರ್ಗದರ್ಶನವಾಗಿದೆ ಎಂಬುದು ಅವರ ಈ ಲೇಖನದ ಶೀರ್ಷಿಕೆಯಾಗಿತ್ತು.(ರೈತರು ಮಾರುವ ವೇಳೆಯಲ್ಲಿ ಸಾಯುತ್ತಾರೆ, ಉಳಿದೆಲ್ಲ ಜನತೆ ಖರೀದಿಸುವಾಗ ಸಾಯುತ್ತಾರೆ ಎಂಬ ಒಬ್ಬ ರೈತ ಕಾರ್ಯಕರ್ತರ ಉದ್ಗಾರದೊಂದಿಗೆ ಇದನ್ನು ಹೋಲಿಸಿ ನೋಡಿ)

ನವಂಬರ್‌ನಲ್ಲಿ ರೈತರ ಪ್ರತಿಭಟನೆಗಳು ಆರಂಭವಾದ ಮೇಲೂ ಅವರು "ಬೃಹತ್ ಪ್ರಮಾಣದಲ್ಲಿ ತಪ್ಪು ಮಾಹಿತಿ ಪಸರಿಸುವ ಪ್ರಚಾರ"ದಿಂದಾಗಿ ರೈತರು ಕೃಷಿಯನ್ನು ಕಾರ್ಪೊರೇಟ್‌ಗಳು ವಹಿಸಿಕೊಳ್ಳುತ್ತವೆ, ಕನಿಷ್ಟ ಬೆಂಬಲ ಬೆಲೆಗಳಿಗೆ ರಕ್ಷಣೆ ಹೋಗುತ್ತದೆ ಎಂದೆಲ್ಲ ತಪ್ಪಾಗಿ ಹೇಳುತ್ತಿದ್ದಾರೆ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಪ್ರತಿಭಟನೆಗಳು ತೀವ್ರವಾದ ನಂತರ ಮತ್ತೊಂದು ಸಂದರ್ಶನದಲ್ಲಿ ಸರಕಾರ ಈ ಕಾಯ್ದೆಗಳನ್ನು ಆರು ತಿಂಗಳು ಅಮಾನತಿನಲ್ಲಿಡಬೇಕು, ರೈತರಿಗೆ ಪರಿಹಾರ ಹೊಡಬೇಕು, ಆದರೆ ಈ ಕಾಯ್ದೆಗಳನ್ನು ರದ್ದು ಮಾಡಬಾರದು ಎಂದಿದ್ದರು.

ಇನ್ನೊಬ್ಬ ತಜ್ಞರಾದ **ಪ್ರಮೋದ್ ಕುಮಾರ್ ಜೋಷಿ** ಮಂಡಿ ವ್ಯವಸ್ಥೆಯನ್ನು ಬದಿಗೊತ್ತುವುದು ಮತ್ತು ಆವಶ್ಯಕ ಸರಕುಗಳ ಕಾಯ್ದೆಯನ್ನು ತಿದ್ದುಪಡಿ ಮಾಡುವುದು, ರೈತರಿಗೆ ಹೆಚ್ಚಿನ ಪ್ರತಿಫಲಗಳನ್ನು ಕೊಡುತ್ತದೆ, ಖಾಸಗಿ ಮಾರುಕಟ್ಟೆಗಳು ಈಗಾಗಲೇ ಬೆಳೆದಿರುವಲ್ಲಿ ವಿಭಿನ್ನ ಬೆಳೆಗಳಿಗೆ ಪ್ರೋತ್ಸಾಹ ಕೊಡುತ್ತದೆ, ಹಾಗೆ ಬೆಳೆಯದಿದ್ದಲ್ಲಿ ಇನ್ನು ಮುಂದೆ ಬೆಳೆಯಲು ಅನುಕೂಲ ಮಾಡಿಕೊಡುತ್ತದೆ ಎನ್ನುತ್ತ ಬೆಂಬಲಿಸಿದ್ದರು.



ಈ ಕಾಯ್ದೆಗಳು ಬೇಸಾಯವನ್ನು ಲಾಭದಾಯಕಗೊಳಿಸುತ್ತವೆ, ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆ ಕೊನೆಗೊಳ್ಳುತ್ತದೆ ಎಂಬ ರೈತರ ಭೀತಿ ಆಧಾರಹೀನ ಎಂದೂ ಅವರು ಹೇಳಿದ್ದಾರೆ.

ಅಷ್ಟೇ ಅಲ್ಲ, ರೈತರ ಬೇಡಿಕೆಗಳ ಕುರಿತ ಮಾತುಕತೆಗಳಲ್ಲಿ ಸರಕಾರ ಸಕಾರಾತ್ಮಕವಾಗಿ ವರ್ತಿಸುತ್ತಿದ್ದರೂ, ರೈತ ಪ್ರತಿನಿಧಿಗಳಿಂದಾಗಿ ಪರಿಹಾರ ಸಾಧ್ಯವಾಗಿಲ್ಲ, ಅವರು ತಮ್ಮ ಬೇಡಿಕೆಗಳನ್ನು ಬದಲಿಸುತ್ತಲೇ ಇದ್ದಾರೆ; ಈ ಕಾಯ್ದೆಗಳನ್ನು ರೂಪಿಸುವ ಮೊದಲು ಸಮಾಲೋಚನೆಗಳನ್ನು ನಡೆಸಿಲ್ಲ ಎಂಬುದೂ ಸರಿಯಲ್ಲ ಎಂದೆಲ್ಲ ಹೇಳಿರುವ 'ತಜ್ಞ'ರು ಇವರು!

"ಭಾರತ ಸಂಘವಾಗಿ ನಿಮಗೆ ಸಮಸ್ಯೆಯನ್ನು ಪರಿಹರಿಸಲು ಆಗಿಲ್ಲ...ನೀವು ಸಾಕಷ್ಟು ಸಮಾಲೋಚನೆಗಳನ್ನು ನಡೆಸದೆ ಒಂದು ಕಾನೂನು ಮಾಡಿದ್ದೀರಿ, ಅದರಿಂದಾಗಿ ಒಂದು ಮುಷ್ಕರ ಆಗಿದೆ, ಆದ್ದರಿಂದ ನೀವು ಈ ಮುಷ್ಕರವನ್ನು ಪರಿಹರಿಸಬೇಕು" ಎಂದು ಸ್ವತಃ ಸುಪ್ರಿಂಕೋರ್ಟ್ ಸರಕಾರವನ್ನು ಈ ವಿಚಾರಣೆಯ ವೇಳೆಯಲ್ಲಿ ತರಾಟೆಗೆ ತಗೊಂಡಿರುವ ಹಿನ್ನೆಲೆಯಲ್ಲಿ ಈ ತಜ್ಞರ ಮಾತುಗಳನ್ನು ಗಮನಿಸಬೇಕಾಗಿದೆ.

ರೈತರ ಬೇಡಿಕೆಗಳಲ್ಲಿ ಒಂದಾದ ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆಗೆ ಕಾನೂನಿನ ರಕ್ಷಣೆ ಕೊಡುವುದು ಸಾಧ್ಯವಾಗದು, ಜಗತ್ತಿನ ಎಲ್ಲೂ ಇಂತಹ ವ್ಯವಸ್ಥೆ ಇಲ್ಲ ಎಂದು ಇವರು ಇತ್ತೀಚೆಗೆ ಹೇಳಿರುವುದಾಗಿಯೂ ವರದಿಯಾಗಿದೆ. ಇದರಿಂದಾಗಿ ಕನಿಷ್ಟ ಬೆಂಬಲ ಬೆಲೆ ಸಿಗದವರು ಕೋರ್ಟಿಗೆ ಹೋಗುತ್ತಾರೆ, ಅಂತಹ ಬೆಲೆ ಕೊಡದಿರುವವರು ಶಿಕ್ಷೆಗೆ ಒಳಗಾಗುತ್ತಾರೆ ಎಂದೂ ಅವರು ಹೇಳಿದ್ದಾರೆ. ಹಾಗಿದ್ದರೆ ಈ ಕಾಯ್ದೆಗಳು ಬೇಸಾಯವನ್ನು ಲಾಭದಾಯಕಗೊಳಿಸುತ್ತವೆ, ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆ ಕೊನೆಗೊಳ್ಳುತ್ತದೆ ಎಂಬ ರೈತರ ಭೀತಿ ಆಧಾರಹೀನ ಎಂಬ ಅವರ ಮಾತಿನ ಅರ್ಥ ಏನು ಎಂಬ ಪ್ರಶ್ನೆ ಸಹಜವೇ.

ಈ ಸಮಿತಿಯಲ್ಲಿ ಇರುವ ಇಬ್ಬರು ರೈತ ಪ್ರತಿನಿಧಿಗಳೂ ಕೂಡ ಈ ಕೃಷಿ ಕಾಯ್ದೆಗಳನ್ನು ಬೆಂಬಲಿಸುವವರೇ!

ಅನಿಲ್ ಘನ್ವಟ್ ಅವರ ಶೇತ್ಕರಿ ಸಂಘಟನ ಅಕ್ಟೋಬರಿನಲ್ಲಿ ಈ ಕಾಯ್ದೆಗಳನ್ನು ಬೆಂಬಲಿಸಿ ಮತಪ್ರದರ್ಶನವನ್ನೂ ನಡೆಸಿತ್ತು. ರೈತರೊಂದಿಗೆ ಸಮಾಲೋಚನೆ ನಡೆಸಿ ಕೆಲವು ತಿದ್ದುಪಡಿಗಳನ್ನು ತರಬಹುದು, ಆದರೆ ಇವನ್ನು ರದ್ದು ಮಾಡುವ ಅಗತ್ಯವಿಲ್ಲ, ಇವು ರೈತರಿಗೆ ಹೊಸ ಅವಕಾಶಗಳನ್ನು ತೆರೆದಿವೆ ಎಂದು ಇವರು ಕಳೆದ ತಿಂಗಳು ಹೇಳಿದ್ದಾರೆ.



ಮೋದಿ ಸರಕಾರದ ಮಂತ್ರಿಗಳು ಹೇಳುವಂತೆ ಈ ಪ್ರತಿಭಟನೆಗಳು ಎರಡು ರಾಜ್ಯಗಳಲ್ಲಿ ಮಾತ್ರ ನಡೆಯುತ್ತಿವೆ ಎಂದು ಹೇಳುತ್ತಿರುವ ರೈತ ಮುಖಂಡರಿವರು. ಕಳೆದ ತಿಂಗಳು ಕೃಷಿ ಮಂತ್ರಿಗಳನ್ನು ಭೇಟಿ ಮಾಡಿದ ನಂತರ "40 ವರ್ಷಗಳಲ್ಲಿ ಮೊದಲ ಬಾರಿಗೆ ರೈತರಿಗೆ ಮುಕ್ತ ಮಾರುಕಟ್ಟೆಯಿಂದ ಪ್ರಯೋಜನ ಪಡೆಯುವ ಅವಕಾಶ ಸಿಕ್ಕಿದೆ" ಎಂದಿದ್ದರು.

ರಾಜ್ಯ ಸಭಾ ಸದಸ್ಯರೂ ಆಗಿದ್ದ ಈ ಸಮಿತಿಯ ಮತ್ತೊಬ್ಬ ರೈತ ಮುಖಂಡ **ಭುಪಿಂದರ್ ಸಿಂಗ್ ಮಾನ್** ದೇಶದ 400ಕ್ಕೂ ಹೆಚ್ಚು ರೈತ ಸಂಘಟನೆಗಳು ಈ ಕಾಯ್ದೆಗಳ ವಿರುದ್ಧ ಐಕ್ಯ ಹೋರಾಟಕ್ಕೆ ವೇದಿಕೆಯನ್ನು ರಚಿಸಿಕೊಂಡಾಗ ,ಅದಕ್ಕೆ ಪ್ರತಿಯಾಗಿ ಹರ್ಯಾಣ, ಮಹಾರಾಷ್ಟ್ರ, ಬಿಹಾರ, ತಮಿಳುನಾಡಿನ ಕೆಲವು ರೈತ ಗುಂಪುಗಳೊಂದಿಗೆ ಇನ್ನೊಂದು ಸಂಘಟನೆಯನ್ನು ರಚಿಸಿಕೊಂಡ ಈ ರೈತ ಮುಖಂಡ ಕೃಷಿಯನ್ನು ಸ್ಪರ್ಧಾತ್ಮಕಗೊಳಿಸಲು ಸುಧಾರಣೆಗಳು ಬೇಕು, ಆದರೆ ರೈತರಿಗೆ ರಕ್ಷಣೆಯ ಅಗತ್ಯವಿದೆ ಎಂದರೂ, ಕೆಲವು ರೈತ ಮುಖಂಡರೊಂದಿಗೆ ಕೃಷಿ ಮಂತ್ರಿಗಳನ್ನು ಭೇಟಿ ಮಾಡಿ ಈ ಕಾಯ್ದೆಗಳನ್ನು ಕೆಲವು ತಿದ್ದುಪಡಿಗಳೊಂದಿಗೆ ಜಾರಿಗೆ ತರಬೇಕು ಎಂದು ಆಗ್ರಹಿಸುವ ಮನವಿ ಪತ್ರವನ್ನು ಸಲ್ಲಿಸಿದ್ದರು.



2008ರಲ್ಲಿ ಇವರು ಮತ್ತು ಆಗ ಇದೇ ಶೇತ್ಕರಿ ಸಂಘಟನದ ಮುಖಂಡರಾಗಿದ್ದ ಶರದ್ ಜೋಷಿಯವರು ಕಾರ್ಪೊರೇಟ್‌ಗಳು ಪಂಜಾಬ್ ಮತ್ತು ಹರ್ಯಾಣದಿಂದ ಗೋದಿ ಖರೀದಿಸಬಾರದು ಎಂದು ನಿಷೇಧಿಸುವ ಆಗಿನ ಸರಕಾರದ ನಿರ್ಧಾರವನ್ನು ವಿರೋಧಿಸಿ ಮತಪ್ರದರ್ಶನ ನಡೆಸಿದ್ದರು!

ಈಗ ರೈತರಲ್ಲಿ ಮತ್ತು ಸಾರ್ವಜನಿಕರಲ್ಲಿ ಉಂಟಾಗಿರುವ ಭಾವನೆಯಿಂದಾಗಿ ಈ ಸಮಿತಿಯಲ್ಲಿ ತಾನು ಇರುವುದಿಲ್ಲ, ತನ್ನ ರೈತರು ಮತ್ತು ಪಂಜಾಬಿನೊಂದಿಗೆ ಇರ ಬಯಸುವುದಾಗಿ ಅವರು ಹೇಳಿದ್ದಾರೆಂದು ಈಗ ವರದಿಯಾಗಿದೆ.

ಅದೇನೇ ಇರಲಿ, ಒಟ್ಟಿನಲ್ಲಿ, ಸಂಯುಕ್ತ ಕಿಸಾನ್ ಮೋರ್ಚಾ ಟಿಪ್ಪಣಿ ಮಾಡಿರುವಂತೆ, ಈ ಮೊದಲು ಸರಕಾರವೇ ಇಂತಹ ಸಮಿತಿಯ ರಚನೆಯ ಪ್ರಸ್ತಾಪ ಇಟ್ಟಾಗ ಅದನ್ನು ವಿರೋಧಿಸುತ್ತ ರೈತ ಸಂಘಟನೆಗಳು ವ್ಯಕ್ತಪಡಿಸಿದ್ದ ಸಂದೇಹ ಈ ಸಮಿತಿಯ ರಚನೆಯಲ್ಲಿ ನಿಜವಾಗಿದೆ.

ವಿಶ್ವಾಸಾರ್ಹತೆ–ಗೌರವಾರ್ಹತೆಯ ಪ್ರಶ್ನೆ

ದೇಶದ ಹಿತದೃಷ್ಟಿಯಿಂದ ಸುಪ್ರಿಂ ಕೋರ್ಟ್‌ಗೆ ಒಂದು ರಾಜಕೀಯ ಧೋರಣೆಯ ವಿಷಯದಲ್ಲಿ ಮಧ್ಯಪ್ರವೇಶಿಸಲೇ ಬೇಕು ಎಂದು ಅನಿಸಿದ್ದರೆ ಅದು ನೇಮಿಸುವ ಸಮಿತಿಯ ತಟಸ್ಥತೆ, ಪರಿಣತಿ ಮತ್ತು ವಿಶ್ವಾಸಾರ್ಹತೆ ಮತ್ತು ಗೌರವಾರ್ಹತೆಯ ಬಗ್ಗೆ 'ವಿಶೇಷ ಗಮನ ಕೊಡಬೇಕಾಗಿತ್ತು. ಎಂದು ಬಹಳಷ್ಟು ಮಂದಿ ಅಭಿಪ್ರಾಯ ಪಡುತ್ತಿದ್ದಾರೆ.

ರೈತರಲ್ಲಿ ಮಾತ್ರವಲ್ಲ, ಪ್ರಜಾಪ್ರಭುತ್ವವಾದಿಗಳಲ್ಲೂ ಈ ಹೆಸರುಗಳು ಹಲವು ಪ್ರಶ್ನೆಗಳನ್ನು ಎತ್ತಿವೆ.

* ಪ್ರತಿಭಟನಾಕಾರರ ನಿಲುವನ್ನು ವಿರೋಧಿಸುವವರೇ ನೇಮಕಗೊಂಡಿರುವುದು ಕೇವಲ ಕಾಕತಾಳೀಯವೇ?
* ಪ್ರತಿಭಟಿಸುತ್ತಿರುವ ರೈತರ ಆತಂಕಗಳ ಬಗ್ಗೆ ತುಸುವಾದರೂ ಸಹಾನುಭೂತಿ ಇರುವ ಒಬ್ಬರಾದರೂ ಪರಿಣಿತರ ಹೆಸರು ಸಿಗಲಿಲ್ಲವೇ?
* ಸುಪ್ರಿಂ ಕೋರ್ಟಿಗೆ ಈ ಹೆಸರುಗಳನ್ನು ಸೂಚಿಸಿದವರು ಯಾರು?
* ಇವು ಈ ಕೆಲಸಕ್ಕೆ ಅರ್ಹ ಹೆಸರುಗಳೇ ಎಂದು ಸುಪ್ರಿಂ ಕೋರ್ಟ್ ಸ್ವತಂತ್ರವಾಗಿ ಪರಿಶೀಲನೆ ನಡೆಸಿದೆಯೇ?



ವ್ಯಂಗ್ಯಚಿತ್ರ: ಪಂಜು ಗಂಗೊಳ್ಳಿ/ ಫೇಸ್ ಬುಕ್

ಕೇಂದ್ರ ಸರಕಾರ ಏನನ್ನು ಬಯಸುತ್ತಿದೆಯೋ ಅದೇ ಆಗುತ್ತಿದೆ ಎಂದು ಈ ಬಗ್ಗೆ ಈ ಪ್ರತಿಕ್ರಿಯಿಸುತ್ತ ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಹೇಳಿದ್ದಾರೆ, ಕೋರ್ಟಿಗೆ ಹೋಗಿ ಇಂತಹ ಸಮಿತಿಯನ್ನು ರಚಿಸಲಾಗುವುದು ಎಂದು ಸರಕಾರಕ್ಕೆ ಗೊತ್ತಿತ್ತು ಎಂದು ಅವರು ಹೇಳುತ್ತಾರೆ.

ರೈತರ ಸಮಸ್ಯೆಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ಸ್ವಾಮಿನಾಥನ್ ಆಯೋಗದ ಬಹುಮುಖ್ಯ ಕೆಲಸ ಮತ್ತು ಶಿಫಾರಸುಗಳೊಂದಿಗೆ ಇವರಿಗೆ ಏನಾದರೂ ಸಂಬಂಧವಿದೆಯೇ? ರೈತರ ಆತಂಕಗಳಿಗೆ ಸ್ಪಂದಿಸುವ ಯಾವುದಾದರೂ ಪರಿಣತಿ ಇವರಲ್ಲಿದೆಯೇ? ರೈತರ ಆತ್ಮಹತ್ಯೆಗಳಿಗೆ ಕಾರಣವಾದ ಸುಧಾರಣೆಗಳ ನಕಾರಾತ್ಮಕ ಆಯಾಮಗಳ ಬಗ್ಗೆ ಇವರು ತುಸುವಾದರೂ ಅಧ್ಯಯನ ಮಾಡಿದ್ದಾರೆಯೆ? ಎಂದು ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಪ್ರಶ್ನಿಸುತ್ತಾರೆ (ಎನ್‌ಡಿಟಿವಿ, ಜನವರಿ 13)

"ಎಲ್ಲ ರೈತ ಸಂಘಗಳ ಪ್ರತಿನಿಧಿಗಳು, ಅವರು ಪ್ರತಿಭಟನೆಗಳನ್ನು ನಡೆಸುತ್ತಿರಲಿ ಅಥವ ಇಲ್ಲದಿರಲಿ, ಮತ್ತು ಅವರು ಈ ಕಾಯ್ದೆಗಳನ್ನು ಬೆಂಬಲಿಸುತ್ತಿರಲಿ ಅಥವ ವಿರೋಧಿಸುತ್ತಿರಲಿ, ಈ ಸಮಿತಿಯ ಕಲಾಪಗಳಲ್ಲಿ ಭಾಗವಹಿಸುತ್ತಾರೆ ಮತ್ತು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾರೆ" ಎಂದು ಈ ಮೇಲೆ ಹೇಳಿದಂತೆ ಸುಪ್ರಿಂ ಕೋರ್ಟ್ ಆದೇಶ ವಿಧಿಸಿದೆ.

ಆದರೆ ತಟಸ್ಥತೆಯ ಸೋಗು ಕೂಡ ಇಲ್ಲದ ಇಂತಹ ಸಮಿತಿಯ ಎದುರು ರೈತರು ಯಾಕಾದರೂ ಹೋದಾರು? ಈ ಆದೇಶದ ಪರಿಪಾಲನೆ ಸಾಧ್ಯವೇ?

ಇದೀಗ ಮಿಲಿಯನ್ ಡಾಲರ್ ಪ್ರಶ್ನೆ.



ಆಪ್ಷನ್ ಇದ್ದಿರುವಾಗ ನಾಲ್ಕು ವಿಶ್ವಾಸಾರ್ಹರು ಇತ್ಯಾದಿ ಯೋಚಿಸದೆ ನೇರವಾಗಿ ಅಂಬಾನಿ ಮತ್ತು ಅದಾನಿಯವರ ಸಮಿತಿಯನ್ನೇ ಏಕೆ ಮಾಡಲಿಲ್ಲವೋ!

ವ್ಯಂಗ್ಯಚಿತ್ರ: ಶೇಖರ್ ಗುರೇರ

ಉಕ್ಕು ಪ್ರಾಧಿಕಾರದ ಶೇರುಗಳ ಮಾರಾಟ–ಅದೂ ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ

ಮೋದಿ ಸರಕಾರದ ನಾಚಿಕೆಗೇಡಿನ ನಡೆ–ಸಿಐಟಿಯು ಖಂಡನೆ

ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರಕಾರ ಮತ್ತೆ ಸಾರ್ವಜನಿಕ ವಲಯದ ಭಾರತ ಉಕ್ಕು ಪ್ರಾಧಿಕಾರ (ಸೇಯ್ಲ್)ದ 10 ಶೇ. ಶೇರುಗಳ ಮಾರಾಟಕ್ಕೆ ಹೊರಟಿದೆ. ಈಗಾಗಲೇ ಈ 'ಮಹಾರತ್ನ 'ಕಂಪನಿಯ 25% ದಷ್ಟು ಶೇರುಗಳನ್ನು ಮಾರಾಟ ಮಾಡಿಯಾಗಿದೆ. ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ.

ಈ ಬಾರಿಯ ವಿಶೇಷವೆಂದರೆ ಈ ಸಂಸ್ಥೆ ಹಣಕಾಸಿನ ದೃಷ್ಟಿಯಿಂದ ಕಷ್ಟಕರ ಸ್ಥಿತಿಯಲ್ಲಿರುವಾಗ, ಇದರಿಂದಾಗಿ ಅದರ ಶೇರು ಬೆಲೆ 74 ರೂ.ಗೆ ಇಳಿದಿರುವಾಗ ಈ ಮಾರಾಟವನ್ನು ಮಾಡಲಾಗುತ್ತಿದೆ. ಭಾರತ ಸರಕಾರದ ಖಾಸಗೀಕರಣ ಇಲಾಖೆ ಇದಕ್ಕೆ ಇಟ್ಟಿರುವ ಕನಿಷ್ಟ ಮಾರಾಟ ಬೆಲೆ ಅದಕ್ಕಿಂತಲೂ ಕಡಿಮೆ, ಅಂದರೆ 64 ರೂ. ಪ್ರತಿ ಶೇರಿಗೆ.

ಆದ್ದರಿಂದ ಇದು ರಾಷ್ಟ್ರೀಯ ಹಿತಾಸಕ್ತಿಗಳ ವಿರುದ್ಧ, ಖಾಸಗಿ ಕಾರ್ಪೊರೇಟ್‌ಗಳ ಪ್ರಯೋಜನಕ್ಕಾಗಿ ಅಮೂಲ್ಯ ರಾಷ್ಟ್ರೀಯ ಆಸ್ತಿಗಳನ್ನು ಹರಾಜಿಗಿಡುವ ನಾಚಿಕೆಗೇಡಿ ಕೃತ್ಯವಲ್ಲದೆ ಬೇರೇನೂ ಅಲ್ಲ ಎಂದು ಅದು ಹೇಳಿದೆ. ತನ್ನದೇ ಒಂದು ಮಹಾರತ್ನ ಕಂಪನಿಯನ್ನು ಬುಡಮೇಲು ಮಾಡುವ ಕೃತ್ಯಕ್ಕೆ ಈ ಸರಕಾರ ಇಳಿದಿದೆ,. ಇದು ಈ ಸಾರ್ವಜನಿಕ ವಲಯದ ಕಂಪನಿಯನ್ನು ಖಾಸಗೀಕರಣದತ್ತ ತಳ್ಳಿ, ಅತ್ಯಂತ ಅಗ್ಗ ಬೆಲೆಯಲ್ಲಿ ದೇಶೀ–ವಿದೇಶಿ ಕಾರ್ಪೊರೇಟ್‌ಗಳಿಗೆ ಕೊಡುವ ಹುನ್ನಾರವಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಹೇಳಿದೆ.

ದೇಶದ ಸಮಸ್ತ ಕಾರ್ಮಿಕ ಆಂದೋಲನ ಈ ರೀತಿ ಸರಕಾರ ಎರ್ರಾಬಿರ್ರಿ ಖಾಸಗೀಕರಣದ ಮೂಲಕ ಸಾರ್ವಜನಿಕ ವಲಯವನ್ನು ಬುಡಮೆಲು ಮಾಡುವುದನ್ನು, ಈ ಮೂಲಕ ಅಮೂಲ್ಯ ರಾಷ್ಟ್ರೀಯ ಆಸ್ತಿಗಳನ್ನು ಲೂಟಿ ಹೊಡೆಯಲು ದೇಶಿ–ವಿದೇಶಿ ಖಾಸಗಿ ಕುಳಗಳಿಗೆ ಅನುಕೂಲ ಮಾಡಿಕೊಡುತ್ತಿರುವುದನ್ನು ವಿರೋಧಿಸುತ್ತದೆ ಎಂದು ಅದು ಹೇಳಿದೆ.

ಮಾರುಕಟ್ಟೆ ಬೆಲೆಗಿಂತಲೂ ಕೆಳಗಿನ ಬೆಲೆಯಲ್ಲಿ ಸೇಯ್ಲ್‌ನ ಶೇರುಗಳ ಮಾರಾಟದ ನಿರ್ಧಾರ ಖಾಸಗೀಕರಣದ ಧಾವಂತದ ದಿಕ್ಕಿನಲ್ಲಿ ಇನ್ನೊಂದು ಹತಾಶ ಪ್ರಯತ್ನ. ಈ ವಿನಾಶಕಾರಿ ನಡೆಯನ್ನು ದುಡಿಯುವ ಜನಗಳು ಒಟ್ಟಾಗಿ ವಿರೋಧಿಸಬೇಕು ಎಂದಿರುವ ಸಿಐಟಿಯು, ಕಾರ್ಮಿಕ ಆಂದೋಲನ, ನಿರ್ದಿಷ್ಟವಾಗಿ ಉಕ್ಕು ಕಾರ್ಮಿಕರ ಆಂದೋಲನ ಸರಕಾರದ ಈ ನಿರ್ಧಾರದ ವಿರುದ್ಧ ತಮ್ಮ ಐಕ್ಯ ಪ್ರತಿಭಟನೆಯ, ಖಂಡನೆಯ ದನಿ ಎತ್ತಬೇಕು ಎಂದು ಕರೆ ನಿಡಿದೆ.

ಮೋದಿಯವರ ಅಡ್ಡಗೋಡೆಗಳನ್ನು ದಾಟಿದ ದೇಶಪ್ರೇಮಿ ಹೋರಾಟ........ ಪುಟ 16 ರಿಂದ

ಚೊಕ್ಕವಾದ ಮನೆಗಳನ್ನಾಗಿ ಪರಿವರ್ತಿಸಿಕೊಂಡು ಅವರ ವಾಸಕ್ಕೆ ಬೇಕಾದ ಎಲ್ಲ ಅಗತ್ಯತೆಗಳನ್ನು ಪೂರೈಸಿಕೊಂಡಿದ್ದಾರೆ.

ಇಲ್ಲಿ ಹೆಜ್ಜೆ ಹೆಜ್ಜೆಗೂ ಕೇವಲ ಅಡುಗೆಯ ಲಂಗರ್ ಗಳು ಮಾತ್ರವಲ್ಲ, ಆರೋಗ್ಯ ಚಿಕಿತ್ಸಾ ಕೇಂದ್ರಗಳು, ಮೆಡಿಕಲ್ ಶಾಪ್ ಗಳು, ಟೀ ಸ್ಟಾಲ್, ಪಾಯಸದ ಸ್ಟಾಲ್, ಬಟ್ಟೆಗಳನ್ನ ತೊಳೆದುಕೊಡುವುದು, ಸಾಮೂಹಿಕವಾಗಿ ಉಳಿದುಕೊಳ್ಳುವವರಿಗೆ ವ್ಯವಸ್ಥೆ, ಹೀಗೆ ಇವೆಲ್ಲವುಗಳನ್ನು ಮಾಡುತ್ತಿರುವವರು ಸ್ವಯಂ ಸೇವಕರು ಸೇವೆಯ ಹೆಸರಿನಲ್ಲಿ, ಸಿಂಗು ಗಡಿಯಲ್ಲಿ ಪಂಜಾಬ್ ಮತ್ತು ಹರಿಯಾಣದ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಿಕ್ ಸಮುದಾಯದಲ್ಲಿ ಸೇವೆ ಮಾಡುವುದೆಂದರೆ ಅದೊಂದು ಪುಣ್ಯದ ಕೆಲಸವಿದ್ದಂತೆ ಅದಕ್ಕಾಗಿ ಜನ ಸ್ವಯಂ ಸ್ಪೂರ್ತಿಯಿಂದ ಈ ಹೋರಾಟದಲ್ಲಿ ಭಾಗವಹಿಸಿ ತಮ್ಮ ಕೈಲಾದ ರೀತಿಯಲ್ಲಿ ಸಹಾಯ ಮಾಡುತ್ತಾರೆ. ಇದಕ್ಕಾಗಿ ತಮ್ಮ ಮನೆಮಂದಿ ಮಕ್ಕಳನ್ನೆಲ್ಲಾ ತೊಡಗಿಸುತ್ತಾರೆ. ಚಿಕ್ಕವಯಸ್ಸಿನಲ್ಲೇ ಮಕ್ಕಳಿಗೆ ಸೇವಾ ಮನೋಭಾವವನ್ನು ಕಲಿಸುತ್ತಾರೆ.

ನಾವು ಸುತ್ತಾಡಿದ 4-5 ಕಿಲೋಮೀಟರ್ ನಲ್ಲೇ ಸುಮಾರು 15 ಕ್ಕೂ ಹೆಚ್ಚು ಊಟದ ಮನೆಗಳು (ಲಂಗರ್), 2 ಹತ್ತು ಹಾಸಿಗೆಗಳ ಟೆಂಟ್ ಆಸ್ಪತ್ರೆ, 5-6 ಔಷದ ಕೇಂದ್ರಗಳು, ಎರಡು ಸಾಮೂಹಿಕ ಉಳಿಯುವ ವ್ಯವಸ್ಥೆ ಮತ್ತು ನಾಲ್ಕು ಬಹಿರಂಗ ವೇದಿಕೆಗಳು ಎರಡು ವೇದಿಕೆಯಲ್ಲಿ ಭಾಷಣಗಳು ನಡೆಯುತ್ತಿದ್ದರೆ ಒಂದರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತೊಂದರಲ್ಲಿ ಧಾರ್ಮಿಕ ಪ್ರವಚನ ನಡೆಯುತ್ತಿತ್ತು. ಒಂದೆರಡು ಕಡೆ ಪುಸ್ತಕದ ಅಂಗಡಿಗಳನ್ನೂ ನಾವು ದೆಹಲಿಯಿಂದ ಪ್ರವೇಶಪಡೆದ ಗಡಿಯ ಪ್ರಾರಂಬದಲ್ಲೆ ನೂರಾರು ಶೌಚಾಲಯಗಳ ಗಾಡಿಗಳನ್ನು ನಿಲ್ಲಿಸಲಾಗಿತ್ತು ಇವುಗಳನ್ನು ದಿಲ್ಲಿ ಸರ್ಕಾರ ಕಳುಹಿಸಿಕೊಟ್ಟಿದೆ ಎಂದು ಗೊತ್ತಾಯಿತು.

ಇವೆಲ್ಲವುಗಳ ಮಿಶ್ರಣ ಒಂದು ಪರಿಪೂರ್ಣತೆಯನ್ನು ತೋರಿಸುತ್ತಿತ್ತು.

ನಾವು ಪ್ರವೇಶ ಪಡೆದ ಪ್ರಾರಂಭದಲ್ಲೇ ಮೊಹಾಲಿಯಿಂದ ಕಾರಿನಲ್ಲಿ ಬಂದಿದ್ದ ಒಬ್ಬ ರೈತ ತನ್ನ ಕಾರನ್ನೇ ಮನೆಯನ್ನಾಗಿ ಮಾಡಿಕೊಂಡು ಇಲ್ಲಿದ್ದಾರೆ. ಇದು ವಿಶೇಷವೇನಲ್ಲ ಆದರೆ ಅವರು ತಮ್ಮ ಕಾರಿನ ಮುಂದೆ ಕೆಲವರ ಪ್ರತಿಕೃತಿಗಳನ್ನ ಮಾಡಿ (ಬೆದರು ಬೊಂಬೆ) ಅವುಗಳಿಗೆ ಭಾವಚಿತ್ರಗಳನ್ನು ಅಂಟಿಸಿ ಅವರುಗಳ ಕರಾಳ ಮುಖಗಳ ಗುಣಗಾನ ಮಾಡುವ ಬರವಣಿಗೆಗಳನ್ನು ಸ್ವತಃ ಕೈಲ್ಲಿ ಬರೆದು ಬಂದವರಿಗೆಲ್ಲ ಅದನ್ನ ವಿವರಿಸುತ್ತಿದ್ದರು. ಅದರಲ್ಲಿ ನರೇಂದ್ರ ಮೋದಿ, ಅಮಿದ್ ಶಾ, ಯೋಗಿ ಆದಿತ್ಯ, ಕಟ್ಟರ್, ಕಂಗಣ, ಮುಂತಾದವರಿದ್ದರು (ಇವರುಗಳ ಬಗ್ಗೆ ರೈತರು ಹೇಳಿದನ್ನ ಪ್ರತ್ಯೇಕವಾಗಿ ವರದಿ ಮಾಡುತ್ತೇನೆ)



ಭವಿಷ್ಯ ಟ್ರಾಕ್ಟರ್ ಗಳಲ್ಲಿರುವವರೆಲ್ಲ ಒಂದು ಕಡೆ ಬಂದರೆ ಅವರನ್ನೆಲ್ಲ ಸಮಾವೇಶಗೊಳಿಸಲು ಜಾಗವೇ ಸಾಲುವುದಿಲ್ಲ. ಅದು ದೊಡ್ಡ ಸಂಖ್ಯೆಯಲ್ಲಿ ರೈತರಿದ್ದಾರೆ ಇದು ಲಕ್ಷಗಳ ಗಡಿಗಳನ್ನ ಯಾವತ್ತೋ ದಾಟಿದೆ.



ಒಂದು ಟ್ರಾಕ್ಟರ್ ಟೆಂಟ್ ನ ಬಳಿ ಹೋಗಿ ಕೆಲವರನ್ನು ಮಾತನಾಡಿಸಿದೆವು ಅದರಲ್ಲಿ ಕುಳಿತಿದ್ದ ಹಿರಿಯರಿಗೆ 71 ವರ್ಷಗಳು ಅವರು ಈ ಪ್ರತಿಭಟನೆ ಪ್ರಾರಂಭವಾದ ನವೆಂಬರ್ 26 ರಿಂದ ಇಲ್ಲಿದ್ದಾರೆ. ಅವರು ತಮ್ಮ ಕೈಯಲ್ಲಿ ಭಗತ್ ಸಿಂಗ್ ನ ಒಂದು ಪೋಸ್ಟರ್ ಹಿಡಿದಿದ್ದು ಅವರ ಮಾತು ಎಷ್ಟು ಸ್ಪಷ್ಟವಾಗಿತ್ತೆಂದರೆ ಕೇಂದ್ರ ಸರ್ಕಾರ ರೈತ ವಿರೋಧಿ ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವವರೆಗೂ ನಾವು ಇಲ್ಲಿಂದ ಒಂದಿಚೂ ಹಿಂದೆ ಸರಿಯುವುದಿಲ್ಲ ಬದಲಾಗಿ ಶಾಂತಿಯುತವಾಗಿ ಮುಂದೆ ಹೋಗಲು ಪ್ರಯತ್ನಿಸುತ್ತೇವೆ ಎಂದರು. ನಮ್ಮನ್ನು ಅವರ ಟ್ರಾಕ್ಟರ್ ಟೆಂಟ್ ನ ಮನೆಯೊಳಗೆ ಕರೆದು ಗೌರವಿಸಿ ತಿನ್ನಲು ಸಿಹಿಯನ್ನು (ಲಡ್ಡು) ಕೊಟ್ಟರು.

ನಾವು ಇಂದು ಇದ್ದ ಸರಿ ಸುಮಾರು 4-5 ತಾಸುಗಳಲ್ಲಿ ಮಾತನಾಡಿಸಿದವರಲ್ಲಿ ಕನಿಷ್ಠ 5-6 ಜನ ನಾವು ಕರ್ನಾಟಕದವರು ಎಂದಕೂಡಲೇ ಅತ್ಯಂತ ಖುಷಿಪಟ್ಟರು ಮತ್ತು ನಮಗೆ ಕೇಳಿದ ಸಾಮಾನ್ಯ ಪ್ರಶ್ನೆ ಎಂದರೆ ಈ ಹೋರಾಟದ ಬಗ್ಗೆ ಕರ್ನಾಟಕದಲ್ಲಿ ಮಾಧ್ಯಮಗಳು ಸುದ್ದಿ ಮಾಡುತ್ತಿವೆಯಾ? ಮಾಡ್ತಿದ್ದರೆ ಏನೆಂದು ಮಾಡುತ್ತಿವೆ ಎಂದು.

ಜೊತೆಗೆ ಅವರ ಮನವಿ ಏನೆಂದರೆ "ಇದು ದೇಶಪ್ರೇಮಿ ಹೋರಾಟ ರೈತರ ಬಗ್ಗೆ ಪ್ರೀತಿ ಇರುವವರು, ಭಾರತದಲ್ಲಿ ಕೃಷಿ ಉಳಿಸಬೇಕು ಎನ್ನುವವರೆಲ್ಲ ಈ ಹೋರಾಟಕ್ಕೆ ಬಂದು ಕೈ ಜೋಡಿಸಿ" .ಎಂದರು

■

ಹೋರಾಟಗಾರರ ಬಯಲು ಶಾಲೆಯಾಗಿ ದೆಹಲಿಯ ರೈತ ಚಳುವಳಿ..... ಪುಟ 6 ರಿಂದ

ನಿರತ ರೈತರಲ್ಲಿರುವ ಸ್ಪಷ್ಟ ಗ್ರಹಿಕೆ.

2. ಚಳವಳಿಯು ದೀರ್ಘಕಾಲ ನಡೆಯಬೇಕಾಗಬಹುದೆಂಬ ಸ್ಪಷ್ಟ ಅಂದಾಜಿನೊಂದಿಗೆ ಮಾಡಿಕೊಂಡಿರುವ ತಾತ್ಕಾಲಿಕ ಗುಡಾರ ಸಾಧನ, ಸಂಚಾರ ಸಾಧನ, ಮತ್ತು ಸಂವಹನ-ಪ್ರಚಾರ ಸಾಧನಗಳ ಏರ್ಪಾಡಿನ ಹಿಂದೆ ಇರುವ ದೂರದೃಷ್ಟಿ ಮತ್ತು ಯೋಜನಾಶಿಸ್ತು.
3. ಮಾನವ ಸಂಪನ್ಮೂಲ ಮತ್ತು ಜೀವನಾವಶ್ಯಕ ವಸ್ತುಗಳ ಸಂಗ್ರಹಣೆ ಮತ್ತು ನಿರ್ವಹಣೆ- ಅಂದರೆ ಜನಬಲ ಮತ್ತು ಧನಬಲದ ಯೋಜನಾಬದ್ಧ ಕ್ರೋಢೀಕರಣ ಹಾಗೂ ವಿನಿಯೋಗ.
4. ಇವೆಲ್ಲಕ್ಕಿಂತಾ ಮುಖ್ಯವಾಗಿ, ಬೇರೆ ಬೇರೆ ಪ್ರದೇಶಗಳ, ಬೇರೆ ಬೇರೆ ಆರ್ಥಿಕ ಬಲದ, ಬೇರೆ ಬೇರೆ ಸೈದ್ಧಾಂತಿಕ ಸೂಕ್ಷ್ಮ ಭಿನ್ನತೆಗಳ ಹಿನ್ನೆಲೆಯಿಂದ ಬಂದ 540ಕ್ಕೂ ಹೆಚ್ಚಿನ ಸಂಖ್ಯೆಯ ರೈತ ಸಂಘಟನೆಗಳಲ್ಲಿ ಕಾಣುವ ಭಾವೈಕ್ಯತೆ, ಭೌತಿಕ ಒಗ್ಗಟ್ಟು ಮತ್ತು ಮಾನಸಿಕ ಪ್ರಬುದ್ಧತೆ.
5. ಚಳುವಳಿಯನ್ನು ಮುನ್ನೆಡೆಸುತ್ತಿರುವ ಮುಖಂಡರಲ್ಲಿರುವ ಅನುಭವಜನ್ಯ ಜ್ಞಾನ ರಣವ್ಯೂಹ, ರಣತಂತ್ರ, ಬದಲಾಗುವ ಸಂದರ್ಭಕ್ಕೆ ತಕ್ಕಂತೆ ಚಳುವಳಿಯ ಸ್ವರೂಪವನ್ನು ಹೊಂದಿಸಬಲ್ಲ ಹೋರಾಟಪ್ರತಿಭೆ ಎಲ್ಲೇ ನಡೆಸಬಹುದಾದ ಯಾವುದೇ ಆಂದೋಲನಕ್ಕೆ ಆದರ್ಶಪ್ರಾಯವಾಗಿದೆ.
6. ವಯೋಸಹಜ ಮಿತಿಗಳನ್ನು ಲೆಕ್ಕಿಸದೆ ಚಳುವಳಿಯಲ್ಲಿ ನಿರತವಾಗಿರುವ ಜನರಿಗೆ, ಅವರ ನೇತಾರರು ಮತ್ತು ಹೋರಾಟದ ಗುರಿಯ ಬಗೆಗಿರುವ ಅಚಲ ವಿಶ್ವಾಸ, ದೃಢತೆ, ಕಷ್ಟ ಸಹಿಷ್ಣುತೆ, ಧಾರಣಸಾಮರ್ಥ್ಯ, ಮತ್ತು ವ್ಯಕ್ತಿಗಳ ದೈಹಿಕ-ಮಾನಸಿಕ ಸಾಮರ್ಥ್ಯಗಳನ್ನು ಆಧರಿಸಿದ ಶ್ರಮವಿಭಜನೆಯ ಸಾಮುದಾಯಿಕ ಸೇವೆಗಳು ಹೋರಾಟದ ನಡುವೆಯೇ ಸಮಾಜವಾದೀ ಸಮಾಜದ ಚಲನಶೀಲ ಪ್ರತಿರೂಪವೊಂದನ್ನು ನಿರ್ಮಿಸಿವೆ.
7. ರ್‍ಯಾಡಿಕಲ್ ಆದ ಸೈದ್ಧಾಂತಿಕ ದೃಷ್ಟಿ, ಸರ್ಕಾರದ ಹಿಂಸಾತ್ಮಕ ಪ್ರಚೋದನೆಗೆ ಬಲಿಯಾಗದಂತೆ ಕಾಯ್ದುಕೊಳ್ಳುವ ಎಚ್ಚರ ಮತ್ತು ವಿವೇಕಯುತ ಸಂಯಮ, ಸಂಘಪರಿವಾರದಲ್ಲಿ ಮೈಗೂಡಿರುವ ಸುಳ್ಳು-ಕುಟಿಲತೆ-ವಂಚನೆಗಳನ್ನು, ದುರುಳ ಉದ್ದೇಶಗಳನ್ನು ಗ್ರಹಿಸಿ ನಿಷ್ಫಲಗೊಳಿಸುವ ಜಾಣ್ಮೆ ಇವೆಲ್ಲವೂ ಕೂಡಿಕೊಂಡು ಚಳುವಳಿಗೆ ಅನನ್ಯವಾದ 'ಶಸ್ತ್ರರಹಿತ ಮಿಲಿಟರಿ ಶಿಸ್ತ'ನ್ನು ತಂದುಕೊಟ್ಟಿವೆ.

ಇವೆಲ್ಲವೂ ಸೇರಿದ ಗ್ರಹಿಕೆ, ಆಲೋಚನೆ, ನಿರ್ಧಾರಗಳು ಹಂತ ಹಂತವಾಗಿ ಭೌತಿಕರೂಪದ ಚಳುವಳಿಯಾಗಿ ಸಂಘಪರಿವಾರದ ಕೋಮುವಾದೀ-ಫ್ಯಾಸೀವಾದೀ-ಕಾರ್ಪೊರೇಟ್ ಸರ್ಕಾರವನ್ನು, ತಾವೇ ಸರ್ಕಾರ, ನೇತಾರರು, ದೇಶ, ಎಂದೆಲ್ಲಾ ಭ್ರಮಿಸಿದ್ದ ವ್ಯಕ್ತಿಗಳನ್ನು ಅಸಹಾಯಕ ಪರಿಸ್ಥಿತಿಯ ಅಡಕತ್ತರಿಗೆ ಸಿಕ್ಕಿಸಿದೆ. ಈ ಇಕ್ಕಟ್ಟಿನಿಂದ ಪಾರಾಗಲು ಅತ್ಯುಚ್ಚ ನ್ಯಾಯಾಲಯದ ಮೊರೆ ಹೊಕ್ಕಿದೆ.

'ಜನರಿಂದ ಚಳುವಳಿಗಳು ಹುಟ್ಟುತ್ತವೆ, ಚಳುವಳಿಗಳಿಂದ ನೇತಾರರು ಬರುತ್ತಾರೆ' ಎಂದು ಹೇಳಿದ ರೋಸಾ ಲಗ್ಸುಂಬರ್ಗ್ ಅವರ ಮಾತಿನ ಪ್ರತ್ಯಕ್ಷ ನಿದರ್ಶನವಾಗಿ ಪ್ರಸ್ತುತ ರೈತ ಚಳುವಳಿಯು ನಮ್ಮ ಎದುರಿಗಿದೆ.

ಡಾ. ಅಂಬೇಡ್ಕರ್ ದಲಿತ ವಿಮೋಚನೆಗಾಗಿ ಹೇಳಿದ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ಸೂತ್ರವು ರೈತ ಚಳುವಳಿಯ ಅನುಭವದ ಹಿನ್ನೆಲೆಯಲ್ಲಿ ಎಲ್ಲ ಹೋರಾಟಗಾರರ ಮತ್ತು ಹೋರಾಟಗಳ ದಾರಿ ದೀಪವಾಗಿದೆ.

ಶಿಕ್ಷಣವೆಂದರೆ ಕೇವಲ ಪದವಿಗಳನ್ನು ಗಳಿಸುವುದಲ್ಲ. ಸಂಘಟನೆಯೆಂದರೆ ಕೇವಲ ಧಿಕ್ಕಾರ ಕೂಗುವ ಗುಂಪಲ್ಲ. ಹೋರಾಟವೆಂದರೆ ಕೇವಲ ಸಾಂಕೇತಿಕ ಧರಣಿ-ಮೆರವಣಿಗೆಗಳಲ್ಲ. ಇವಕ್ಕೆ ಮೂಲಭೂತವಾಗಿ ಬೇರೆಯದೇ ಆದ ಅರ್ಥಗಳಿವೆಯೆಂದು ದೆಹಲಿ ಗಡಿಗಳಲ್ಲಿ ದಿನ ದಿನವೂ ಹೆಚ್ಚುತ್ತಿರುವ ಭಾರತದ ರೈತಚಳುವಳಿಯು ತನ್ನ ವಿನೂತನ ಪ್ರತಿಭಟನಾ ವಿಧಾನಗಳ ಮೂಲಕ ಪ್ರತ್ಯಕ್ಷವಾಗಿ ತೋರಿಸುತ್ತಿದೆ.

ದೆಹಲಿಯ ಗಡಿಗಳಲ್ಲಿ ಚಳಿ-ಮಳೆಗಳಿಗೆ ಮೈಯೊಡ್ಡಿ ಕುಳಿತಿರುವ ಬಾಲ-ಯುವ-ಮಧ್ಯ ವಯಸ್ಕ- ರೈತನ-ರೈತಳ-ಅಜ್ಜ-ಅಜ್ಜಿ-ಹೀಗೆ ಯಾರ ಬಾಯಲ್ಲಿ ನೋಡಿದರೂ ಪೂಂಜಿಪತಿಗಳು' (ಬಂಡವಳಿಗರು), 'ಕಾರ್ಪೊರೇಟ್ ಕುಳಗಳು' ಮತ್ತು ಅವರ 'ಚೌಕಿದಾರ-ಪರಿವಾರಗಳ', ಸುಳ್ಳು ಮೋಸಗಳ ಬಗೆಗಿನ ಮಾತೇ. ಚಳುವಳಿನಿರತ ರೈತರ ವಿರುದ್ಧ ಆಳುವ ವರ್ಗಗಳು ಮತ್ತು ಅವುಗಳ ಕಾಲಾಳು-ದಳ್ಳಾಳಿಗಳ ವ್ಯವಸ್ಥಿತ ಅಪಪ್ರಚಾರದ ಖಂಡನೆಯೇ. ಅವರ ಸುಳ್ಳುಆರೋಪಗಳನ್ನು-ವಂಚನೆಯ ಮಾತುಗಳನ್ನು-ಕುಟಿಲ ತಂತ್ರಗಳನ್ನು ಬಯಲಿಗೆಳೆಯುವ ವಿವರಣೆಗಳೇ.

ತಾನು ದೇಶದ ಚೌಕೀದಾರನೆಂದೂ, ಪ್ರಧಾನ ಸೇವಕನೆಂದೂ ಹೇಳುವ ಭಾರತದ ಪ್ರಧಾನಿಯವರು ತಿಂಗಳಿಗೊಮ್ಮೆ ತಮ್ಮ 'ಮನದ ಮಾತ'ನ್ನು ಜನರಿಗೆಂದು ಬಿತ್ತರಿಸುತ್ತಾರೆ. ಅವರು ಬಡಜನರ ಖಾತೆಗಳಿಗೆ ಹಾಕಿದರೆಂದು ಹೇಳಲಾಗುವ ಹಣವನ್ನು 'ಜನ ಧನ' ಎಂದು ಕರೆದರು. ಅವರ ಕಲ್ಪನೆಯೆಲ್ಲಾ ಬರಿದಾದ'ಮೇಲೆ, ಈಚೆಗೆ ಅವರ 'ಮನದ ಮಾತಿ'ಗೆ ವಸ್ತುವನ್ನು ಒದಗಿಸಲು ಜನರ ಮನದಲ್ಲಿರುವುದನ್ನು ಅವರಿಗೆ ತಿಳಿಸಬೇಕೆಂದು ಜನರನ್ನು ವಿನಂತಿಸಲು ತೊಡಗಿದ್ದಾರೆ. ಈ ಮೂರೂ ಸೇರಿ ಅವರ ಬಾಯಲ್ಲಿ ಈಗ ಅದು 'ಜನ್-ಮನ್-ಧನ್' ಎಂದಾಗಿದೆ.

ಮತ್ತೊಂದು ಕಡೆ, ಈ ಪದಗಳ ಸರ್ಕಸ್ಸಿಗೆ ವ್ಯತಿರಿಕ್ತವಾದ ಆಚರಣೆಯ ಮಟ್ಟದಲ್ಲಿ ಭಾರತದ ಶಾಂತಿಪ್ರಿಯ ರೈತಾಪಿ ಜನರು ತಮ್ಮ ತನ್-ಮನ್-ಧನ್ ಗಳನ್ನು, ಮಾತ್ರವಲ್ಲ, ಜೊತೆಗೆ ಜೀವವನ್ನೂ ಚಳುವಳಿಗಾಗಿ ಅರ್ಪಿಸಿದ್ದಾರೆ. ತಮ್ಮ ತ್ಯಾಗ-ಬಲಿದಾನಗಳ ಮೂಲಕ ಇಡೀ ದೇಶವನ್ನೇ ಬಂಡವಳಿಗರಿಂದ ಪಾರುಮಾಡಬಲ್ಲ ಚಳುವಳಿ ಜ್ಞಾನವನ್ನು ಬೋಧಿಸುವ 'ಬಯಲು ಶಾಲೆ'ಯೊಂದನ್ನು ಹುಟ್ಟುಹಾಕಿದ್ದಾರೆ. ಭಾರತದ ರಾಜಧಾನಿಯ ಕೊರೆಯುವ ಚಳಿಗಿಂತಲೂ ಕಠಿಣ ಶೀತಲ ಪಾಷಾಣ ಹೃದಯವನ್ನು ಹೊಂದಿರುವ ಸಂಘಪರಿವಾರದ ಸರ್ಕಾರ ಮತ್ತು ಅದರ ಅಡಿಗಲ್ಲಾದ ಕಾರ್ಪೊರೇಟ್ ಬಂಡವಳಿಗರೊಂದಿಗೆ ಸೆಣಸುವುದು ಎಷ್ಟು ಕಠಿಣವೆಂಬುದನ್ನು ಪ್ರತ್ಯಕ್ಷವಾಗಿ ತೋರಿಸುತ್ತಿದ್ದಾರೆ. ಸತ್ಯವು ಸಂಕಷ್ಟಕ್ಕೆ ಸಿಲುಕಬಹುದು, ಆದರೆ ಅಂತಿಮವಾಗಿ ಗೆಲ್ಲುವುದು ಸತ್ಯವೇ ಎಂದು ದೃಢವಾಗಿ ನಂಬಿದ್ದಾರೆ. ಆಂದೋಲನದ ಉದ್ದೇಶಿತ ಗುರಿಯನ್ನು ತಲುಪುವವರೆಗೂ, ಅಂದರೆ ರೈತಘಾತುಕ 3 ಕೃಷಿಕಾನೂನುಗಳು ರದ್ದಾಗುವವರೆಗೂ ಚಳುವಳಿಯನ್ನು ನಿಲ್ಲಿಸುವುದಿಲ್ಲ ಎಂದು ಒಕ್ಕೊರಲಿನಿಂದ ಹೇಳುತ್ತಿದ್ದಾರೆ. ಇದು ಭಾರತದ ಜನಮನದ ಮಾತೂ ಆಗಿದೆ.

■

JANASHAKTHI KANNADA VARA PATRIKE January 18-24, 2021 Price: Rs. 10/- Date of Publication: 15 January 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಮೋದಿಯವರ ಅಡ್ಡಗೋಡೆಗಳನ್ನು ದಾಟಿದ ದೇಶಪ್ರೇಮಿ ಹೋರಾಟ

ದೆಹಲಿ ರೈತ ಚಳುವಳಿಯಲ್ಲಿ ಭಾಗವಹಿಸಿರುವ ರೈತ ನಾಯಕ ನವೀನ್ ಕುಮಾರ್ ಹಂಚಿಕೊಂಡಿರುವ ಹೋರಾಟದ ಅನುಭವದ ಮಾತುಗಳು

ನವದೆಹಲಿಯಿಂದ 40 ಕಿಲೋಮೀಟರ್ ದೂರ ಇರುವ ಹರಿಯಾಣ ಪಂಜಾಬ್ ನಡುವಣ ಇರುವ ಸಿಂಗು ಬಾರ್ಡರ್ ಗೆ ಸುಮಾರು 4 ಗಂಟೆಗೆ ತಲುಪಿದೆವು. ಗಡಿ ತಲುಪಿದ ಕೂಡಲೇ ನಮಗೆ ನಿಜವಾದ ಗಡಿಗಳ ಚಿತ್ರಣದಂತೆ ಕಂಡಿತು. ಗಡಿಗಳು ನಿರ್ಮಾಣಗೊಂಡಿವೆ.

ಇವು ದೇಶದ ಗಡಿಬಾಗಗಳಲ್ಲಿ ನಿರ್ಮಾಣಗೊಂಡವುಗಳಲ್ಲ ಬದಲಿಗೆ ದೇಶದ ಒಳಗೆ, ದೇಶದ ರಾಜಧಾನಿ ದೆಹಲಿಗೆ ಅನ್ನದಾತ ರೈತರು ಬರಬಾರದೆಂದು ಮೋದಿ ಸರ್ಕಾರ ನಿರ್ಮಾಣ ಮಾಡಿರುವ ಗಡಿಗಳಿವೆ. ತಂತಿಬೇಲಿಗಳಿವೆ, ದೊಡ್ಡ ದೊಡ್ಡ ಸಿಮೆಂಟ್ ಬ್ಲಾಕ್ ಗಳಿವೆ, ಕಂಟೈನರ್ ಗಳಿವೆ, ಮಣ್ಣು ತುಂಬಿದ ಟ್ರಕ್ ಗಳಿಂದ ಗಡಿಗಳನ್ನು ನಿರ್ಮಿಸಲಾಗಿದೆ. ದೆಹಲಿಯಿಂದ ಪ್ರವೇಶ ಪಡೆಯುವವರಿಗೆ ಇವುಗಳೇ ಮೊದಲಿಗೆ ಸ್ವಾಗತವನ್ನು ಕೋರುತ್ತವೆ. ಇವುಗಳ ಅಕ್ಕಪಕ್ಕದಲ್ಲಿ ನಿಂತಿರುವ ದೆಹಲಿ ಪೋಲೀಸರು ಮತ್ತು ಆರ್ಮಿಯವರು ಹಾಗೂ ಸಿ ಆರ್ ಪಿ ಎಫ್ ನವರು ತಮ್ಮ ವಾಹನಗಳ ಜೊತೆ ಟಿಯರ್ ಶೆಲ್ಸ್ ಮತ್ತು ಜಲಫಿರಂಗಿ ವಾಹನಗಳೊಂದಿಗೆ ಶಸ್ತ್ರಸಜ್ಜಿತರಾಗಿ ನಿಂತಿದ್ದರು ಇವರ ಲಾಠಿಗಳು ಬಂದೂಕುಗಳು ದೇಶಕ್ಕೆ ಅನ್ನ ಬೆಳೆದು ಕೊಡುವ ಅನ್ನದಾತನ ಎದೆಯಕಡೆಗೆ ಗುರಿಮಾಡಿದ್ದವು ಹೇಗಿದೆ ಭಾರತದ ವಾಸ್ತವ.

ಈ ಅಡ್ಡಗೋಡೆಗಳನ್ನ ದಾಟಿಕೊಂಡು ಮುಂದೆ ಹೋದರೆ ಮೊದಲಿಗೆ ಒಂದು ವೇದಿಕೆ ಆ ವೇದಿಕೆಯಲ್ಲಿ ಒಬ್ಬಳು ಹೆಣ್ಣುಮಗಳು ಭಾಷಣ ಮಾಡುತ್ತಿದ್ದಳು ನೂರಾರು ಜನ ಕುಳಿತು ಕೇಳುತ್ತಿದ್ದರು. ಆಕೆಯ ಒಂದು ಮಾತು ನನ್ನ ಗಮನ ಸೆಳೆಯಿತು "ಇಲ್ಲಿ ಪ್ರಧಾನಿ, ರಾಷ್ಟ್ರಪತಿಗಳು ಎಷ್ಟು ಜನ ಬೇಕಾದರು ಬಂದು ಹೋಗಬಹುದು ಆದರೆ ದೇಶ ಮಾತ್ರ ಒಂದೇ. ಅದು ಹಾಗೆ ಇರುತ್ತದೆ. ಆ ದೇಶಕ್ಕಾಗಿ ನಮ್ಮ ಹೋರಾಟ".

ಅಲ್ಲಿಂದ ಮುಂದೆ ಹೋದರೆ ಪ್ರತಿಭಟನೆಯ ನಿಜವಾದ ದರ್ಶನ ನಮಗಾಗುತ್ತದೆ ನಾಲ್ಕು ಪಥಗಳ ರಾಷ್ಟ್ರೀಯ ಹೆದ್ದಾರಿಯನ್ನ ಸಂಪೂರ್ಣ ತಮ್ಮ ವಶಕ್ಕೆ ಪಡೆದಿರುವ ರೈತರು ಆ ರಸ್ತೆಗಳ ಮೇಲೆ ತಮ್ಮ ಟ್ರ್ಯಾಕ್ಟರ್ ಗಳನ್ನ ನಿಲ್ಲಿಸಿಕೊಂಡು ಅವುಗಳನ್ನೇ ಮನೆಗಳನ್ನಾಗಿ ಮಾಡಿಕೊಂಡಿದ್ದಾರೆ. ಇಡೀ ಪ್ರತಿಭಟನೆಯ ಜಾಗ ಅಕ್ಷರಶಃ ಕದನಕಣವಾಗಿ ಮಾರ್ಪಟ್ಟಿತ್ತು. ಈ ಕದನ ಕಣ ನಿರ್ಮಾಣವಾಗಿ ಇಂದಿಗೆ ಸರಿಯಾಗಿ 50 ದಿನಗಳು ಕಳೆದಿದ್ದವು ಕರ್ನಾಟಕದಲ್ಲಿ ಎಲ್ಲರೂ ಇಂದು ಸಂಭ್ರಮದಿಂದ ಸಂಕ್ರಾಂತಿ ಆಚರಿಸಿದರೆ ಇಲ್ಲಿಯ ಪ್ರತಿಭಟನಾಕಾರ ರೈತರು ಕೇಂದ್ರ ಸರ್ಕಾರದ ಕೃಷಿ ಕಾನೂನುಗಳ ಪ್ರತಿಗಳನ್ನ ಸುಟ್ಟು ಆಚರಿಸಿದ್ದರು.





ಚಳುವಳಿಯ ಸಂಭ್ರಮ:

ಚಳುವಳಿಯನ್ನೂ ಸಂಭ್ರಮಿಸಬಹುದೆಂದು ನನಗೆ ಗೊತ್ತಾಗಿದ್ದೇ ಇಲ್ಲಿಗೆ ಬಂದು ಎಲ್ಲವನ್ನ ನೋಡಿದ ಮೇಲೆ. ನಮ್ಮ ಊರುಗಳಲೆಲ್ಲ ಕೇವಲ ಜಾತ್ರಾ ಮಹೋತ್ಸವಗಳಲ್ಲಿ ಮಾತ್ರ ನಾನು ಅಂತಹ ವಾತಾವರಣವನ್ನು ನೋಡಿದ್ದೇನೆ ಬಿಟ್ಟರೆ ಕೇರಳದಲ್ಲಿ ನಡೆದ ಸಿಪಿಐಎಂ ನ ಮಹಾಧಿವೇಶನದ ಬಹಿರಂಗ ಸಭೆಗಳಲ್ಲಿ ಭಾಗವಹಿಸಲು ಹೋದಾಗ ನನಗೆ ಈ ರೀತಿಯ ಅನುಭವವಾಗಿತ್ತು.

ಇಲ್ಲಿ ನಿರಂತರ ಅನ್ನ ದಾಸೋಹ ನಡೆಸಲು ಲೆಕ್ಕವಿಲ್ಲದಷ್ಟು ಅಡುಗೆ ಮನೆಗಳು (ಲಂಗರ್) ಗಳನ್ನ ನಿರ್ಮಿಸಿಕೊಳ್ಳಲಾಗಿದೆ. (ಲಂಗರ್ ಸಂಸ್ಕೃತಿ ಮತ್ತು ಅದರ ಇತಿಹಾಸದ ಬಗ್ಗೆ ಪ್ರತ್ತೇಕವಾಗಿ ಹೇಳುತ್ತೇನೆ) ಇಡೀ ಸಿಂಗು ಬಾರ್ಡರ್ ನಲ್ಲಿ ಸರಿ ಸುಮಾರು 22 ಕಿಲೋಮೀಟರ್ ಗಳ ಉದ್ದಕ್ಕೆ ಸುಮಾರು 60 ಸಾವಿರಕ್ಕೂ ಹೆಚ್ಚು ಟ್ರಾಕ್ಟರ್ ಗಳು ಬೀಡು ಬಿಟ್ಟಿವೆ. ಇದರಲ್ಲಿ ಬಂದಿರುವ ರೈತರು ತಮ್ಮ ತಮ್ಮ ಟ್ರ್ಯಾಕ್ಟರ್ ಗಳನ್ನು ಚಿಕ್ಕ ಮತ್ತು

ಪುಟ 15 ಕ್ಕೆ











JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**